ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 10 ಮಾರ್ಚ್ 3-9, 1997 ಬೆಲೆ ರೂ. 2.00

"ಉದಾರೀಕರಣ"ದ ಹಾದಿ ಬಿಡಲಾರದ ನಿರಾಶಾದಾಯಕ ಬಜೆಟ್

ಸಿರಿವಂತರಿಗೆ ಭಾರೀ ಭಕ್ಷೀಸು; ದೇಶದ, ಜನರ ಪ್ರಗತಿ ಸಾಧಿಸಲಾರದ ತಪ್ಪು ಕಾರ್ಯತಂತ್ರ

ಸಂಯುಕ್ತ ರಂಗ ಸರಕಾರದ ಎರಡನೇ ಬಜೆಟ್‌ಗೆ ಮಾಧ್ಯಮಗಳಲ್ಲಿ ಭಾರೀ ಹೊಗಳಿಕೆ ಬಂದಿದೆ. ಕಂಪನಿ ತೆರಿಗೆ, ವೈಯಕ್ತಿಕ ತೆರಿಗೆ, ಕಸ್ಟಮ್ಸ್ ಸುಂಕ, ಆಮದು ಸುಂಕಗಳಲ್ಲಿ ಕಡಿತಕ್ಕಾಗಿ ಉದ್ಯಮಿಗಳು ಹಣಕಾಸು ಮಂತ್ರಿಗಳನ್ನು ಹಾಡಿ ಹೊಗಳುತ್ತಿದ್ದಾರೆ. ವರಮಾನ ತೆರಿಗೆ ದರಗಳಲ್ಲಿ ಗಮನಾರ್ಹ ಕಡಿತದಿಂದ ಮಧ್ಯಮ ವರ್ಗಗಳವರೂ ಸಂತುಷ್ಟರಾಗಿದ್ದಾರೆ. ಗ್ರಾಮೀಣ ಅಭಿವೃದ್ಧಿಗೆ, ಕೃಷಿಗೆ ನೆರವು, ಇತ್ಯಾದಿಗಳಿಗೂ ಹೆಚ್ಚು ಹಣ ನೀಡಲಾಗಿದೆ ಎಂದು ಪ್ರಧಾನ ಮಂತ್ರಿಗಳು ಹೇಳಿಕೊಂಡಿದ್ದಾರೆ.

'ಸಂಯುಕ್ತ ರಂಗ'ದ ಮೊದಲ ಬಜೆಟ್ ಬಗ್ಗೆ ಪ್ರತಿಕ್ರಿಯಿಸುತ್ತಾ 'ಜನಪರತೆ ಮಾತಿನಲ್ಲಿದ್ದಷ್ಟು ಕೃತಿಯಲ್ಲಿ ಕಾಣುತ್ತಿಲ್ಲ' ಎಂದು ಸಿಪಿಐ(ಎಂ) ಪ್ರತಿಕ್ರಿಯಿಸಿದ್ದು 'ಐಕ್ಯರಂಗ' ಓದುಗರಿಗೆ ನೆನಪಿರಬಹುದು. ಇದೇ ಪ್ರಕ್ರಿಯೆ ಈ ವರ್ಷದಲ್ಲಿ ಮುಂದುವರಿದಿದೆ, ಐಎಂಎಫ್-ವಿಶ್ವಬ್ಯಾಂಕ್ ಹೇರಿರುವ 'ಉದಾರೀಕರಣ'ದ ಸಿದ್ಧಾಂತಕ್ಕೆ ಬದ್ಧತೆಯೂ ಅದೇ ರೀತಿ ಮುಂದುವರಿದಿದೆ ಎಂದು ಚಿದಂಬರಂರವರ ಎರಡನೇ ಬಜೆಟ್ ಬಗ್ಗೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಹೇಳಿದೆ. "ಹಣವಂತರಿಂದ ಸಂಪನ್ಮೂಲಗಳನ್ನು ಸಂಗ್ರಹಿಸುವ ಧೈರ್ಯ ತೋರಿಸಿ" ಎಂದು ಸಿಪಿಐ(ಎಂ) ನಮ ಕೇಂದ್ರ ಸಮಿತಿ ಪರ್ಯಾಯ ಮಾರ್ಗಗಳನ್ನು ಸೂಚಿಸಿದ್ದರೂ, ಪ್ರಖ್ಯಾತ ಆರ್ಥಿಕ ತಜ್ಞರೂ, ಸಂಪನ್ಮೂಲಗಳ ಗಣಿಯನ್ನೇ ತೋರುತ್ತೇವೆ ಬನ್ನಿ ಎಂದು ಒಂದು ಪಟ್ಟಿ ನೀಡಿದರೂ(ಪುಟ ೫ ನೋಡಿ) ಚಿದಂಬರಂರವರು ಐಎಂಎಫ್-ವಿಶ್ವಬ್ಯಾಂಕನ್ನೇ ಹಿಂಬಾಲಿಸುವ ದಾರಿ ಹಿಡಿದಂತಿದೆ. ಫೆಬ್ರವರಿ ೨೮ ರಂದು ಬಜೆಟ್ ಮಂಡನೆಯ ನಂತರ ಸಿಪಿಐ(ಎಂ) ಪೊಲಿಟ್ ಬ್ಯೂರೋ ನೀಡಿರುವ ಪತ್ರಿಕಾ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.

"ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ ಬಡಜನರ ಪರವಾಗಿ ನೀಡಿದ ಭರವಸೆಗಳಿಗೆ ತಾನು ಬದ್ಧ ಎಂದು ಹಣಕಾಸು ಮಂತ್ರಿಗಳು ಕಳಕಳಿ ವ್ಯಕ್ತಪಡಿಸಿದ್ದರೂ, ಅವರ ಬಜೆಟ್‌ನ ಸಾರಾಂಶ ಮಾತ್ರ ನಿರಾಶಾದಾಯಕವಾಗಿದೆ. ಗ್ರಾಮೀಣ ಅಭಿವೃದ್ಧಿಗೆ, ವಿದ್ಯುತ್, ಸಾರಿಗೆ ಮುಂತಾದ ಮೂಲಸೌಕರ್ಯಗಳ ವಲಯಕ್ಕೆ, ಶಿಕ್ಷಣ, ಆರೋಗ್ಯ ಮುಂತಾದ ಸಾಮಾಜಿಕ ವಲಯಕ್ಕೆ ಸಾಕಷ್ಟು ಹಣವನ್ನು ನೀಡಿಲ್ಲ ಮತ್ತು 1991 ರಲ್ಲಿ ಆರಂಭಿಸಿದ ಉದಾರೀಕರಣದ ದಾರಿಯನ್ನು ತ್ಯಜಿಸುವಲ್ಲಿಯೂ ಇದು ವಿಫಲವಾಗಿದೆ.

"ಸಿರಿವಂತರಿಗೆ ಭಕ್ಷೀಸು"

ಸರಕಾರಕ್ಕೆ ಬರುವ ಹಣ ಒಟ್ಟು ರಾಷ್ಟ್ರೀಯ ಆದಾಯದ ಒಂದು ಸಣ್ಣ ಪಾಲು ಮಾತ್ರವೇ ತೆರಿಗೆ ಆದಾಯವಾಗಿ, ಮುಖ್ಯವಾಗಿ ನೇರ ತೆರಿಗೆ ಆದಾಯವಾಗಿ ಸಂಗ್ರಹವಾಗುತ್ತದೆಂದು ಆತಂಕ ವ್ಯಕ್ತಪಡಿಸಿದರೂ, ಹಣಕಾಸು ಮಂತ್ರಿಗಳು ಇನ್ನಷ್ಟು ತೆರಿಗೆ ರಿಯಾಯ್ತಿಗಳನ್ನು, ಅದರಲ್ಲೂ ಸಿರಿವಂತರಿಗೇ ಹೆಚ್ಚಿನ ರಿಯಾಯ್ತಿ ನೀಡುವ, ಕಸ್ಟಮ್ಸ್ ಸುಂಕಗಳನ್ನು ಗಮನಾರ್ಹವಾಗಿ ಇಳಿಸುವ ದಾರಿಯನ್ನೇ ಆಯ್ದುಕೊಂಡಿದ್ದಾರೆ. ವೈಯಕ್ತಿಕ ತೆರಿಗೆಗಳಲ್ಲಿ ಮೂರನೇ ಒಂದಂಶದಷ್ಟು ಕಡಿತದಿಂದ ಬೊಕ್ಕಸಕ್ಕೆ ಕನಿಷ್ಠ 5000 ಕೋಟಿ ರೂಪಾಯಿಗಳಷ್ಟು ನಷ್ಟವಾಗಿರಬೇಕು. ಹಣಕಾಸು ಮಂತ್ರಿಗಳ ಭಾಷಣದಲ್ಲಾಗಲೀ, ಬಜೆಟ್ ಅಂಕೆ-ಸಂಖ್ಯೆಗಳಲ್ಲಾಗಲೀ ಇದರ ಪ್ರಸ್ತಾಪ ಕಾಣುತ್ತಿಲ್ಲ. ಬಹುಶಃ ದರ ಕಮ್ಮಿಯಾದ್ದರಿಂದ ಬಹಳ ಮಂದಿ ತೆರಿಗೆ ತೆರಲು ಮುಂದಾಗಬಹುದು ಎಂಬ ಅವಾಸ್ತವಿಕ ಅಂದಾಜಿನಿಂದ ಹೀಗೆ ಮಾಡಿರಬಹುದು. ಇಷ್ಟೇ ಅಲ್ಲ, ಕಂಪೆನಿ ತೆರಿಗೆ ದರಗಳನ್ನು ಇಳಿಸಲಾಗಿದೆ. ಅಧಿಕ ತೆರಿಗೆಯನ್ನು ರದ್ದು ಮಾಡಲಾಗಿದೆ. ಡಿವಿಡೆಂಡ್(ಲಾಭಾಂಶ) ಗಳಮೇಲಿನ ತೆರಿಗೆಯನ್ನು ಕೈ ಬಿಡಲಾಗಿದೆ.

ಬಂಡವಾಳ ಲಾಭದ ಮೇಲಿನ ತೆರಿಗೆಗಳನ್ನು ಅನಿವಾಸಿಗಳು ಹಾಗೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ ಕಮ್ಮಿ ಮಾಡಲಾಗಿದೆ. ನೇರ ತೆರಿಗೆಗಳ ವಲಯದಲ್ಲಿನ ಈ ರಿಯಾಯಿತಿಗಳು ಸಿರಿವಂತರಿಗೆ ನೀಡಿದ ಒಂದು ಗಮನಾರ್ಹ ಭಕ್ಷೀಸು.

ದೇಶೀ ಆರ್ಥಿಕವನ್ನು ವಿದೇಶೀ ಉತ್ಪಾದಕರಿಗೆ ತೆರೆದು ಕೊಡಬೇಕೆಂಬ ಉದಾರೀಕರಣ ಸಿದ್ಧಾಂತದ ಮತ್ತೊಂದು ಪ್ರಧಾನ ಅಂಶವನ್ನು ಈಡೇರಿಸಲು ಕೂಡಾ ಬಜೆಟ್ ಪ್ರಯತ್ನಿಸಿದೆ. ವಿಮಾ ವಲಯವನ್ನು ತೆರೆಯುವ ಪ್ರಕ್ರಿಯೆಯನ್ನು ಆರಂಭಿಸುವುದರೊಂದಿಗೇ ಒಟ್ಟು 2625 ಕೋಟಿ ರೂ.ಗಳಷ್ಟು ರೆವಿನ್ಯೂ ನಷ್ಟ ತಂದಿರುವ ಹಲವುರೀತಿಯ ಕಸ್ಟಮ್ಸ್ ಸುಂಕ ಕಡಿತಗಳನ್ನು ಸಾರಲಾಗಿದೆ. ಇದು ಸ್ಥಳೀಯ ಉದ್ದಿಮೆಗಳನ್ನು ನಾಶ ಮಾಡುವಂತಹ ರೀತಿಯ ಪ್ರಭಾವ ಬೀರದೆ ಇರಲು ಸಾಧ್ಯವಿಲ್ಲ. ವ್ಯಾಪಾರ ಕೊರತೆಯ ಮೇಲೂ ಇದು ಗಂಭೀರ ಪರಿಣಾಮ ಬೀರಲಿದೆ.

ತಪ್ಪು ಕಾರ್ಯತಂತ್ರ

ಈ ಎಲ್ಲಾ ರಿಯಾಯ್ತಿಗಳು ಒಟ್ಟಾಗಿ ಸಾರುವ ಸಂಗತಿಯೆಂದರೆ ಇನ್ನು ಮುಂದೆ ಸರಕಾರಿ ವಲಯದ ಹಣಕಾಸಿಗೆ ತೆರಿಗೆ ಆದಾಯವನ್ನು ಅವಲಂಬಿಸದೆ ಸರಕಾರವೇ ಮಾಡುವ ಬೆಲೆಯೇರಿಕೆಗಳಿಂದ ಬರುವ ಆದಾಯವನ್ನೇ ಹೆಚ್ಚೆಚ್ಚು ಅವಲಂಬಿಸುವ ಒಂದು ಕಾರ್ಯತಂತ್ರವನ್ನು ಅನುಸರಿಸುತ್ತಿರುವುದು. ಉದಾಹರಣೆಗೆ, ಒಂದೆಡೆ ರೈಲ್ವೇ ಸಾಗಾಣಿಕೆ ದರಗಳ ಹೆಚ್ಚಳದಿಂದ 1300 ಕೋಟಿ ರೂ. ಬರುತ್ತದೆ. ಜತೆಗೆ ಇದೇ ಬಜೆಟ್ ಏರಿಸುವ ಅಂಚೆದರಗಳ ಏರಿಕೆಯಿಂದ 300 ಕೋಟಿ ರೂ. ಹೆಚ್ಚು ಆದಾಯ ಬರುತ್ತದೆ. ಅತ್ತ ತೆರಿಗೆ ಪ್ರಸ್ತಾವಗಳಿಂದ ಆಗುವ ನಿವ್ವಳ ನಷ್ಟ 1725 ಕೋಟಿ ರೂ. ಎಂದು ಹಣಕಾಸು ಮಂತ್ರಿಗಳೇ ಲೆಕ್ಕ ಹಾಕಿದ್ದಾರೆ.

ಆದರೆ ಇದು ಒಂದು ತಪ್ಪು ಕಾರ್ಯತಂತ್ರ. ಏಕೆಂದರೆ ಮೊದಲನೆಯದಾಗಿ, ಇದು ಹಣದುಬ್ಬರವನ್ನು ಹೆಚ್ಚಿಸುತ್ತದೆ, ಎರಡನೆಯದಾಗಿ, ಸಾಕಷ್ಟು ತೆರಿಗೆ ಸಂಗ್ರಹದ ಪ್ರಯತ್ನ ಮಾಡದೆ ಕೇಂದ್ರ ಯೋಜನಾ ಬಾಬ್ತುಗಳಿಗೆ ಬೇರೆ ರೀತಿಗಳಿಂದ ಹೊಂದಿಸುವ ಹಣವನ್ನೇ ಅವಲಂಬಿಸಿದರೆ ಕಳೆದ ವರ್ಷ ಆದಂತೆ ಬಹಳಷ್ಟು ಅದು ಕಮ್ಮಿ ಬೀಳುವ ಸಾಧ್ಯತೆಯಿದೆ. 1996-97 ರ ಕೇಂದ್ರ ಯೋಜನಾ ಬಾಬ್ತಿನ ಹಣ ಬಜೆಟ್‌ನಲ್ಲಿ 87086 ಕೋಟಿ ರೂಗಳಿದ್ದರೂ ಪರಿಷ್ಕೃತ ಅಂದಾಜು 77518 ಕೋಟಿ ರೂ.ಗಿಳಿದಿದೆ. ಈ ವರ್ಷದ ಬಜೆಟ್‌ನಲ್ಲಿ ಕೇಂದ್ರ ಯೋಜನಾ ಬಾಬ್ತಿಗೆ ಹಾಗೂ ಗ್ರಾಮೀಣ ಅಭಿವೃದ್ಧಿಯಂತಹ ನಿರ್ದಿಷ್ಟ ವಲಯಗಳಿಗೆ ನೀಡಿರುವ ಹಣದಲ್ಲಿ ಗಮನಾರ್ಹ ಹೆಚ್ಚಳವಾಗಿದೆಯೆನ್ನುವಾಗ ಈ ವರ್ಷ ಇಟ್ಟಿರುವ ಹಣವನ್ನು ಕಳೆದ ವರ್ಷದ ಬಜೆಟ್‌ನಲ್ಲಿ ಇಟ್ಟಿದ್ದ ಮೊತ್ತದೊಂದಿಗೆ ಹೋಲಿಸದೆ, ಮೇಲೆ ಹೇಳಿದಂತೆ ಕಮ್ಮಿಯಾಗಿರುವ ಪರಿಷ್ಕೃತ ಅಂದಾಜುಗಳೊಡನೆ ಹೋಲಿಸಿ ಹೇಳಲಾಗಿದೆ. ಮೂರನೇಯದಾಗಿ, ಹೀಗೆ ಈ ಸಂಪನ್ಮೂಲ ಕಮ್ಮಿ ಬಿದ್ದಾಗ ಮೂಲ ಸೌಕರ್ಯಗಳಂತಹ ನಿರ್ಣಾಯಕ ವಲಯಗಳಲ್ಲಿ ಹಣ ತೊಡಗಿಸಲು ಬಹುರಾಷ್ಟ್ರೀಯ ಕಂಪೆನಿಗಳನ್ನು ಅಂಗಲಾಚುವಂತಹ ಹತಾಶ ಪರಿಸ್ಥಿಯನ್ನುಂಟು ಮಾಡುತ್ತದೆ. ಉದಾಹರಣೆಗೆ, ಕಳೆದ ವರ್ಷ ಒಎನ್‌ಜಿಸಿ (ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿ)ಗೆ 6180 ಕೋಟಿ ರೂ.ಗಳ ಯೋಜನಾ ಹೂಡಿಕೆ ನೀಡಲಾಗುವುದೆಂದು ಬಜೆಟ್‌ನಲ್ಲಿ ಹೇಳಲಾಗಿತ್ತು. ಆದರೆ ಪರಿಷ್ಕೃತ ಅಂದಾಜುಗಳಲ್ಲಿ ಅದನ್ನು 4457 ಕೋಟಿ ರೂಗಳಿಗೆ ಇಳಿಸಲಾಯಿತು. ಇದರ ಪರಿಣಾಮವಾಗಿ ದೇಶೀ ಕಚ್ಚಾ ತೈಲ ಉತ್ಪಾದನೆಯಲ್ಲಿ ತೀವ್ರ ಇಳಿತವಾಗಿರುವುದರಿಂದ ಹಣಕಾಸು ಮಂತ್ರಿಗಳು ಭಾರತದ ಮತ್ತು ವಿದೇಶಗಳ ತೈಲ ಶೋಧನಾ ಕಂಪನಿಗಳಿಗೆ ಏಳು ವರ್ಷಗಳ ತೆರಿಗೆ ರಜಾ ಮುಂತಾದ ಹಲವಾರು ರಿಯಾಯಿತಿಗಳನ್ನು ನೀಡುವುದಾಗಿ ಹೇಳಿದ್ದಾರೆ. ಇಂತಹ ಕಾರ್ಯತಂತ್ರದ ಪರಿಣಾಮ ಏನು ಎಂಬುದನ್ನು ಈ ಹಿಂದೆ ಸರಕಾರ ಇಂತಹ ಧೋರಣೆಗಳೊಂದಿಗೆ ಮಾಡಿದ ಪ್ರಯೋಗಗಳ ಬಗ್ಗೆ ಮಹಾ ಲೆಕ್ಕ ಪರಿಶೋಧಕರು(ಸಿಎಜಿ) ಸರಕಾರವನ್ನು ಎಂತಹ ಕಠಿಣ ಟೀಕೆಗೊಳಪಡಿಸಿದ್ದಾರೆ ಎಂಬುದನ್ನು ಪರಿಶೀಲಿಸಿದಾಗ ಗೊತ್ತಾಗುತ್ತದೆ.

ಈ ಬಜೆಟ್ ಮತ್ತೊಂದು ಗಮನಾರ್ಹ ರೀತಿಯಲ್ಲೂ ಉದಾರೀಕರಣ ಸಿದ್ಧಾಂತವನ್ನು ಬಿಂಬಿಸಿದೆ. 'ಬಂಡವಾಳ ಖಾತೆ ಪರಿವರ್ತನೀಯತೆ' ಈಗಲೂ ದೇಶದ "ನೆಚ್ಚಿನ ಗುರಿ" ಎಂದು ಈ ಬಜೆಟ್ ಸಾರಿದೆ. "ಸಮಾನ ಕನಿಷ್ಠ ಕಾರ್ಯ ಕ್ರಮ"ದಲ್ಲಂತೂ ಈ "ನೆಚ್ಚಿನ ಗುರಿ"ಯ ಮಾತೇ ಇಲ್ಲ. ಒಂದು ವೇಳೆ ಈ ಗುರಿ ಈಡೇರಿದರೆ ಅಂತರ್ರಾಷ್ಟ್ರೀಯ ಸಟ್ಟಾಕೋರರ ಲೂಟಿಗಳಿಗೆ ಈ ದೇಶವನ್ನು ತೆರೆದಂತಾಗುತ್ತದೆ.

ಈ ಬಾರಿಯೂ ರೈಲ್ವೇ ಇಲಾಖೆಗೆ ಬಜೆಟ್ ಬೆಂಬಲದಲ್ಲಿ ಕಡಿತದ ಪ್ರತಿಗಾಮಿ ನೀತಿ

ಸಂಸತ್ತಿನಲ್ಲಿ ಫೆಬ್ರವರಿ 26 ರಂದು ಮಂಡಿಸಿದ ರೈಲ್ವೇ ಬಜೆಟ್ ಜನಸಾಮಾನ್ಯರ ಮೇಲೆ ಹೇರುವುದನ್ನು ತಪ್ಪಿಸಲು ಪ್ರಯತ್ನಿಸಿದೆ. ಸಾಮಾನ್ಯ ಎರಡನೇ ದರ್ಜೆ ಪ್ರಯಾಣ ದರಗಳಲ್ಲಿ ಹಾಗೂ ಸೀಜನ್ ಟಿಕೆಟ್ ದರಗಳಲ್ಲಿ ಏರಿಕೆ ಮಾಡಿಲ್ಲ. ಮೇಲ್ದರ್ಜೆಗಳಿಗೆ ಮಾತ್ರ 10% ಏರಿಕೆ ಮಾಡಲಾಗಿದೆ. ಆದರೆ ಸ್ಲೀಪರ್ ದರ್ಜೆಯಲ್ಲಿ 5% ಏರಿಕೆ ಅನಗತ್ಯವಾಗಿತ್ತು. ಏಕೆಂದರೆ ಈ ವರ್ಗದಲ್ಲಿ ಸೇವೆಯ ಮಟ್ಟ ಹದಗೆಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ರೈಲ್ವೇ ಬಜೆಟ್‌ಗೆ ಪ್ರತಿಕ್ರಿಯಿಸುತ್ತಾ ಅಭಿಪ್ರಾಯ ಪಟ್ಟಿದೆ.

ಸಾಗಾಣಿಕೆ ದರಗಳಲ್ಲಿ 12% ದಷ್ಟು ತೀವ್ರ ಏರಿಕೆಯಿದೆ. ಆಹಾರಧಾನ್ಯಗಳಂತಹ ಅಗತ್ಯ ಸಾಮಾಗ್ರಿಗಳಿಗೆ ಏರಿಕೆಯಿಂದ ವಿನಾಯ್ತಿ ಇದ್ದರೂ ಈ ಕ್ರಮ ಹಣದುಬ್ಬರದ ಬೆಂಕಿಗೆ ಇನ್ನಷ್ಟು ತುಪ್ಪ ಸುರಿಯುತ್ತದೆ ಎಂದು ಸಿಪಿಐ(ಎಂ) ವಿರೋಧಿಸಿದೆ.

ಈಶಾನ್ಯ ಭಾರತ ಮತ್ತಿತರ ಹಿಂದುಳಿದ ಪ್ರದೇಶಗಳಲ್ಲಿ ರೈಲ್ವೇಯ ಅಭಿವೃದ್ಧಿ ಕುರಿತಂತೆ ಕಳೆದ ವರ್ಷ ತೋರಿದ ಮುತುವರ್ಜಿಯನ್ನು ಈ ಬಾರಿಯೂ ಮುಂದುವರಿಸಿರುವುದನ್ನು ಸ್ವಾಗತಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ರೈಲ್ವೇ ಇಲಾಖೆಯಲ್ಲಿ ದುಡಿಯುತ್ತಿರುವ 56 ಸಾವಿರ ಕ್ಯಾಶುವಲ್ ಕಾರ್ಮಿಕರನ್ನು ಮುಂದಿನ ಹಣಕಾಸು ವರ್ಷದ ಅಂತ್ಯದೊಳಗೆ ಖಾಯಂ ಮಾಡುವುದಾಗಿ ರೈಲ್ವೇ ಮಂತ್ರಿಗಳು ವಚನ ನೀಡಿರುವುದನ್ನು ಕೂಡಾ ಹಿಂದಿನ ಕೇಂದ್ರ ಸರಕಾರಗಳ ನಿಲುವಿಗಿಂತ ಭಿನ್ನವಾದ ನಿಲುವು ಎಂದು ಸ್ವಾಗತಿಸಿದೆ.

ಈ ರೈಲ್ವೇ ಬಜೆಟ್ 1997-98 ರ ವಾರ್ಷಿಕ ಯೋಜನಾ ಮೊತ್ತವನ್ನು ಕಳೆದ ವರ್ಷದ ಮೊತ್ತವಾದ 8300 ಕೋಟಿ ರೂಗಳಿಗೆ ಮಿತಗೊಳಿಸಿದೆ. ಇದು ದುರದೃಷ್ಟಕರ ಎಂದಿರುವ ಸಿಪಿಐ(ಎಂ) ರೈಲ್ವೇಯ ಅಭಿವೃದ್ಧಿಗೆ ಸಾಕಷ್ಟು ಕೇಂದ್ರ ಬಜೆಟ್ ಬೆಂಬಲ ನೀಡದ್ದರಿಂದ ಹೀಗಾಗುತ್ತಿದೆ ಎಂದು ವಿಶ್ಲೇಷಿಸಿದೆ. ಈ ಪ್ರತಿಗಾಮಿ ಧೋರಣೆ ರೈಲ್ವೇ ವ್ಯವಸ್ಥೆಯ ನಿರ್ವಹಣೆ, ರೋಲಿಂಗ್ ಸ್ಟಾಕನ್ನು ಹೆಚ್ಚಿಸುವುದು ಹಾಗೂ ರೈಲ್ವೇಯ ಅಭಿವೃದ್ಧಿ ಚಟುವಟಿಕೆಗಳ ಮೇಲೆ ಬಹಳ ದುಷ್ಪರಿಣಾಮ ಬೀರುತ್ತದೆ. ತೈಲ ಆಮದಿನ ಹೊರೆ ಹೆಚ್ಚುತ್ತಿರುವುದರಿಂದ ರಸ್ತೆ ಸಾಗಾಣಿಕೆಯ ಖರ್ಚು ಇನ್ನಷ್ಟು ಹೆಚ್ಚುತ್ತಿರುವಾಗ ರೈಲ್ವೇ ಜಾಲವನ್ನು ಬಲಗೊಳಿಸುವುದು ಹಾಗೂ ವಿಸ್ತರಿಸುವುದು ಇನ್ನಷ್ಟು ಅಗತ್ಯವಿರುವಾಗ ಇಂತಹ ಧೋರಣೆ ಸರಿಯಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಬಗ್ಗೆ ಮರು ಪರಿಶೀಲನೆ ನಡೆಸಿ ರೈಲ್ವೇಗೆ ನೀಡುವ ಹಣವನ್ನು ಹೆಚ್ಚಿಸಬೇಕು ಎಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿದೆ.

ಕರ್ನಾಟಕಕ್ಕೆ ಹೊಸ ರೈಲುಗಳು-ಮಾರ್ಗಗಳು

ಬೆಂಗಳೂರಿನಿಂದ ದೆಹಲಿಗೆ(ಹುಬ್ಬಳ್ಳಿ ಮೂಲಕ), ಬೆಂಗಳೂರಿನಿಂದ ವಾಸ್ಕೋಗೆ ನೂತನ ಎಕ್ಸ್ ಪ್ರೆಸ್ ರೈಲುಗಳು, ಬೆಂಗಳೂರಿನಿಂದ ಕೊಯಮತ್ತೂರಿಗೆ ಸೂಪರ್ ಫಾಸ್ಟ್ ಹಗಲು ರೈಲು, ಗುವಾಹಟಿಗೆ ವಾರಕ್ಕೊಮ್ಮೆ ಹೋಗುವ ಬೆಂಗಳೂರು-ಹೌರಾ ಎಕ್ಸ್ ಪ್ರೆಸ್ ಹಾಗೂ ಕೊಂಕಣ ರೈಲು ಆರಂಭವಾದ ನಂತರ ಮಂಗಳೂರಿನಿಂದ ಮುಂಬೈಗೆ ರೈಲು ಇವು ಈ ವರ್ಷದ ರೈಲ್ವೇ ಬಜೆಟ್‌ನಲ್ಲಿ ಕರ್ನಾಟಕಕ್ಕೆ ನೀಡಿರುವ ಹೊಸ ರೈಲುಗಳು. ಅಲ್ಲದೆ ಹಾಸನ-ಸಕಲೇಶಪುರ, ಮೈಸೂರು-ಹೊಳೆನರಸಿಪುರ, ಮೆಟ್ಟುಪಾಳ್ಯದವರೆಗೆ ಮೈಸೂರು-ಚಾಮರಾಜನಗರ ಮಾರ್ಗದ ವಿಸ್ತರಣೆಗೆ ಹಾಗೂ ಗೇಜ್ ಪರಿವರ್ತನೆ ಮತ್ತತು ಬೆಂಗಳೂರಿನಿಂದ ಸತ್ಯಮಂಗಲ, ಬೀದರ್‌ನಿಂದ ಗುಲ್ಬರ್ಗ ಹಾಗೂ ಗಡವಾಲ್‌ನಿಂದ ರಾಯಚೂರಿಗೆ ಹೊಸ ಮಾರ್ಗ ನಿರ್ಮಾಣದ ಪ್ರಸ್ತಾಪವೂ ರೈಲ್ವೇ ಬಡೆಟ್‌ನಲ್ಲಿದೆ. ಇದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸ್ವಾಗತಿಸಿದೆ.

ಮುಖ್ಯಮಂತ್ರಿಗಳ ನಿವಾಸದ ಮುಂದೆ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಧರಣಿ ಕುಳಿತಿರುವ ಪಂಚಾಯತ್‌ರಾಜ್ ನೌಕರರು



ಪುಟ 2 ಆರ್ಥಿಕ ಸಮೀಕ್ಷೆ 96-97 ಒಂದು ನಾಚಿಕೆಗೆಟ್ಟ ಪ್ರಯತ್ನ

ಪುಟ 4 ತ್ರಿಪುರಾ: ಶಾಂತಿ ಮತ್ತು ಐಕ್ಯತೆಗಾಗಿ ಹೋರಾಟ

ಆರ್ಥಿಕ ಪ್ರಯತ್ನವನ್ನು ಕಾದುಕೊಳ್ಳಲಾರದ, ರಫ್ತು ಪ್ರಮಾಣವನ್ನು ಗಮನಾರ್ಹವಾಗಿ ಹೆಚ್ಚಿಸಲಾರದ, ಇಷ್ಟೆಲ್ಲಾ ಏಕೆ, ೧೦ ಕೋಟಿ ಡಾಲರುಗಳಷ್ಟು ವಿದೇಶೀ ಹಣವನ್ನು ಆಕರ್ಷಿಸಬೇಕೆಂಬ ಸರಕಾರದ ಪ್ರಮುಖ ಗುರಿಯನ್ನು ಈಡೇರಿಸಲಾಗದ ರಾವ್‌ಸಿಂಗ್ "ಸುಧಾರಣೆ"ಗಳನ್ನು ಇನ್ನಷ್ಟು ತೀವ್ರಗೊಳಿಸಬೇಕು ಎಂದು ಜನಗಳನ್ನು ನಂಬಿಸುವುದೇ ಈ ಕಸರತ್ತಿನ ಉದ್ದೇಶ.

ಆರ್ಥಿಕ ಸಮೀಕ್ಷೆ - 1996-97

ಅಸಮರ್ಥನೀಯವಾದುದನ್ನು ಸಮರ್ಥಿಸಿಕೊಳ್ಳುವ ನಾಚಿಕೆಗೆಟ್ಟ ಪ್ರಯತ್ನ

1996-97 ರ ಕೇಂದ್ರ ಸರಕಾರ ಆರ್ಥಿಕ ಸಮೀಕ್ಷೆಯಲ್ಲಿ ಆರ್ಥಿಕ ಬೆಳವಣಿಗೆಯ ಬಗ್ಗೆ ನೀಡಿರುವ ಅಂಕಿ-ಅಂಶಗಳು(ಬಾಕ್ಸ್ ನೋಡಿ) ರಾವ್-ಸಿಂಗರ "ಆರ್ಥಿಕ ಸುಧಾರಣೆ"ಗಳು ನಮ್ಮ ಆರ್ಥಿಕವನ್ನು ನಿಜವಾಗಿಯೂ ಸುಧಾರಿಸ ಬಲ್ಲವೇ ಎಂಬ ಬಗ್ಗೆ ವಿಮರ್ಶೆ ನಡೆಸುವಂತೆ ಪ್ರೇರೇಪಿಸ ಬೇಕಾಗಿತ್ತು. ಆದರೆ ಅದರ ಬದಲು ಸಂಯುಕ್ತ ರಂಗ ಸರಕಾರದ ಹಣಕಾಸು ಮಂತ್ರಿ ಚಿದಂಬರಂರವರ ಆರ್ಥಿಕ ಸಮೀಕ್ಷೆ ಯಾವುದೇ ನಾಚಿಕೆಯಿಲ್ಲದೆ ಆ ನೀತಿಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದೆ. **ಈ ಸಮೀಕ್ಷೆ ಯಲ್ಲಿ1994-95, 1995-96 ಹಾಗೂ 1996-97 ರ ಬೆಳವಣಿಗೆಗಳ ಮೇಲೆ ಗಮನ ಕೇಂದ್ರೀಕರಿಸಿ ಅದಕ್ಕೊಂದು ವಿಚಿತ್ರ ವ್ಯಾಖ್ಯೆ ನೀಡುವ ಪ್ರಯತ್ನ ನಡೆಸಲಾಗಿದೆ.**

ಮೊದಲನೆಯದಾಗಿ ಈ ಅವಧಿಯ "ಅತ್ಯುತ್ತಮ" ಆರ್ಥಿಕ ಪ್ರಗತಿಗೆ "1991-92 ಮತ್ತು 1992-93" ರಲ್ಲಿ ಅಂದರೆ ಆರಂಭದಲ್ಲಿ ಸುಧಾರಣೆಗೆ ಸಿಕ್ಕ ರಭಸವೇ ಕಾರಣವಂತೆ.

ಎರಡನೆಯದಾಗಿ, 1994-95 ರಿಂದ ಆರ್ಥಿಕ ಸುಧಾರಣೆಯ ವೇಗ ಗಮನಾರ್ಹವಾಗಿ ತಗ್ಗಿತು. ಇದಕ್ಕೆ ಕಾರಣ ಸಂಯುಕ್ತ ರಂಗ ಸರಕಾರವನ್ನನು ಅಧಿಕಾರಕ್ಕೆ ತಂದ ಚುನಾವಣೆಗಳು. ಈ ಹಣಕಾಸು ವರ್ಷದಲ್ಲಿ ಸುಧಾರಣೆಯ 'ರಭಸ' ಕಡಿಮೆಯಾಗಲು ಇದೇ ಹೊಣೆಯಂತೆ.

ಕೊನೆಯದಾಗಿ, ಇತ್ತೀಚಿನ ತಿಂಗಳು ಗಳಲ್ಲಿ ಕೈಗೊಂಡ ಹಲವಾರು ಕ್ರಮಗಳಿಂದ ಹಳಿತಪ್ಪಿದ ಆರ್ಥಿಕ ಸುಧಾರಣೆ ಮತ್ತೆ ಹಳಿಯ ಮೇಲೆ ಬರುತ್ತದಂತೆ!

ಇವೆಲ್ಲದರ ಸಾರಾಂಶವೆಂದರೆ ಯಾವುದು ಉತ್ತಮ ಆರ್ಥಿಕ ನೀತಿ ಎಂಬುದನ್ನು ಕುರಿತಂತೆ ಕಾಂಗ್ರೆಸ್‌ನ ಕಣ್ಣೋಟಕ್ಕೂ, ಸಂಯುಕ್ತ ರಂಗದ ಕಣ್ಣೋಟಕ್ಕೂ ಏನೇನೂ ವ್ಯತ್ಯಾಸವಿಲ್ಲ! "ಸುಧಾರಣೆಗಳ ಬಗ್ಗೆ ಸರ್ವ ಸಮ್ಮತಿಯಿದೆ, ಇದು ಸ್ವಯಂ ಸಾಬೀತಾಗಿದೆ. ಮಧ್ಯ ಚುನಾವಣೆಗಳು ಬಂದಿದ್ದರಿಂದ ಸುಧಾರಣೆಗಳು ನಿಧಾನಗೊಂಡಿವೆ" ಇದು ಚಿದಂಬರಂರವರ ಈ ಬಾರಿಯ ಆರ್ಥಿಕ ಸಮೀಕ್ಷೆ ಬಿಂಬಿಸಬಯಸುವ ಮುಖ್ಯಅಂಶ. ಇದನ್ನು ಸಮರ್ಥಿಸಿಕೊಳ್ಳಲು ತನಗೆ ಅನುಕೂಲವಾದ ಅಂಕಿ-ಅಂಶಗಳನ್ನಷ್ಟೇ ಮುಂದಿಡುವ ಠಕ್ಕುತನಕ್ಕೆ ಈ ಸಮೀಕ್ಷೆ ಇಳಿದಿದೆ.

ಈ ಆರ್ಥಿಕ ಸಮೀಕ್ಷೆ ಮುಂದಿಡುವ ಅಂಕಿ-ಅಂಶಗಳು ಹೀಗಿವೆ.

I. ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ) 1994-95 ಹಾಗೂ 1995-96 ರಲ್ಲಿ ಅನುಕ್ರಮವಾಗಿ 7.2% ಮತ್ತು 7.1% ದರದಲ್ಲಿ ಏರಿವೆ. 1996-97 ರಲ್ಲಿ ಇದು 6.8% ದರದಲ್ಲಿ ಏರುವ ನಿರೀಕ್ಷೆಯಿದೆ.

II ಕೈಗಾರಿಕಾ ಉತ್ಪಾದನೆ 1996-97 ರ ಮೊದಲ ಏಳು ತಿಂಗಳಲ್ಲಿ 12.1% ಏರಿದೆ. ಅತಿ ಹೆಚ್ಚು ದರ ಸಾಧಿಸಿದ 1995-96 ರಲ್ಲಿ ಇದು 12.3% ಇತ್ತು.

III ಹಿಂದಿನ ವರ್ಷಕ್ಕೆ ಹೋಲಿಸಿದರೆ ವ್ಯಾಪಾರ ಖಾತೆಯಲ್ಲಿನ ಕೊರತೆ ಕಮ್ಮಿಯಾಗಿದೆ. ಅದು ಒಟ್ಟು ರಾಷ್ಟ್ರೀಯ ಉತ್ಪನ್ನದ 1.7% ಇದ್ದದ್ದು 1.4% ಕ್ಕಿಳಿಯಿತು.

IV ರಿಸರ್ವ್ ಬ್ಯಾಂಕ್ ಬಳಿಯಿರುವ ವಿದೇಶೀ ಕರೆನ್ಸಿ ಆಸ್ತಿ ಮಾರ್ಚ್ 1996 ರಲ್ಲಿ 17 ಶತಕೋಟಿ ಡಾಲರುಗಳಿದ್ದದ್ದು ಜನವರಿ 1997 ರಲ್ಲಿ 19.8ಶತಕೋಟಿ ಡಾಲರುಗಳಿಗೇರಿತು.

ಇದು "ಆರ್ಥಿಕ ಸುಧಾರಣೆ" ಮತ್ತೆ ಹಳಿಯ ಮೇಲೆ ಬಂದಿರುವುದನ್ನು ಅಂದರೆ ಸರಿ ದಾರಿ ಹಿಡಿದಿರುವುದನ್ನು ಸೂಚಿಸುತ್ತದೆ ಎಂಬುದು ಈ ಆರ್ಥಿಕ ಸಮೀಕ್ಷೆಯ ವಾದ. ಆದರೆ ಈ ಅಂಕಿ-ಸಂಖ್ಯೆಗಳನ್ನು ಜಾಗರೂಕತೆಯಿಂದ ಪರಿಶೀಲಿಸ ಬೇಕಾಗುತ್ತದೆ ಎನ್ನುತ್ತಾರೆ ಆರ್ಥಿಕ ತಜ್ಞರು.

I 1994-95 ರ ಜಿಡಿಪಿ ಬೆಳವಣಿಗೆ ದರ ಈ ಹಿಂದೆ 5.3% ಎನ್ನಲಾಗಿತ್ತು. ನಂತರ ಅದನ್ನು 6.2%, 6.3% ಎಂದೆಲ್ಲಾ ಪರಿಷ್ಕರಿಸಿ ಈಗ 7.2% ಎಂದು ಹೇಳಲಾಗುತ್ತಿದೆ. 1995-96 ರ ದರವನ್ನು ಕೂಡಾ ಹೀಗೆ ಪರಿಷ್ಕರಿಸಲಾಗಿದೆ. ಹೀಗಿರುವಾಗ ಈ ದರಗಳ ಬಗ್ಗೆಯೇ ಅಪನಂಬಿಕೆ ಬರುತ್ತದೆ.

II ಕೈಗಾರಿಕಾ ಉತ್ಪಾದನೆ 1995-96 ರಷ್ಟೇ ಉತ್ತಮವಾಗಿತ್ತು ಎನ್ನುವಾಗ 38 ಉದ್ದಿಮೆಗಳಲ್ಲಿ 34ರಲ್ಲಿ ಬೆಳವಣಿಗೆ ದರ ತೀವ್ರವಾಗಿ ಇಳಿದಿದೆ ಎಂಬುದನ್ನು ಮಾತ್ರ ಹೇಳುತ್ತಿಲ್ಲವೇಕೆ? .

III ವ್ಯಾಪಾರ ಖಾತೆಯ ಕೊರತೆ ಕಮ್ಮಿಯಾಗಲು ಕಾರಣ ಕೆಗಾರಿಕಾ ಹಿಂಜರಿತದಿಂದಾಗಿ ಉಂಟಾಗಿರುವ ಆಮದು ಇಳಿಕೆ ಎಂಬುದನ್ನು ಇಲ್ಲಿ ಮರೆಮಾಚಲಾಗಿದೆ.

IV ಕೊನೆಯದಾಗಿ, ವಿದೇಶಿ ಕರೆನ್ಸಿ ಆಸ್ತಿ ಹೆಚ್ಚಿರುವುದು ನೇರ ವಿದೇಶಿ ಹಣ ಹೂಡಿಕೆಯಿಂದ ಅಲ್ಲ, ಇಲ್ಲಿಯ ಶೇರು ಮಾರುಕಟ್ಟೆಯಲ್ಲಿ ಸಟ್ಟಾ ಆಡಲು ಬಂದ, ಯಾವಾಗ ಬೇಕಾದರೂ ಹಿಂದೆ ಹಾರಿ ಹೋಗಬಹುದಾದ 'ಬಿಸಿ ಹಣ' ದಿಂದಾಗಿ.

ಆದ್ದರಿಂದ ಆರ್ಥಿಕ ಸಮೀಕ್ಷೆಯ ವಾದದಲ್ಲಿ ಏನೂ ಹುರುಳಿಲ್ಲ ಎಂಬುದು ಸ್ಪಷ್ಟ.

ರಫ್ತು ಹೆಚ್ಚಳ ಕುಸಿದಿದೆ, ಆಮದು ನಿಧಾನಗೊಳ್ಳುತ್ತಿದೆ, ಕೈಗಾರಿಕಾ ಬೆಳವಣಿಗೆ ನಿಧಾನಗೊಳ್ಳುತ್ತಿದೆ, ಕೃಷಿ ವಲಯದ ಸಾಧನೆಯೂ ನೆಚ್ಚತಕ್ಕ ರೀತಿಯಲ್ಲಿಲ್ಲ, ಬೆಲೆಗಳು ಏರುತ್ತಲೇ ಇವೆ. ಆದರೆ ಸರಕಾರದ ಆರ್ಥಿಕ ಸಮೀಕ್ಷೆ ಇದನ್ನೆಲ್ಲಾ ಗಮನಿಸಲು ಇಷ್ಟಪಡುತ್ತಿಲ್ಲ, ಅಷ್ಟೇ ಅಲ್ಲ, ಕೆಲವು ವಲಯಗಳಲ್ಲಿ - ಉದಾ: ಬಂಡವಾಳ ಸರಕುಗಳ ಆಮದಿನಲ್ಲಿ ಕುಸಿತ ಸುಧಾರಣೆಗಳಿಂದಾಗಿ ಭಾರತದ ಉದ್ದಿಮಗಳು ಸ್ಪರ್ಧೆಯೆದುರಿಸಲು ಸಮರ್ಥವಾಗುತ್ತಿವೆ ಎಂಬುದರ ಸಂಕೇತ ಎಂದು ಬುರುಡೆ ಬಿಡುವ ಪ್ರಯತ್ನವನ್ನು ಮಾಡಲಾಗಿದೆ.

ಏಕೆ ಇಂತಹ ಬುರುಡೆಗಳು? ಆರ್ಥಿಕ ಬೆಳವಣಿಗೆಯನ್ನು ಕಾದುಕೊಳ್ಳಲಾರದ, ರಫ್ತು ಪ್ರಮಾಣವನ್ನು ಗಮನಾರ್ಹವಾಗಿ ಹೆಚ್ಚಿಸಲಾರದ, ಸರಕಾರದ ಗುರಿಯಾದ 10 ಶತಕೋಟಿ ಡಾಲರುಗಳನ್ನು ಕೂಡಾ ವಿದೇಶಗಳಿಂದ ಆಕರ್ಷಿಸಲಾರದ ಒಂದು ಸುಧಾರಣೆಯನ್ನು ಇನ್ನಷ್ಟು ತೀವ್ರಗೊಳಿಸಬೇಕು ಎಂದು ನಂಬಿಸುವುದೇ ಈ ಕಸರತ್ತಿನ ಉದ್ದೇಶ.

ಆದರೆ ದುರದೃಷ್ಟವಶಾತ್, ಈ ಕಸರತ್ತನ್ನು ನೋಡಿದಾಗ "ಆರ್ಥಿಕ ಸುಧಾರಣೆಗಳನ್ನು ಎಲ್ಲಾ ರಾಜಕೀಯ ಶಕ್ತಿಗಳನ್ನೂ ಈಗ ಒಪ್ಪಿವೆ" ಎಂದು ಹೇಳುತ್ತಿರುವವರಿಗೇ ತಮ್ಮ ಈ ಹೇಳಿಕೆಯಲ್ಲಿ ವಿಶ್ವಾಸವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

(ಐ.ಎನ್.ಎನ್)

- *ಆಹಾರ ಧಾನ್ಯಗಳ ಉತ್ಪಾದನೆ 19.12 ಕೋಟಿ ಟನ್‌ಗಳಾಗಬಹುದು. ಇದು 1994-95 ರ ಉತ್ಪಾದನೆಗಿಂತ ತುಸು ಕಮ್ಮಿ.*
- *ಕೈಗಾರಿಕಾ ಬೆಳವಣಿಗೆ ದರ ಏಪ್ರಿಲ್-ಅಕ್ಟೋಬರ್ 1996 ರ ಅವಧಿಯಲ್ಲಿ 9.8% ಅಂದರೆ 1995 ಕ್ಕಿಂತ ಸುಮಾರು 2% ಕಮ್ಮಿ.*
- *ಮೂಲ ಸೌಕರ್ಯಗಳ ವಲಯದಲ್ಲಿ ಈ ಅವಧಿಯಲ್ಲಿ 4.1%. ಇದು 1995 ರಲ್ಲಿ 8.9% ಇತ್ತು.*
- *ತೈಲ ಉತ್ಪಾದನೆ 10% ರಷ್ಟು ಕುಸಿಯಿತು.*
- *ಹಣದುಬ್ಬರ ಜೂನನಲ್ಲಿ 4.5% ಇದ್ದದ್ದು ಈಗ 8% ವನ್ನು ದಾಟುತ್ತಿದೆ. ಇದರಲ್ಲೂ ಬಡಜನರನ್ನು ತಟ್ಟುವ ದ್ವಿದಳ ಧಾನ್ಯಗಳು, ಹಣ್ಣು - ತರಕಾರಿಗಳ ಬೆಲೆಗಳಲ್ಲಿ ವಿಪರೀತ ಹೆಚ್ಚಳ.*
- *ಎಲ್ಲಕ್ಕೂ ಮುಖ್ಯವಾಗಿ "ಸುಧಾರಣೆ" ಯ ಮುಖ್ಯ ಗುರಿಯಾದ ರಫ್ತು ವಲಯದಲ್ಲೂ ಏಪ್ರಿಲ್-ಡಿಸೆಂಬರ್ ಅವಧಿಯಲ್ಲಿ ಹೆಚ್ಚಳ ಕೇವಲ 6.4%. 1995 ರಲ್ಲಿ ಇದು 24.2% ಇತ್ತು.*

ಇವು 1996-97 ರ "ಆರ್ಥಿಕ ಸಮೀಕ್ಷೆ" ಯಲ್ಲಿ ಗಮನಿಸಿರುವ ಅಂಕಿ-ಅಂಶಗಳು

ಜನರ ಬಳಿಗೆ ಜನರ ಪತ್ರಿಕೆ

'ಐಕ್ಯರಂಗ' ಮಾರಾಟದ ಉತ್ಸಾಹದಾಯಕ - ವಿಶಿಷ್ಟ ಅನುಭವಗಳು

ಬೆಂಗಳೂರಿಗೆ ಬಂದಿದ್ದ ಮಂಗಳೂರಿನ ಸಂಗಾತಿ ಯೊಬ್ಬರನ್ನು ಬೆರಗುಗೊಳಿಸಿದ 'ಐಕ್ಯರಂಗ' ಮಾರಾಟದ ಬಗ್ಗೆ ನೀವು ಈಗಾಗಲೇ ಓದಿರುವಿರಿ. ಇದರಲ್ಲಿ ಸ್ವತಃ ಭಾಗವಹಿಸುತ್ತಿರುವವರ ಅನುಭವವನ್ನು ಆರ್.ರಾಮಕೃಷ್ಣ ಇಲ್ಲಿ ಹಂಚಿಕೊಂಡಿದ್ದಾರೆ.

ನವೆಂಬರ್ 25, 1996 - 3 ಜನ ಎಸ್‌ಎಫ್‌ಐ ಸಂಗಾತಿಗಳು 20 ಐಕ್ಯರಂಗ ದೊಂದಿಗೆ ಬೆಂಗಳೂರಿನ ಬಸ್ ನಿಲ್ದಾಣಕ್ಕೆ ಹೋದವರು ಪಡೆದ ಅನುಭವ - ಜನರ ಪ್ರತಿಕ್ರಿಯೆ ಕಂಡ ಮೇಲೆ ಐಕ್ಯರಂಗ ಮಾರಾಟವನ್ನು ಹೆಚ್ಚಿಸುವ ವಿಶ್ವಾಸ ಕುದಿಯೊಡೆಯಿತು.

20-40-60-100-125-175-211-250-302 ಹೀಗೆ ನಂತರದ್ದು 'ಐಕ್ಯರಂಗ'ಮಾರಾಟ ಸಂಖ್ಯೆಯಲ್ಲಿ ನಿರಂತರ ಏರಿಕೆ ಮತ್ತು ವಿಶಿಷ್ಟ ಅನುಭವಗಳ ಗಳಿಕೆ.

ಈಗ ಐಕ್ಯರಂಗ ಮಾರಾಟ ಕೇವಲ ವಿದ್ಯಾರ್ಥಿಗಳ ಕೆಲಸವಾಗಿ ಉಳಿದಿಲ್ಲ. ಪಕ್ಷದ ವಿವಿಧ ಶಾಖೆಗಳ ಸದಸ್ಯರು ಸಕ್ರಿಯವಾಗಿ ಪ್ರತಿವಾರ ಪಾಲ್ಗೊಳ್ಳುತ್ತಾರೆ.

ಜನರಿಗೆ ನಾವು ಸ್ಪಷ್ಟವಾಗಿ ತಿಳಿಸಿ ಹೇಳುತ್ತೇವೆ -"ಇದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖವಾಣಿ-ಐಕ್ಯರಂಗ -ವಾರಪತ್ರಿಕೆ-ಇತರ ಪತ್ರಿಕೆಗಳಂತಲ್ಲ. ಸ್ಥಳೀಯ-ರಾಜ್ಯ-ರಾಷ್ಟ್ರೀಯ- ಅಂತರ್ರಾಷ್ಟ್ರೀಯ, ಸಾಮಾಜಿಕ-ಆರ್ಥಿಕ-ರಾಜಕೀಯ-ಹತ್ತು ಹಲವು ಮಹತ್ವದ ಪ್ರಶ್ನೆಗಳ ಬಗೆಗೆ ಸಮಸ್ಯೆಗಳ ಬಗೆಗೆ ಮಾಹಿತಿ, ವೈಜ್ಞಾನಿಕ ವಿಶ್ಲೇಷಣೆ, ಜನಪರ ಹೋರಾಟಗಳ [illegible] - ದುಡಿಯುವ ಜನರ ನೋವು ನಲಿವುಗಳಿಗೆ ಸ್ಪಂದಿಸುವ ಲೇಖನಗಳು ದೊರೆಯುವ ಪತ್ರಿಕೆ ಕೊಳ್ಳಿ"ರೆಂದು.

ಇಷ್ಟು ಹೇಳುತ್ತಿದ್ದಂತೆ ಹಲವಾರು ಜನ 2 ರೂ. ಕೊಟ್ಟು ಕುತೂಹಲದಿಂದ ಪತ್ರಿಕೆ ಕೊಳ್ಳುತ್ತಾರೆ.

"ನಾನು ....ಕಾರ್ಖಾನೆಯ ಕಾರ್ಮಿಕ, ನನಗೆ ಪಕ್ಷದ ಹೋರಾಟದ ಬಗೆಗೆ ಗೊತ್ತು ಪತ್ರಿಕೆ ಕೊಡಿ".

"ನಾನು ....ಕಾಲೇಜಿನ ವಿದ್ಯಾರ್ಥಿ ನಿಮ್ಮನ್ನು 'ಆ' ಹೋರಾಟದಲ್ಲಿ ನೋಡಿದ್ದೇನೆ ಒಂದು ಪತ್ರಿಕೆ ಕೊಡಿ."

"ಪಕ್ಷದ ಮುಖಂಡ .... ನನಗೆ ಗೊತ್ತು, ಎಂಥ ಹೋರಾಟಗಾರರು! ನೀವು, ವಿದ್ಯಾರ್ಥಿಗಳೇನು? ಪತ್ರಿಕೆ ಕೊಡಿ"

"ನಿಮ್ಮ ಪಕ್ಷದ ವಿಚಾರ ನನಗೆ ಒಪ್ಪಿಗೆ ಇಲ್ಲ. ಕುತೂಹಲಕ್ಕೆ ಕೊಳ್ಳುತ್ತಿದ್ದೇನೆ ಪತ್ರಿಕೆ ಕೊಡಿ"

ಹೀಗೆ 'ಪರಿಚಿತರು' ಕುತೂಹಲಿಗಳು ಹಲವು ಜನರು ಪತ್ರಿಕೆ ಪಡೆಯುತ್ತಾರೆ.

ಕೆಲವು ಜನ ಕೇಳುತ್ತಾರೆ "ಬೆಲೆಗಳನ್ನು ಏರಿಸುತ್ತಿರುವ-ಭ್ರಷ್ಟ ದೇವೇಗೌಡರ ಸರಕಾರವನ್ನೇಕೆ ನೀವು ಬೆಂಬಲಿಸು ತ್ತೀದ್ದೀರಿ?" ಎಂದು "ದೇಶ ವಿರೋಧಿ ನೀತಿಗಳ ಕಾಂಗ್ರೆಸ್ - ಕೋಮುವಾದಿ ಬಿಜೆಪಿಯನ್ನು ಅಧಿಕಾರ ದಿಂದ ದೂರವಿಡಲು, ಸಂಯುಕ್ತ ರಂಗ ಸರಕಾರಕ್ಕೆ ನಮ್ಮ ಪಕ್ಷದ್ದು ಹೊರಗಿನಿಂದ ಬೆಂಬಲ" "ಸಮಾನ ಕನಿಷ್ಟ ಕಾರ್ಯಕ್ರಮದ ಜನ ಪರ ಅಂಶಗಳ ಜಾರಿಗೆ ಒತ್ತಾಯ-ಹೋರಾಟ-ಜನವಿರೋಧಿ ನೀತಿಗಳ ಜಾರಿಗೆ ವಿರೋಧ" ಎಂದು ಸಿಪಿಐ(ಎಂ) ನ ರಾಜಕೀಯವನ್ನು ಹೇಳಿ ಅವರನ್ನೂ ಹೋರಾಟಕ್ಕೆ ಕರೆಯುತ್ತೇವೆ.

"ಕಮಿಷನ್ ಹಣಕ್ಕಾಗಿ ಪತ್ರಿಕೆ ಮಾರುತ್ತಿದ್ದಾರೆ"

"ಎಲ್ಲರೂ ಭ್ರಷ್ಟರೇ, ಎಲ್ಲರೂ ಕಳ್ಳರೇ ಯಾರೂ ಸಾಚಾಗಳಲ್ಲ" ಎಂದವರೂ ಇದ್ದಾರೆ.

'ಕಮಿಷನ್' ಬಗ್ಗೆ ಮಾತನಾಡಿದವರಿಗೆ ಅವರ ಪಕ್ಷದಲ್ಲಿದ್ದವರೇ ಉತ್ತರ ಕೊಟ್ಟರು "ಅವರು ಕಮಿಷನ್‌ಗಾಗಿ ಬಂದವರಲ್ಲ - ಪಕ್ಷದ ಕಾರ್ಯಕರ್ತರು". ನಾವು ಹೇಳುವ ದೇನಿದೆ?

ಪತ್ರಿಕೆಯನ್ನು ಉಚಿತವಾಗಿ ಕೊಟ್ಟರೆ ಓದುತ್ತೇವೆ ಎನ್ನುವವರೂ ಇಲ್ಲದಿಲ್ಲ.

ಕಾಂಗ್ರೆಸ್-ಬಿಜೆಪಿ-ಜನತಾದಳಗಳಂತಹ ಬಂಡವಾಳಶಾಹಿ ಪಕ್ಷಗಳು ಉಚಿತವಾಗಿ ಪತ್ರಿಕೆ ಕೊಡಬಹುದೇನೋ? ಸಿಪಿಐ(ಎಂ) ಪಕ್ಷ ಉಚಿತ ಪತ್ರಿಕೆ ಕೊಡಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅವರಿಗೆ ವಿವರಿಸ ಬೇಕಾಯಿತು.

'ಸರಕಾರ' ಸೇರಿರುವ ನೀವೇ ಹೋರಾಟದ ಮಾತನಾಡುತ್ತಿದ್ದೀರಲ್ಲ' ಎಂದ ವರಿಗೆ ಸಿಪಿಐ(ಎಂ) ಪಕ್ಷ ಕೇಂದ್ರ ಸರಕಾರವನ್ನು ಸೇರಿಲ್ಲ ಎಂದು ಸ್ಪಷ್ಟಪಡಿಸ ಬೇಕಾಯಿತು.

ಇನ್ನೊಂದು ಕುತೂಹಲಕಾರಿ ಅಂಶವಿದೆ. "ಎಲ್ಲರೂ ಭ್ರಷ್ಟರೇ-ಎಲ್ಲರೂ ಕಳ್ಳರೇ, ಯಾರೂ ಸಾಚಾಗಳಲ್ಲ" ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವವರೊಂದಿಗೆ ಚರ್ಚಿಸಿದ ನಂತರ ಗೊತ್ತಾಗಿದ್ದು ಅವರಲ್ಲಿ ಹೆಚ್ಚಿನವರು ಬಿಜೆಪಿಯವರು ಎಂಬುದು.

ಹವಾಲಾ ಹಗರಣದಲ್ಲಿ ಕಳಂಕ-ಮಹಾರಾಷ್ಟ್ರ ಬಿಜೆಪಿ-ಶಿವಸೇನೆ ಸರಕಾರದ ಭ್ರಷ್ಟ ಅವಾಂತರಗಳು, ಸಚಿವರ ರಾಜಿನಾಮೆ, ಗುಜರಾತ್-ರಾಜಸ್ಥಾನಗಳ ಬಿಜೆಪಿಯ ಆಂತರಿಕ ಕಿತ್ತಾಟ - ಈ ಎಲ್ಲಾ ಹಿನ್ನೆಲೆಯಲ್ಲಿ ಅವರಿಗೆ ತಮ್ಮನ್ನು ನೇರವಾಗಿ ಬಿಜೆಪಿಯ ಜೊತೆ ಗುರುತಿಸಿಕೊಳ್ಳಲಾಗದೆ 'ಎಲ್ಲರೂ ಭ್ರಷ್ಟರು, ಎಲ್ಲರೂ ಕಳ್ಳರು, ನೀವು ಸಹ' ಎಂಬ ಸಿದ್ಧಾಂತವನ್ನು ಪ್ರತಿಪಾದಿಸು ತ್ತಿದ್ದಾರೆನಿಸುತ್ತದೆ.


ಹವಾಲ ಹಗರಣದಲ್ಲಿ ಎಡಪಕ್ಷಗಳ ಮುಖಂಡರು ಯಾರೂ ಭಾಗಿಗಳಾಗಿಲ್ಲವಲ್ಲ ಎಂದು ಹೇಳಿದಾಗ ಅವರಲ್ಲಿ ಹಲವರು ಮರು ಮಾತನಾಡದೇ ಸುಮ್ಮನಾದರು.

"ಎಲ್ಲರೂ ಭ್ರಷ್ಟರು....." ಎಂದು ತಮ್ಮ ಪ್ರಾಮಾಣಿಕ ಅಭಿಪ್ರಾಯ ಹೇಳಿದವರಿಗೆ ನಾವು ಸೌಜನ್ಯದಿಂದಲೇ 'ನೋಡಿ, ಭ್ರಷ್ಟರು, ಕಳ್ಳರಲ್ಲಿ ಬೇರೆ ಯಾರೂ ಹೀಗೆ ಜನರ ಬಳಿ ಬಂದು ಪತ್ರಿಕೆ ಮಾರುವ, 'ಜನರ ಮುಂದೆ ನಿಲ್ಲುವ' ಧೈರ್ಯವನ್ನು ತೋರುತ್ತಿಲ್ಲ. ಏಕೆ ಎಂದು ಯೋಚಿಸಿ" ಎಂದು ಅವರನ್ನು ಚಿಂತನೆಗೆ ಹಚ್ಚಿದ್ದೇವೆ.

"ನನ್ನ ಬಳಿ 3 ರೂ. ಇದೆ. 1.25 ರೂ. ಬಸ್ ಟಿಕೆಟಿಗೆ ಬೇಕು. 1.75 ರೂ. ಗೆ ಪತ್ರಿಕೆ ಕೊಡಿ" ಎಂದು ಕೇಳಿ ಮಹಿಳೆಯೊಬ್ಬರು ಪತ್ರಿಕೆ ಕೊಂಡುಕೊಂಡರು, ಹೀಗೆ ಪತ್ರಿಕೆ ಕೊಳ್ಳುವ ಬಗ್ಗೆ ಜನರ ಅತೀವ ಆಸಕ್ತಿಯನ್ನು ನೋಡಿದ ಮೇಲೆ 'ಕರ್ನಾಟಕದ ಜನಕ್ಕೆ ಕೊಂಡು ಓದುವ ಅಭ್ಯಾಸ ಇಲ್ಲ' ಎನ್ನುವ ಆರೋಪ ಪೂರ್ಣ ಸತ್ಯವಲ್ಲ ಅನಿಸುತ್ತದೆ.

ವೈವಿಧ್ಯಮಯ ಅನುಭಗಳು ನಮ್ಮದು. ಪಕ್ಷದ ಪತ್ರಿಕೆಯನ್ನು ಜನರಿಗೆ ತಲುಪಿಸುವ - ಜನರ ಮನಸ್ಸನ್ನುಅರಿಯುವ - ಜನರಿಂದ ಕಲಿಯುವ ಪ್ರಯತ್ನ ನಮ್ಮದು.

ಈ ಪ್ರಕ್ರಿಯೆ ಇನ್ನಷ್ಟು ಬಲಗೊಳ್ಳಬೇಕು ರಾಜ್ಯದೆಲ್ಲೆಡೆಯೂ ಇದು ನಡೆಯಬೇಕು ಎಂಬುದು ನಮ್ಮ ಆಶಯ.



ಜನಸಾಮಾನ್ಯರ ಪತ್ರಿಕೆಯನ್ನು ಜನಸಾಮಾನ್ಯರ ಬಳಿಗೇ ಒಯ್ಯುವ ಪ್ರಯತ್ನದಲ್ಲಿ ಭಾಗವಹಿಸಲು ಆಹ್ವಾನಿಸುವ ಒಂದು ಪೋಸ್ಟರ್. ಚಿತ್ರದಲ್ಲಿರುವ ಆಲೇಖ (ಗ್ರಾಫ್) ಆಯಾಯ ವಾರದಲ್ಲಿ ಮಾರಾಟವಾದ ಪತ್ರಿಕೆಗಳ ಸಂಖ್ಯೆಯನ್ನು ಸೂಚಿಸುತ್ತದೆ.

ಕುಂಭಕರ್ಣ ನಿದ್ರೆಯ ಸರಕಾರವನ್ನೇ ಎಚ್ಚರಿಸಿದ

ಗ್ರಾಮ ಪಂಚಾಯತಿ ನೌಕರರ ಚರಿತ್ರಾರ್ಹ ಹೋರಾಟ

ಎನ್.ಕೆ.ಉಪಾಧ್ಯಾಯ

"ಪಂಚಾಯತ್ ನೌಕರರು ಜೀತದಾಳುಗಳಲ್ಲ ಪಂಚಾಯತ್ ನೌಕರರು ದಿನಗೂಲಿಗಳಲ್ಲ, ಪಂಚಾಯತ್ ನೌಕರರಿಗೆ ಸೇವಾ ನಿಯಮ ರಚನೆಯಾಗಲಿ", "ಪಂಚಾಯತ್ ನೌಕರರಿಗೆ ಪುರಸಭಾ ನೌಕರರ ವೇತನ ಸಿಗಲಿ" ಎಂಬ ಘೋಷಣೆಗಳು ಮೂರು ದಿವಸ ಸತತವಾಗಿ ಬೆಂಗಳೂರು ನಗರದಲ್ಲಿ ಮೊಳಗಿದವು.

ಕರ್ನಾಟಕ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬಂದ ಗ್ರಾಮ ಪಂಚಾಯತಿ ನೌಕರರು ಫೆ 24,25,26ರಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಪಂಚಾಯತ್ ರಾಜ್ಯಮಂತ್ರಿ ಎಂ.ಪಿ.ಪ್ರಕಾಶ್, ಉಪಮುಖ್ಯಮಂತ್ರಿ ಮತ್ತು ಹಣಕಾಸು ಮಂತ್ರಿ ಸಿದ್ದರಾಮಯ್ಯನವರ ನಿವಾಸಗಳೆದುರು ಇಡೀ ದಿವಸ ಮತ ಪ್ರದರ್ಶನ ಮತ್ತು ಧರಣಿ ನಡೆಸಿದರು.

ತಾವು ತಂದ ಬುತ್ತಿ ರೊಟ್ಟಿ ಚಟ್ನಿ ಮೂರನೇ ದಿವಸಕ್ಕೆ ಸಾಕಾಗದಿದ್ದರೂ ಏನೂ ತಕರಾರಿಲ್ಲದೆ ಅರೆಹೊಟ್ಟೆಯಲ್ಲೇ ಘೋಷಣೆಗಳೊಂದಿಗೆ ರೈಲ್ವೆ ಸ್ಟೇಶನಿನಿಂದ ಮಂತ್ರಿಗಳ ಮನೆಗಳವರೆಗೆ ಮೆರವಣಿಗೆ ನಂತರ ಧರಣಿ ನಡೆಸಿ ತಮ್ಮ ಬೇಡಿಕೆಗಳ ಕುರಿತು ಗಮನ ಹರಿಸದ ಮಂತ್ರಿಗಳನ್ನು ಬಡಿದೆಬ್ಬಿಸಿದರು. ನಿದ್ರೆ ಭಂಗ ಮಾಡಿದರು. "ಗ್ರಾಮಾಭಿವೃದ್ಧಿಗೆ ನಾವೆಲ್ಲ ಮನುಷ್ಯರಾಗಿ ಬಾಳಿ ಕೆಲಸ ಮಾಡಬೇಕು. ನಮ್ಮ ಬೇಡಿಕೆಗಳನೊಪ್ಪಿಕೊಳ್ಳಿ" ಎಂದು ಒತ್ತಾಯಿಸುವುದರಲ್ಲಿ ಯಶಸ್ವಿಯಾದರು. ಮುಂದಿನ ಬಜೆಟ್ ಅಧಿವೇಶನದೊಳಗೆ ಸಮಸ್ಯೆ ಬಗೆಹರಿಯದಿದ್ದರೆ ಮೇ ಕೊನೆ ವಾರದಲ್ಲಿ ರಾಜ್ಯದ 5000 ಪಂಚಾಯತಿಗಳ ಆಡಳಿತೆಯನ್ನು ಸಂಪು ಹೂಡುವುದರ ಮುಲಕ ಸ್ಥಗಿತಗೊಳಿಸುವ ನಿರ್ಣಯ ತೆಗೆದುಕೊಂಡು "ನಾವು ಕುರಿಗಳಲ್ಲ ಹೋರಾಡುವ ಹುಲಿ"ಗಳೆಂಬುದನ್ನು ತೋರಿಸಿಕೊಟ್ಟರು. ತಮ್ಮ ಸಂಘಟನೆ ಮತ್ತು ಹೋರಾಟಕ್ಕೆ ಹೊಸ ಚಾಲನೆ ನೀಡಿದರು.

ಸೌಹಾರ್ದ ಬೆಂಬಲ

ಈ ಹೋರಾಟಕ್ಕೆ ಸಿ.ಐ.ಟಿ.ಯು ಅಧ್ಯಕ್ಷ ಸೂರ್ಯನಾರಾಯಣರಾವ್, ಸಿ.ಪಿ.ಐ. (ಎಂ) ಕಾರ್ಯದರ್ಶಿ ಪಿ. ರಾಮಚಂದ್ರರಾವ್, ರೈತಮುಖಂಡ ಪಿ.ಜಗನ್ನಾಥ್, ಕೃಷಿಕಾರ್ಮಿಕ ಸಂಘಟನೆಯ ಜಿ.ಎನ್.ನಾಗರಾಜ್, ಅಂಗನವಾಡಿ ಕಾರ್ಮಿಕ ಸಂಘಟನೆಯ ವರಲಕ್ಷ್ಮಿ, ಬೆಂಗಳೂರು ಕಾರ್ಮಿಕರ ಮುಖಂಡ ಆರ್. ಶ್ರೀನಿವಾಸ್ ಇವರೆಲ್ಲ ಬೆಂಬಲ ನೀಡಿದರು. ಕರ್ನಾಟಕ ಗ್ರಾಮ ಪಂಚಾಯತ್ ನೌಕರರ ಸಂಘದ ಗೌರವ ಅಧ್ಯಕ್ಷ ಎನ್.ಕೆ.ಉಪಾಧ್ಯಾಯ, ಅಧ್ಯಕ್ಷರಾದ ಮಾರುತಿಮಾನ್ಪಡೆ, ಪ್ರಧಾನ ಕಾರ್ಯದರ್ಶಿ ವಿ.ಪಿ. ಕುಲಕರಣಿ, ಧಾರವಾಡ ಜಿಲ್ಲಾ ಅಧ್ಯಕ್ಷ ಸಿ.ಆರ್.ಭಟ್, ಬಿಜಾಪುರ ಜಿಲ್ಲಾ ಅಧ್ಯಕ್ಷ ಭೀಮಸಿ ಕಲಾದಿಗಿ ಮೊದಲಾದವರು ಮುಂದಾಳತ್ವ ವಹಿಸಿ ಮಾರ್ಗದರ್ಶನ ನೀಡಿದರು.

ಜನರು ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಮಾಡುವ ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಸಲುವಾಗಿ ಪಂಚಾಯತಿಗಳಿಗೆ ಸಂಬಂಧಪಟ್ಟಂತೆ ಇತ್ತೀಚಿನ ಸಂವಿಧಾನದ ತಿದ್ದುಪಡಿಗನುಸಾರವಾಗಿ ರಾಜ್ಯದಲ್ಲಿ ಗ್ರಾಮ, ತಾಲೂಕು, ಮತ್ತು ಜಿಲ್ಲಾ ಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳು ಇರುವ ಮೂರು ಹಂತದ ಪಂಚಾಯತ್ ರಾಜ್ಯ ಅಧಿನಿಯಮ 1993ರಲ್ಲಿ ನಮ್ಮ ರಾಜ್ಯದಲ್ಲಿ ಅನುಷ್ಠಾನಕ್ಕೆ ಬಂದಿದೆ. ಇದಕ್ಕೆ ಪೂರ್ವದಲ್ಲಿ 1983 ರಿಂದ ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕ್ ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ ಮಸೂದೆ ಜ್ಯಾರಿಯಲ್ಲಿತ್ತು. ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಂತೆ ಈ ಅಧಿಕಾರ ವಿಕೇಂದ್ರಿಕರಣದ ಪಯುತ್ನ ನಡೆಯುತ್ತಿದ್ದರೂ ಗ್ರಾಮಾಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿದೆ. ಸಿಬ್ಬಂದಿ ಕುರಿತು ಮಾತ್ರ ಸರಕಾರ ಕಿಂಚಿತ್ತೂ ಗಮನ ಹರಿಸಿಲ್ಲ. ಮಾತ್ರವಲ್ಲ ಅವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಕರ್ನಾಟಕ ಜಿಲ್ಲಾ ಪರಿಷತ್ ಕಾಯಿದೆ ಎರಡು ವರ್ಷ ಸತತವಾಗಿ 1985 ರಿಂದ ಅನುಷ್ಠಾನದಲ್ಲಿ ಬಂದನಂತರ ರಾಜ್ಯದ 3000 ರಷ್ಟು ಮಂಡಲ ಪಂಚಾ ಯತಿಗಳಲ್ಲಿ ದುಡಿಯುತ್ತಿದ್ದ 15000 ಕ್ಕೂ ಮೇಲ್ಪಟ್ಟ ನೌಕರರು ಅಂದರೆ ಕಸಗುಡಿಸುವವರು, ಬಾಲವಾಡಿ ಶಿಕ್ಷಕಿಯರು, ಪಂಪ್ ಆಪರೇಟರ್‌ಗಳು, ಬಿಲ್‌ಕಲೆಕ್ಟರ್‌ಗಳೆಲ್ಲ ತಮ್ಮ ಸಂಘ ಕಟ್ಟಿಕೊಂಡರು. ಹಳೆ ಪಂಚಾಯತಿಗಳಲ್ಲಿ ಗ್ರೂಪ್ ಪಂಚಾಯತಿಗಳಲ್ಲಿ 15-20 ವರ್ಷಗಳಿಂದ ದುಡಿಯುತ್ತಾ ಬಂದರೂ ತಮಗೆ ಹೆಚ್ಚಿನ ವೇತನವಿಲ್ಲದಿರುವುದನ್ನು ಕಂಡು ಮಂಡಲ ಪಂಚಾಯತ್ ವ್ಯವಸ್ಥೆ ಬಂದ ನಂತರವಾದರೂ ತಮ್ಮ ಜೀವನ ಸುಧಾರಿಸಬಹುದೆಂಬ ಆಸೆಯಿಂದ ಸಂಘಕಟ್ಟಿದರು. ಮೂರು ಸಲ ವಿಧಾನ ಸೌಧಚಲೋ ಕಾರ್ಯಕ್ರಮ ಹಮ್ಮಿಕೊಂಡರು. ಸ್ಥಳೀಯವಾಗಿಯೂ ಹೋರಾಟ ನಡೆಸಿದರು. ಆದರೆ ಅಂದಿನ ಜನತಾ ಪಕ್ಷದ ಸರಕಾರ, ಆನಂತರದ ಕಾಂಗ್ರೆಸ್ ಸರಕಾರವಾಗಲೀ, ಈಗಿನ ಜನತಾದಳದ ಸರಕಾರವಾಗಲೀ ಪಂಚಾಯತ್ ನೌಕರರ ಸ್ಥಿತಿ ಗತಿ ಕುರಿತು ಚಿಂತಿಸುವ, ಅವರ ಸಮಸ್ಯೆಗಳಿಗೆ ಸ್ಪಂದಿಸುವ ಸೌಹಾರ್ದತೆಯನ್ನು ತೊರಿಸಿಲ್ಲ. ಅವರೆಲ್ಲಾ ಬರೇ ಅಲ್ಪಕಾಲಿಕ ನೌಕರರು, ಅವರ ಕುರಿತು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲವೆಂಬ ರೀತಿಯಲ್ಲಿ ಅಧಿಕಾರಿಗಳೂ, ಮಂತ್ರಿಗಳೂ ವರ್ತಿಸುತ್ತಲೇ ಬಂದಿದ್ದಾರೆ.

ಗುಲ್ಬರ್ಗ ಜಿಲ್ಲೆಯಲ್ಲಿ ಎದ್ದು ನಿಂತ ಮಂಡಲ ಪಂಚಾಯತಿ ನೌಕರರು ಬಲಿಷ್ಟ ಸಂಘಟನೆಯ ಫಲವಾಗಿ ಅಲ್ಲಿಯ ನೌಕರರಿಗೆ ಕನಿಷ್ಠ ರೂ 960 ರೂ 780, ರೂ500 (ಬಿಲ್‌ಕಲೆಕ್ಟರ್, ಪಂಪ್‌ಅಟೆಂಡೆಂಡ್ ಕಸಗುಡಿಸುವವರು) ಸಂಘಟಿತರಾದ ಬಿಜಾಪುರ ಜಿಲ್ಲೆಯ ನೌಕರರು ಇದರ ಲಾಭ ಪಡೆಯುವಂತಾಯಿತು. ರಾಜ್ಯದ ಎಲ್ಲಾ ಪಂಚಾಯತಿ ನೌಕರರಿಗೆ ಅನುಗುಣವಾಗುವಂತೆ ಸರಿಸಮಾನವಾದ ವೇತನವನ್ನು ನಿರ್ಧರಿಸಬೇಕೆಂಬ ತಮ್ಮ ಒತ್ತಾಯಕ್ಕೆ ಸರಕಾರ ಮಣಿಯದಿದ್ದಾಗ ವೀರಪ್ಪ ಮೊಯಲಿ ಸರಕಾರದಲ್ಲಿ ಎಂ.ವೈ ಘೊರ್ಪಡೆಯವರು ಪಂಚಾಯತ್ ರಾಜ್ಯ ಮಂತ್ರಿಯಾಗಿದ್ದಾಗ ಬೃಹತ್ ರೂಪದ ಬೆಂಗಳೂರು ಚಲೋ ಕಾರ್ಯಕ್ರಮಕ್ಕೆ ಮಣಿದು ಸರಕಾರ ಗುಮಾಸ್ತೆ ಬಿಲ್ ಕಲಕ್ಟರ್‌ರರಿಗೆ ರೂ 900 ಪಂಪ್ ಅಟೆಂಡೆಂಟ್‌ರಿಗೆ ರೂ 600 ಹಾಗೂ ಕಸಗುಡಿಸುವವರು ಹಾಗೂ ಜವಾನರಿಗೆ 500 ಗರಿಷ್ಠ ಪಗಾರ ಪ್ರಕಟಿಸಿತು. ನೌಕರರ ಸೇವಾ ಪುಸ್ತಕ ತಯಾರಿಡಬೇಕೆಂಬ ಆದೇಶ ನೀಡಿತು. ಸಂಘಟನೆ ಇಲ್ಲದ ಕಡೆ ಸರಕಾರದ ಈ ಆದೇಶ ಪಾಲಿಸಲ್ಪಡಲಿಲ್ಲ. ಈಗಲೂ ಬಹಳಷ್ಟು ಕಡೆ ಅದು ಜ್ಯಾರಿಯಲಿಲ್ಲ. ನಮ್ಮ ಸಂಘಟನೆಯ ಫಲವಾಗಿ ಬೆಳಗಾವಿ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ವೇತನವನ್ನು ಕನಿಷ್ಠವೇತನವನ್ನಾಗಿ ಪಡೆಯಲು ಸಾಧ್ಯವಾಗಿದೆ. ಹೆಚ್ಚಿನ ಗ್ರಾಮ ಪಂಚಾಯಿತಿಗಳು ರೂ 50. ರೂ. 250 ಕ್ಕಿಂತ ಹೆಚ್ಚಿನ ವೇತನ ಕೊಡುತ್ತಿಲ್ಲ. ನಾಲ್ಕೈದು ತಿಂಗಳಾದರೂ ವೇತನ ನೌಕರರ ಕೈ ಸೇರುತ್ತಿಲ್ಲ.

ಸಂಪನ್ಮೂಲಗಳ ವಿಕೇಂದ್ರೀಕರಣ

ಗ್ರಾಮ ಅಭಿವೃದ್ಧಿ ಕಾರ್ಯ ಯಶಸಿಯಾಗಬೇಕಾದರೆ ಅಧಿಕಾರ ವಿಕೇಂದ್ರಿಕರಣದಿಂದಾಗಿ ಗ್ರಾಮಾಭಿವೃದ್ಧಿಯ ಫಲ ಸಾರ್ವಜನಿಕರಿಗೆ ದಕ್ಕ ಬೇಕಾದರೆ ಗ್ರಾಮ ಪಂಚಾಯತಿಯ ನೌಕರರೆಲ್ಲ ನಿಷ್ಠೆಯಿಂದ ಕೆಲಸ ಮಾಡಬೇಕಾಗಿರುವುದು ಅತ್ಯಗತ್ಯ.

ಈ ಅಂಶವನ್ನು ನೆನಪಿಟ್ಟುಕೊಂಡೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಕೇರಳ ಪ್ರಜಾಪ್ರಭುತ್ವರಂಗ ಸರಕಾರ ಗ್ರಾಮ ಪಂಚಾಯತ್ ನೌಕರರಿಗೆ ಸರಕಾರಿ ನೌಕರರಿಗೆ ಸಿಗುವ ವೇತನ ಹಾಗೆಯೇ ಇತರ ಸೌಲಭ್ಯಗಳನ್ನು ನೀಡುತ್ತಿದೆ. ಕೇರಳದಲ್ಲಿ ಅವರನ್ನು ನೌಕರರೆಂದು ಪರಿಗಣಿಸಿ ಅವರಿಗೆ ಸೇವಾ ಬಡ್ತಿ ಕೂಡಾ ನೀಡುತ್ತದೆ. ಆದರೆ ಕರ್ನಾಟಕ ಸರಕಾರ ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆಂದು ಹೇಳುತ್ತದೆ. ಅದರ ಕಾರ್ಯಾಚರಣೆಗೆ ಅವಶ್ಯಕವಾಗಿ ಬೇಕಾದ ಸಂಪನ್ಮೂಲಗಳನ್ನು ಬಜೆಟ್‌ನಲ್ಲಿ ಪ್ರತ್ಯೇಕವಾಗಿ ತೆಗೆದಿಡಲು ನಿರಾಕರಿಸುತ್ತದೆ. ಅಧಿಕಾರ ವಿಕೇಂದ್ರಿಕರಣದ ಅರ್ಥ ಸಂಪನ್ಮೂಲಗಳ ವಿಕೇಂದ್ರಿಕರಣ ಕೂಡಾ ಆಗಬೇಕಾಗಿದೆಂದು ಪಶ್ಚಿಮ ಬಂಗಾಳದ ಪಂಚಾಯತ್‌ರಾಜ್ ಮಂತ್ರಿ ಸೂರ್ಯಕಾಂತ್ ಮಿಶ್ರಾ ಅವರ ಅಭಿಪ್ರಾಯ. ಆದರೆ ಜನತಾದಳದ ಸರಕಾರದಲ್ಲಿ ಪಂಚಾಯತ್ ರಾಜ್ಯ ಮಂತ್ರಿಗಳಾದ ಎಂ.ಪಿ.ಪ್ರಕಾಶ್, ಅರ್ಥ ಮಂತ್ರಿ ಸಿದ್ದರಾಮಯ್ಯ ಅವರಿಗೆಲ್ಲ ಅಧಿಕಾರ ವಿಕೇಂದ್ರೀಕರಣದ ಜೊತೆಯಲ್ಲಿಯೇ ಸಂಪನ್ಮೂಲಗಳ ವಿಕೇಂದ್ರಿಕರಣ ಆಗಬೇಕೆಂಬ ಅಂಶ ಮುನ್ನವರಿಕೆ ಆದಂತೆ ಕಂಡುಬರುವುದಿಲ್ಲ. ಆ ಕಾರಣದಿಂದಲೇ ಹಣ ಇಲ್ಲ, ವೇತನ ಹೆಚ್ಚಿಸಲು ಸಾಧ್ಯವಿಲ್ಲ ಎಂದು ಹೇಳುತ್ತಲೇ ಬರುತ್ತಿದ್ದಾರೆ.

5000 ಜನರ ಮೂರು ದಿವಸಗಳ ಶಿಸ್ತುಬದ್ಧವಾದ ಐಕ್ಯ ಹೋರಾಟ ಸರಕಾರದ ಗಮನವನ್ನು ಸೆಳೆದಿದೆ. ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಗಂಭೀರ ಪ್ರಯತ್ನ ನಡೆದಿದೆ. ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ರೂ.900 ಕೊಡುವ ಸೇವಾನಿಯಮ ರಚಿಸುವ ಈಗಾಗಲೇ ಸೇವಯಲ್ಲಿರುವ ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಶೇ 30 ರಿಂದ ಶೇಕಡ 40 ರಷ್ಟು ಕಾರ್ಯದರ್ಶಿ ಸ್ಥಾನ ಮೀಸಲಿಡುವ ವಿಚಾರವನ್ನು ಮಂತ್ರಿ ಎಂ.ಪಿ. ಪ್ರಕಾಶ್ ಅವರು ತಿಳಿಯ ಪಡಿಸಿದ್ದಾರೆ. ಇದಕ್ಕೆ ಕೊನೆ ಸ್ವರೂಪ ಸಿಗಬೇಕಾಗಿದೆ. ಮುಂದಿನ ಬಜೆಟ್ ಅಧಿವೇಶನಕ್ಕೆ ಮುಂಚೆ ಯೂನಿಯನ್ನಿನ ಮುಖಂಡರೊಡನೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ವಿಚಾರ ಅವರಿಗಿದೆ ಎಂಬುದನ್ನು ತಿಳಿಯಪಡಿಸಿದ್ದಾರೆ. ಸಂಘ ಶಕ್ತಿ ಮತ್ತು ಹೋರಾಟದಲ್ಲಿ ವಿಶ್ವಾಸವಿಟ್ಟು ನೌಕರರೆಲ್ಲ ತಂತಮ್ಮ ಊರಿಗೆ ಹಿಂದಿರುಗಿದ್ದಾರೆ.

ಪಂಚಾಯತಿ ನೌಕರರ ಹೋರಾಟದ ಫಲ

ಗ್ರಾಮ ಪಂಚಾಯತಿ ನೌಕರರ ಮೂರು ದಿವಸದ ಧರಣಿಯ ಫಲವಾಗಿ 28.2.97 ರಂದು ಪಂಚಾಯತ್ ರಾಜ್ ಮಂತ್ರಿ ಎಂ.ಪಿ.ಪ್ರಕಾಶ್ ಅವರ ಜೊತೆಯಲ್ಲಿ ನಡೆದ ಚರ್ಚೆ ಸ್ವಲ್ಪ ಮಟ್ಟಿನ ಫಲ ನೀಡಿದೆ. ಸಿಪಿಐ(ಎಂ) ಶಾಸಕರಾದ ಶ್ರೀರಾಮರೆಡ್ಡಿ, ಎನ್.ಕೆ.ಉಪಾಧ್ಯಾಯ, ಮಾರುತಿ ಮಾನ್ಪಡೆ ಮತ್ತು ವಿ.ಪಿ.ಕುಲಕರ್ಣಿಯವರು ಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡಿದಾಗ ನೌಕರ ವೇತನವನ್ನು ಹೆಚ್ಚಿಸುವ, ಸರಕಾರದ ಮತ್ತು ಯೂನಿಯನ್ನಿನ ಪ್ರತಿನಿಧಿಗಳನ್ನು ಪಶ್ಚಿಮಬಂಗಾಳಕ್ಕೆ ಕಳುಹಿಸಿ ಅಲ್ಲಿಯ ಪಂಚಾಯತಿ ನೌಕರರ ಸ್ಥಿತಿಗತಿ ಕುರಿತು ವರದಿ ತರಿಸುವ, ಕೇರಳ - ಪಶ್ಚಿಮಬಂಗಾಳದ ಮಾದರಿಯನ್ನು ಅಭ್ಯಾಸ ಮಾಡಿ, ರಾಜ್ಯದಲ್ಲಿ ಅದನ್ನು ಜಾರಿಯಲ್ಲಿ ತರುವ ಸಾಧ್ಯತೆಯನ್ನು ಅಭ್ಯಾಸ ಮಾಡುವ, ಹಾಗೆಯೇ ಪಂಚಾಯತ್ ಕಾರ್ಯದರ್ಶಿ ಹುದ್ದೆಗೆ ಈಗಿರುವ ನೌಕರರ ಬಡ್ತಿಗೆ ಶೇ 40 ರಷ್ಟು ಮೀಸಲಿಡುವ ಸರಕಾರದ ವಿಚಾರವನ್ನು ಮಾನ್ಯ ಮಂತ್ರಿಯವರು ವ್ಯಕ್ತಮಾಡಿದರು. ಇದು ಮೂರು ದಿವಸಗಳಲ್ಲಿ ಬೆಂಗಳೂರಿನಲ್ಲಿ ನಡೆದ ಹೋರಾಟದ ಪ್ರತಿಫಲವೆಂದು ಪರಿಗಣಿಸಬೇಕು.

ಸಿಐಟಿಯು ಮೈಸೂರು ಜಿಲ್ಲಾ 3ನೇ ಸಮ್ಮೇಳನ

ಕಾರ್ಮಿಕರು ಭ್ರಷ್ಟಾಚಾರ ಜಾತೀಯ ತೆಯ ಪಿಡುಗುಗಳ ವಿರುದ್ಧ ಹೋರಾಟ ನಡೆಸಬೇಕು. ವ್ಯವಸ್ಥೆಯ ಬದಲಾವಣೆಗಾಗಿ ಕಾರ್ಮಿಕರು ಹೋರಾಟ ಮಾಡಿ ಯಶಸ್ವಿಯಾಗಬೇಕಾದರೆ ಎಲ್ಲ ಶೋಷಿತ ಜನರ ಸಂಘಟನೆ ಮಾಡಬೇಕು ಎಂದು ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರು, ರಾಜ್ಯಸಮಿತಿ ಅಧ್ಯಕ್ಷರೂ ಆದ ಎಸ್.ಸೂರ್ಯನಾರಾಯಣ ರಾವ್‌ರವರು ಹೇಳಿದರು.

ಸಿಐಟಿಯು ಮೂರನೇ ಜಿಲ್ಲಾ ಸಮ್ಮೇಳನವನ್ನು ಮೈಸೂರಿನಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಸರಕಾರ ಬದಲಾದರು ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ದೊರಕುತ್ತಿಲ್ಲ, ಯಾವ ರಾಜಕೀಯ ಪಕ್ಷವು ಕಾರ್ಮಿಕರ ಪರ ಧೋರಣೆ ಹೊಂದಿರುವದಿಲ್ಲ, ಕಾರ್ಮಿಕವರ್ಗದ ಬೆಂಬಲ ಪಡೆದು ಅಧಿಕಾರದಲ್ಲಿರುವ ರಾಜ್ಯ ಸರಕಾರ ಕೇಂದ್ರದ ಸಂಯುಕ್ತ ರಂಗ ಸರಕಾರ ಕಾರ್ಮಿಕರ ಯಾವುದೇ ಸಮಸ್ಯೆ ಬಗೆಹರಿಸಿಲ್ಲ ಎಂದರು. ಕಾರ್ಮಿಕರ ಮೇಲೆ ಗೊಲಿಬಾರ್ ಮಾಡುವುದು ನಿಂತಿಲ್ಲ, ವೆಳ್ಳಿಯಪ್ಪ ಕಾರ್ಮಿಕರ ಮೇಲೆ ನಡೆದ ಗೊಲಿಬಾರ್ ಇದಕ್ಕೆ ಸಾಕ್ಷಿ ಎಂದು ತಿಳಿಸಿದರು. ಜಾತಿ ಸಮ್ಮೇಳನ ನಡೆಸಿ ಜಾತಿ, ಭಾಷೆಗಳನ್ನು ಕೆರಳಿಸಿ ಅದರಿಂದ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಾರೆ. ಕಾರ್ಮಿಕ ವರ್ಗದ ಮೇಲೆ ಇದರ ಪರಿಣಾಮಬೀರಿ ಕಾರ್ಮಿಕರು ಜಾತಿ ಆಧಾರದಲ್ಲಿ ವಿಭಜನೆ ಆಗಬಾರದು. ಜಾತಿ ಭಾವನೆ ಮೀರಿನಿಂತು ಎಲ್ಲ ತ್ಯಾಗಕ್ಕೂ ಸಿದ್ಧರಾಗಬೇಕು, ಐಕ್ಯತೆಯಿಂದ ಹೋರಾಟಕ್ಕೆ ಸಿದ್ಧರಾಗಬೇಕು, ಸಂಘಟನೆ ಬಲಪಡಿಸಬೇಕೆಂದು ಕರೆ ನೀಡಿದರು.

ಜಿಲ್ಲೆಯಲ್ಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು, ಸಿಐಟಿಯು ಚಟುವಟಿಕೆಗಳು, ಮುಂದಿನ ಕರ್ತವ್ಯಗಳ ಬಗ್ಗೆ ಪ್ರಧಾನ ಕಾರ್ಯದರ್ಶಿ ಮೊಹನ್ ಕುಮಾರ್ ಮಂಡಿಸಿದ ವರದಿ ಮೇಲೆ 12 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ಸಲಹೆ ನೀಡಿದರು. ಸಿಐಟಿಯು ಬಲಿಷ್ಟಗೊಳಿಸುವುದು, ವಳ್ಳಿಯಪ್ಪ ಕಾರ್ಮಿಕರ ಮೇಲೆ ನಡೆದ ಗೊಲಿಬಾರ್‌ನ್ನು ಖಂಡಿಸಿ ಬಂಧಿಸಿದ ಸಿಐಟಿಯು ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ವಿಜೆಕೆ ನಾಯರ್ ಮತ್ತು ಇತರರನ್ನು ಬಿಡುಗಡೆ ಮಾಡಿ ಮೊಕದ್ದಮೆಗಳನ್ನು ವಾಪಸ್ ಮಾಡಬೇಕು, ಮುಚ್ಚಿರುವ ಕಾರ್ಖಾನೆ ಪ್ರಾರಂಭಿಸಿ ಕೆಲಸ ಕೊಡಬೇಕು, ಬೆಲೆ ಏರಿಕೆ ತಡೆಗಟ್ಟಬೇಕು, ಇಎಸ್ಐ ಸೌಲಭ್ಯ ಮಿತಿಯನ್ನು 6500 ರೂ. ನಿಂದ 5000 ರೂ.ಗೆ ಇಳಿಸಬೇಕು, ವಿಮಾ ಕ್ಷೇತ್ರ ಖಾಸಗೀಕರಣ ಕೈಬಿಡಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ನೂತನ ಜಿಲ್ಲಾ ಸಮಿತಿಗೆ 17 ಜನರು ಆಯ್ಕೆಯಾದರು. ಅಧ್ಯಕ್ಷರು-ಜಿ.ಜಯರಾಂ, ಉಪಾಧ್ಯಕ್ಷರು-ಕೆ.ಶಿವಪ್ಪ, ಪ್ರಭಾಕರ್, ಪ್ರಧಾನ ಕಾರ್ಯದರ್ಶಿ-ಮೋಹನ್‌ಕುಮಾರ್, ಕಾರ್ಯದರ್ಶಿಗಳು-ಹೆಚ್.ಎಸ್ ಜಗದೀಶ್, ಎಂ.ಎನ್. ರಾಮು, ಖಜಾಂಚಿ-ಎ.ಪಿ.ಪುಟ್ಟಣ್ಣ, ಜಿಲ್ಲಾ ಸಮಿತಿಯ ಸದಸ್ಯರಾಗಿ ಗಾಯಿತ್ರಿ ಗೊವಿಂದರಾಜು, ನರಸಿಂಹ ರಾವ್, ಕೃಷ್ಣೆಗೌಡ, ಸ್ವಾಮಣ್ಣ ಸುಂದರ್ ರಾಜ್‌ರವರನ್ನು ಆಯ್ಕೆ ಮಾಡಲಾಯಿತು.

ಕಾಮ್ರೇಡ್ ಡೆಂಗ್‌ರವರಿಗೆ ಶ್ರದ್ಧಾಂಜಲಿ

ಫೆಬ್ರವರಿ 19 ರಂದು ನಿಧನರಾದ ಚೀನಾದ ಹಿರಿಯ ಮುಂದಾಳು ಕಾಮ್ರೇಡ್ ಡೆಂಗ್‌ಕ್ಸಿಯಾಪಿಂಗ್‌ರು ಸಮಾಜವಾದೀ ಚೀನಾವನ್ನು ಕಟ್ಟುವಲ್ಲಿ ಹಾಗೂ ಒಟ್ಟಾರೆ ಕಮ್ಯುನಿಸ್ಟ್ ಆಂದೋಲನಕ್ಕೆ ಅವರು ನೀಡಿದ ಕೊಡುಗೆಗಳನ್ನು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಸ್ಮರಿಸಿಕೊಳ್ಳಲಾಯಿತು.

ಚೀನಾದ ಕ್ರಾಂತಿಯ ಪ್ರಮುಖ ಮೈಲಿಗಲ್ಲಾದ ಲಾಂಗ್ ಮಾರ್ಚ್‌ನಲ್ಲಿ ಒಬ್ಬ ಸೇನಾಪತಿಯಾಗಿ ಭಾಗವಹಿಸಿದ ಡೆಂಗ್‌ರವರು, ಕ್ರಾಂತಿಯ ನಂತರ ಸಮಾಜವಾದೀ ಚೀನಾವನ್ನು ಕಟ್ಟುವ ಕೆಲಸದಲ್ಲಿಯೂ ಪ್ರಮುಖ ಪಾತ್ರವಹಿಸಿದರು. 'ಸಾಂಸ್ಕೃತಿಕ ಕ್ರಾಂತಿ'ಎಂದು ಹೆಸರಿಸಿದ ಕಾಲಘಟ್ಟದಲ್ಲಿಯೇ ಅದರದಲ್ಲಿದ್ದ ತಪ್ಪುಗಳನ್ನು ತೋರಿಸಿ ಕೊಟ್ಟು ಅದಕ್ಕೆ ಬೆಲೆ ತೆರಬೇಕಾಗಿ ಬಂದುದನ್ನು, ನಂತರ ಚೀನೀ ಗುಣಲಕ್ಷಣಗಳುಳ್ಳ ಸಮಾಜವನ್ನು ಕಟ್ಟುವ ನೀತಿಗಳನ್ನು ರೂಪಿಸಿ ಸಮಾಜವಾದೀ ಚೌಕಟ್ಟಿನೊಳಗೇ ಚೀನಾವನ್ನು ಒಂದು ಆಧುನಿಕ ರಾಷ್ಟ್ರವಾಗಿ ಪರಿವರ್ತಿಸುವ ಅಗತ್ಯವನ್ನು ಹಾಗೂ ಸಾಧ್ಯತೆಗಳನ್ನ ಮುಂದಿಟ್ಟುದುದನ್ನು ಈ ಸಭೆಯಲ್ಲಿನ ಭಾಷಣಕಾರರು ವಿಶ್ಲೇಷಿಸಿದರು. ಹಿಂದಿನ ಸೋವಿಯತ್ ಒಕ್ಕೂಟದಲ್ಲಾದಂತೆ ಸುಧಾರಣೆಗಳ ಹೆಸರಲ್ಲಿ ಸಮಾಜವಾದವನ್ನೇ ಕಳಚುವ ದಾರಿ ಹಿಡಿಯದೆ ಸಮಾಜವಾದಿ ಮಾರ್ಗದಲ್ಲೇ ದೃಢವಾಗಿ ಚೀನಾ ಮುಂದುವರಿಯುವಲ್ಲಿ ಡೆಂಗ್‌ರ ಪಾತ್ರವನ್ನು ಸ್ಮರಿಸಲಾಯಿತು. ಸಮಾಜವಾದಿ ಚೀನಾದಲ್ಲಿ ಹಾಗೂ ಬಂಡವಾಳಶಾಹಿ ದಾರಿ ಹಿಡಿದಿರುವ ಭಾರತದಲ್ಲಿನ ಆರ್ಥಿಕ ಸುಧಾರಣೆ ಗಳ ಮೂಲಭೂತ ಭಿನ್ನತೆಗಳನ್ನು ಈ ಸಂದರ್ಭದಲ್ಲಿ ವಿಶ್ಲೇಷಿಸಲಾಯಿತು.

ಫೆಬ್ರವರಿ 25 ರಂದು ನಡೆದ ಈ ಸಭೆ ಯಲ್ಲಿ ಜನತಾದಳ ಮುಖಂಡ ಹಾಗೂ ಭಾರತ-ಚೀನಾ ಮೈತ್ರಿಸಂಘ, ಕರ್ನಾಟಕದ ಅಧ್ಯಕ್ಷ ಚಂದ್ರಶೇಖರ್, ಸಿಪಿಐ(ಎಂ)ಕೇಂದ್ರಸಮಿತಿ ಸದಸ್ಯರೂ, ರಾಜ್ಯಕಾರ್ಯದರ್ಶಿಗಳೂ ಆದ ಪಿ. ರಾಮಚಂದ್ರರಾವ್, ಕಾಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್, ಶಾಸಕ ಶ್ರೀರಾಮರೆಡ್ಡಿ ಮಾತನಾಡಿದರು. ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು

ಈಶಾನ್ಯ ಭಾರತದ ಪುಟ್ಟ ರಾಜ್ಯ ತ್ರಿಪುರಾದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಭಾರೀ ಶಸ್ತ್ರಸಜ್ಜಿತರಾದ ಎರಡು ಉಗ್ರಗಾಮಿ ಗುಂಪುಗಳನ್ನೆದುರಿಸುವಲ್ಲಿ ಸೇನೆಯ ನೆರವು ಪಡೆಯಲು ರಾಜ್ಯ ಸರಕಾರ ಕೆಲವು ಪ್ರದೇಶಗಳನ್ನು ಗಲಭೆ ಪೀಡಿತ ಪ್ರದೇಶ ಗಳೆಂದು ಸಾರುವ ಅಪರೂಪದ ವಿಶೇಷ ವಹಿಸಬೇಕಾಗಿ ಬಂದಿದೆ. ಏಕೆ ಇಂತಹ ಕ್ರಮಗಳು ಎಂಬುದನ್ನು ವಿವರಿಸುತ್ತಿದ್ದಾರೆ ಈ ಪ್ರದೇಶದ ಸಮಸ್ಯೆಗಳ ನಿಕಟ ಪರಿಚಯವಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರು.



ತ್ರಿಪುರಾ: ಐಕ್ಯತೆ ಮತ್ತು ಶಾಂತಿ ಉಳಿಸಲು ಎಡರಂಗ ಸರಕಾರದ ಹೋರಾಟ

ತ್ರಿಪುರಾ ಒಂದು ಕ್ಲಿಷ್ಟ ಜನಾಂಗ ಸಮಸ್ಯೆ ಹೊಂದಿರುವ ರಾಜ್ಯ ಎಂದು ಎಲ್ಲರಿಗೂ ಗೊತ್ತಿದೆ. ಸ್ವಾತಂತ್ರ್ಯದ ವೇಳೆಗೆ ಬುಡಕಟ್ಟು ಜನಗಳೇ ಹೆಚ್ಚಾಗಿದ್ದ ಈ ರಾಜ್ಯದಲ್ಲಿ ಹಿಂದಿನ ಪೂರ್ವ ಪಾಕಿಸ್ತಾನದಿಂದ ನಡೆದ ವಲಸೆಯಿಂದಾಗಿ ಜನ ಸಂಖ್ಯೆಯ ಪ್ರಮಾಣದಲ್ಲಿ ಭಾರೀ ಏರು ಪೇರಾಗಿ ಈಗ ಬುಡಕಟ್ಟು ಜನಗಳ ಸಂಖ್ಯೆ 30% ಕ್ಕಿಳಿದಿದೆ. ಬಂಗಾಳಿ ಭಾಷಿಕರ ಸಂಖ್ಯೆ 70%ಕ್ಕೇರಿದೆ. ಇಲ್ಲಿ ಪಾಳೆಯಗಾರಿ ದಮನದ ವಿರುದ್ಧ ಬುಡಕಟ್ಟು ಜನಗಳ ಆಂದೋಲನಕ್ಕೆ ನೇತೃತ್ವ ನೀಡಿ ಆಳವಾದ ನೆಲೆ ಗಳಿಸಿಕೊಂಡಿರುವ ಕಮ್ಯುನಿಸ್ಟ್ ಆಂದೋಲನ ಬುಡಕಟ್ಟು ಜನಗಳ ಸ್ವಂತಿಕೆಯನ್ನು ಕಾಯ್ದು ಕೊಳ್ಳುವ ಬಗ್ಗೆ ಅದರ ಸರ್ವತೋಮುಖ ಬೆಳವಣಿಗೆಯ ಬಗ್ಗೆ ಸದಾ ಕಾಳಜಿಯಿಂದ ಕೆಲಸ ಮಾಡಿದೆ.

ಜನಾಂಗೀಯ ಐಕ್ಯತೆಯ ಮಾದರಿ ರಾಜ್ಯ

ಇಡೀ ಈಶಾನ್ಯ ಭಾರತದ ಪ್ರದೇಶಗಳಂತೆ ತ್ರಿಪುರಾ ಕೂಡಾ ವಿಪರೀತ ಹಿಂದುಳಿಕೆಯಿಂದ ನರಳುತ್ತಿದೆ. ಆದರೆ ಇಡೀ ಈಶಾನ್ಯ ಪ್ರದೇಶದಲ್ಲಿನ ಜನಾಂಗೀಯ ತಿಕ್ಕಾಟಕ್ಕೆ ಇದೊಂದು ಅಪವಾದ. ಜನಾಂಗೀಯ ಐಕ್ಯತೆ ಇಲ್ಲಿಯ ಮುಖ್ಯ ಅಂಶ. ತಮ್ಮ ಬದುಕನ್ನು ಪರಿವರ್ತಿಸಿಕೊಳ್ಳುವ ಹೋರಾಟದಲ್ಲಿ ತ್ರಿಪುರಾದ ಬುಡಕಟ್ಟು ಜನಗಳು ಮತ್ತು ಇತರರು ಒಗ್ಗಟ್ಟಾದುದು ಕಮ್ಯುನಿಸ್ಟ್ ಆಂದೋಲನದ ಪ್ರಯತ್ನದಿಂದಾಗಿ. ಈ ರಾಜಕೀಯ ವಾಸ್ತವತೆಯನ್ನು ಬುಡಮೇಲು ಮಾಡುವುದೇ ಕಾಂಗ್ರೆಸ್-ಟಿಯುಜೆಎಸ್‌ನ ಗುರಿ. ಕಮ್ಯುನಿಸ್ಟ್ ಪ್ರಭಾವವನ್ನು ಹಿಮ್ಮೆಟ್ಟಿಸಲು ಬುಡಕಟ್ಟು ಜನಗಳು ಮತ್ತು ಇತರರ ನಡುವಿನ ಒಗ್ಗಟ್ಟನ್ನು ಮುರಿಯುವುದೇ ಈ ಗುರಿಸಾಧನೆಗೆ ಇವರಿಗೆ ಆಯುಧ. 1988-93 ರಲ್ಲಿ ಒಂದೆಡೆ ಕಾಂಗ್ರೆಸ್ ಬಂಡವಾಳಶಾಹಿ ಸಂಕುಚಿತವಾದವನ್ನು ತುಂಬಿ ಬುಡಕಟ್ಟು ಜನಗಳ ಬಗ್ಗೆ ದ್ವೇಷ ಹರಡಿಸಲು ಪ್ರಯತ್ನಿಸಿದರೆ, ಟಿಯುಜೆಎಸ್ ಬುಡಕಟ್ಟು ಜನಗಳಲ್ಲಿ ಪ್ರತ್ಯೇಕತಾವಾದ ತುಂಬಲು ಪ್ರಯತ್ನಿಸಿತು. ಆದರೂ ಈ ಪರಸ್ಪರ ತದ್ವಿರುದ್ಧ ಹಿತಾಸಕ್ತಿಗಳ ಪಕ್ಷಗಳು ಒಟ್ಟು ಸೇರಿಯೂ ದಮನ ಚಕ್ರದಿಂದ ಕಮ್ಯುನಿಸ್ಟರನ್ನು ಮೆಟ್ಟಲಾಗಲಿಲ್ಲ. ಉನ್ನತ ರಾಜಕೀಯ ಪ್ರಜ್ಞೆ ಹಾಗೂ ಎರಡು ಕೋಮುಗಳ ನಡುವಿನ ಸೌಹಾರ್ದದ ಬಲವಾದ ಬೆಸುಗೆ ಹಾಗೂ ಸಿಪಿಐ(ಎಂ)ನ ಮುಖಂಡತ್ವದಿಂದಾಗಿ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳು ಭಯೋತ್ಪಾದನೆಯನ್ನು ಹಿಮ್ಮೆಟ್ಟಿಸಿ 1993ರಲ್ಲಿ ಕಾಂಗ್ರೆಸ್-ಟಿಯುಜೆಎಸ್ ಕೂಟಕ್ಕೆ ಭಾರಿ ಸೋಲುಣ್ಣಿಸಲು ಸಾಧ್ಯವಾಯಿತು.

ಕಳೆದ ನಾಲ್ಕು ವರ್ಷಗಳಲ್ಲಿ ಎಡರಂಗ ಸರಕಾರ ಜನಗಳ ಐಕ್ಯತೆಯನ್ನು ಮತ್ತಷ್ಟು ಬೆಸೆಯಲು ಜನಗಳ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಕ್ರಮ ಕೈಗೊಂಡಿದೆ. ಆದರೂ ಉಗ್ರಗಾಮಿ ಚಟುವಟಿಕೆಗಳು ಮುಂದುವರಿದವು. ಏಕೆಂದರೆ ಟಿಯುಜೆಎಸ್ ಮತ್ತು ಟಿಎನ್‌ವಿಗಳೊಂದಿಗೆ ಕಾಂಗ್ರೆಸ್(ಐ)ನ ಸಂಬಂಧಗಳು ಇನ್ನೂ ಮುಂದುವರಿದಿವೆ. ಮೂರು ಕಡೆಗಳಿಂದ ಸುತ್ತುವರಿದಿರುವ 800 ಕಿ.ಮಿ. ಅಂತರ ರಾಷ್ಟ್ರೀಯ ದೀರ್ಘ ಗಡಿ ಹಾಗೂ ದುರ್ಗಮ ಕಾಡುಪ್ರದೇಶಗಳಿಂದಾಗಿ ಇಡೀ ಗಡಿಯ ಕಾವಲು ಬಹಳ ಕಷ್ಟದ ಕೆಲಸವಾಗಿದೆ. ಇದರಿಂದ ಉಗ್ರಗಾಮಿ ಗುಂಪುಗಳು ಗಡಿಯಾಚೆ ಕ್ಯಾಂಪುಗಳನ್ನು ಮಾಡಿಕೊಳ್ಳಲು, ಈಶಾನ್ಯ ಭಾರತದ ಇತರ ಉಗ್ರಗಾಮಿ ಗುಂಪುಗಳಾದ ಎನ್‌ಎಸ್‌ಸಿಎನ್ ಮತ್ತು ಉಲ್ಫಾ ಇತ್ಯಾದಿಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಮತ್ತು ಎಕೆ-47. ಎಕೆ-56 ನಂತಹ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪಡೆಯಲು ಸಾಧ್ಯ ವಾಗಿದೆ. ಈ ಪ್ರದೇಶಗಳಲ್ಲಿ ಅಮೆರಿಕಾದ ಹಾಗೂ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆಗಳಾದ ಸಿಐಎ ಮತ್ತು ಐಎಸ್‌ಐ ಸಕ್ರಿಯವಾಗಿವೆ.

ಸಮಸ್ಯೆಗಳು ಮತ್ತು ರಾವ್ ಸರಕಾರದ ಅಸಹಕಾರ

ಕಳೆದ ವರ್ಷ ಎಡರಂಗ ಮೂರು ಹಂತಗಳ ಪಂಚಾಯತ್ ಚುನಾವಣೆಗಳು ಮತ್ತು ನಂತರ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ತನ್ನ ಪ್ರಭಾವವನ್ನು ಇನ್ನಷ್ಟು ಕ್ರೋಢೀಕರಿಸಿದ ನಂತರ ಕಾಂಗ್ರೆಸ್ ಮತ್ತು ಹತಾಶ ಟಿಯುಜೆಎಸ್, ಟಿಎನ್‌ವಿಯನ್ನು ತಮ್ಮ ಕೂಟಕ್ಕೆ ಸೆಳೆದುಕೊಂಡವು. ಈ ಹಿಂದೆ 1987-88 ರಲ್ಲಿ ಇದೇ ಟಿಎಸ್‌ವಿ ಬಳಸಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಿ ಅದನ್ನೇ ನೆವವಾಗಿಟ್ಟುಕೊಂಡು ರಾಜೀವ್‌ಗಾಂಧಿ ಸರಕಾರ ತ್ರಿಪುರಾಕ್ಕೆ ಸೇನೆ ಕಳಿಸಿ ಚುನಾವಣೆಗಳಲ್ಲಿ ಮೋಸ ನಡೆಸಿದ್ದನ್ನು ಅದರ ಫಲವಾಗಿ ನಂತರ ಸಂಪೂರ್ಣ ಕುಖ್ಯಾತಿ ಗಳಿಸಿದ ಕಾಂಗ್ರೆಸ್-ಟಿಯುಜೆಎಸ್ ಸರಕಾರ ಅಧಿಕಾರಕ್ಕೆ ಬಂದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ನಂತರ ಟಿಎನ್‌ವಿಯ ಬಹುಮಂದಿ ಶರಣಾಗತರಾದರೂ ಅದರ ಒಂದು ವಿಭಾಗ ಎನ್.ಎಲ್.ಎಫ್.ಟಿ ಎಂದು ಮುಂದುವರಿಯಿತು. ಅದರ ಜೊತೆಗೆ ಇನ್ನೊಂದು ಉಗ್ರಗಾಮಿ ಗುಂಪು ಎಟಿಟಿಎಫ್ ವಿದೇಶಿ ಏಜೆಂಟ್‌ಗಳ ನೆರವಿನಿಂದ ಗಡಿಯಲ್ಲಿ ಸಕ್ರಿಯವಾಗಿದೆ. ಬುಡಕಟ್ಟೇತರ ಜನರನ್ನು ಸಂಪೂರ್ಣವಾಗಿ ಹೊರದಬ್ಬಬೇಕು, ಇಲ್ಲವೇ ಭಾರತದಿಂದ ಸ್ವತಂತ್ರವಾಗ ಬೇಕು ಎಂಬುದು ಈ ಎರಡು ಸಂಘಟನೆಗಳ ಬೇಡಿಕೆ.

ಕೇಂದ್ರದಲ್ಲಿ ನರಸಿಂಹ ರಾವ್ ಸರಕಾರ ಇದುವರೆಗೆ ತನ್ನ ಪೋಲೀಸ್ ಪಡೆಯನ್ನು ಆಧುನೀಕರಣಗೊಳಿಸಿ ಹೊಸ ಮೀಸಲು ಬೆಟಾಲಿಯನ್‌ಗಳನ್ನು ರಚಿಸಿ ಈ ಕಷ್ಟಕರ ಸ್ಥಿತಿಯನ್ನು ಎದುರಿಸುವ ರಾಜ್ಯ ಸರಕಾರದ ಪ್ರಯತ್ನಗಳಿಗೆ ಸಹಕಾರ ನೀಡಲು ನಿರಾಕರಿಸುತ್ತಾ ಬಂತು. ಅಸ್ಸಾಂ ರೈಫಲ್ಸ್‌ನ ತುಕಡಿಗಳನ್ನು ಬಳಸಲಾಗಲೀ, ದೀರ್ಘ ದುರ್ಗಮ ಗಡಿಯ ಕಾವಲಿಗೆ ತನ್ನ ಅಧೀನದಲ್ಲಿರುವ ಬಿಎಸ್‌ಎಫ್‌ನ್ನು ಒದಗಿಸಲಾಗಲೀ ಕಾಂಗ್ರೆಸ್(ಐ) ಸರಕಾರ ನಿರಾಕರಿಸಿತು.

ಈಗ ಸಂಯುಕ್ತ ರಂಗ ಸರಕಾರ ಬಂದ ಮೇಲಷ್ಟೇ ತ್ರಿಪುರಾ ರಾಜ್ಯ ರೈಫಲ್ಸ್ ಎಂಬ ಹೊಸ ಸಶಸ್ತ್ರ ಪಡೆಯನ್ನು ರಚಿಸಲು ಅಗತ್ಯ ಅನುಮತಿ ಹಾಗೂ ಹಣ ಕೇಂದ್ರದಿಂದ ದೊರೆತಿದೆ.

ಉಗ್ರಗಾಮಿಗಳ ದುಷ್ಟಯೋಜನೆ

ಈ ಪಡೆಯನ್ನು ರಚಿಸಿ ಕಾರ್ಯೋನ್ಮುಖಗೊಳಿಸಲು ಇನ್ನೂ ಕೆಲವು ತಿಂಗಳುಗಳು ಬೇಕಾಗಬಹುದು. ಅಷ್ಟರೊಳಗೆ ಹಿಂಸಾಚಾರವನ್ನು ತೀವ್ರಗೊಳಿಸುವ ಲೆಕ್ಕಾಚಾರವನ್ನು ಎಟಿಟಿಎಫ್ ಮತ್ತು ಎನ್‌ಎಲ್‌ಎಫ್‌ಟಿ ಹಾಕಿದಂತಿದೆ. ಡಿಸೆಂಬರ್‌ನಲ್ಲಿ ಕಲ್ಯಾಣ ಪುರ್‌ನಲ್ಲಿ 25 ಜನರನ್ನು ಕೊಲ್ಲಲಾಯಿತು. ನಂತರ ತಾಯ್ಡು, ಜರುಲ್ ಬಾಚಿಗಳಲ್ಲಿ ಇಂತಹುದೇ ಭಯಾನಕ ಕೃತ್ಯ ನಡೆಸಿದವು. ಕೊನೆಗೆ ಖೋವೈ ಪ್ರದೇಶದಲ್ಲಿ ಸಾಮೂಹಿಕ ಹಿಂಸಾಚಾರಕ್ಕೆ ಇವು ಇಳಿದವು. ಹತ್ತಾರು ಗಂಡಸರು, ಹೆಂಗಸರು, ಮಕ್ಕಳು ಇವರ ದುಷ್ಟ ಯೋಜನೆಗೆ ಬಲಿಯಾಗಿದ್ದಾರೆ. ಜನಾಂಗಗಳ ನಡುವೆ ಗಲಭೆ ಎಬ್ಬಿಸುವುದು, ಕೋಮು ತಿಕ್ಕಾಟಗಳಿಗೆ ಕಿಡಿ ಹಚ್ಚುವುದು ಹಾಗೂ ಈ ಮೂಲಕ ಇಡೀ ರಾಜ್ಯವನ್ನು ಅಸ್ಥಿರಗೊಳಿಸುವುದು ಇವರ ದುಷ್ಟ ಯೋಜನೆಯಿದ್ದಂತಿದೆ. ಈ ಬೆಂಕಿಗೆ ತುಪ್ಪ ಹುಯ್ಯಲು ಕುಖ್ಯಾತ ಆಮ್ರಾ ಬಂಗಾಲಿಯಂತಹ ಬಂಗಾಳೀ ಸಂಕುಚಿತವಾದಿ ಸಂಘಟನೆಗಳು ಕಾತುರವಾಗಿವೆ.

ವಿಶೇಷ ಕ್ರಮ

ಇಂತಹ ಹಿನ್ನೆಲೆಯಲ್ಲಿ ಡಿಸೆಂಬರ್ 1996 ರಲ್ಲಿ ತ್ರಿಪುರಾ ಎಡರಂಗ ಸರಕಾರ ಗಂಭೀರ ಪರಿಸ್ಥಿತಿಯನ್ನು ಎದುರಿಸಲು ವಿಶೇಷ ಕ್ರಮಗಳು ಅಗತ್ಯ ಎಂದು ತೀರ್ಮಾನಿಸಿತು. ಕೇಂದ್ರದ ಸಹಕಾರವನ್ನು ಕೇಳಲಾಯಿತು. ಕೇಂದ್ರದೊಂದಿಗೆ ಮಾತುಕತೆಯ ನಂತರ ರಾಜ್ಯ ಪೋಲೀಸ್ ಪಡೆ, ಕೇಂದ್ರದ ಅರೆ ಸೈನಿಕ ಪಡೆಗಳು ಹಾಗೂ ಸೇನಾ ಪಡೆಗಳ ಜಂಟಿ ಸಂಯೋಜನೆ ಏರ್ಪಟ್ಟಿತು. ಆಗ ಉಗ್ರಗಾಮಿಗಳು ತಮ್ಮ ಧಾಳಿಗಳನ್ನು ತೀವ್ರಗೊಳಿಸಿದರು. ಆಗಲೇ ಖೋವೈನ ಭಯಾನಕ ಘಟನೆ ನಡೆದದ್ದು. ಈ ಘಟ್ಟದಲ್ಲಿ ರಾಜ್ಯ ಸರಕಾರ ಗಂಭೀರ ಸ್ಥಿತಿ ಏರ್ಪಡುವುದನ್ನು ತಡೆಯಲು ಹಾಗೂ ಸಂಕುಚಿತವಾದಿ ಬಂಗಾಳಿ ಸಂಘಟನೆಗಳ ಹಾಗೂ ಬುಡಕಟ್ಟು ಉಗ್ರಗಾಮಿಗಳ ಕುಮ್ಮಕ್ಕಿನಿಂದಾಗುವ ಕೋಮು ಗಲಭೆಗಳನ್ನು ತಡೆಯಲು ಸೇನೆಯ ನೆರವು ಪಡೆಯಲು ನಿರ್ಧರಿಸಿತು.

ಇದೊಂದು ಅಪರೂಪದ ಕ್ರಮ. ಜನಾಂಗಗಳ ಭೇದಭಾವವಿಲ್ಲದೆ ಎಲ್ಲಾ ತ್ರಿಪುರಾ ನಾಗರೀಕರ ಜೀವರಕ್ಷಣೆ ತನ್ನ ಆದ್ಯ ಕರ್ತವ್ಯವೆಂದು ಬಗೆದು ಎಡರಂಗ ಸರಕಾರ ಈ ವಿಶೇಷ ಕ್ರಮ ಕೈಗೊಳ್ಳಲು ಮುಂದಾಯಿತು. ಸಿಪಿಐ(ಎಂ) ಪೊಲಿಟ್ ಬ್ಯೂರೋ ಕೂಡಾ ಈ ಕ್ರಮಕ್ಕೆ ಸಂಪೂರ್ಣ ಅನುಮೋದನೆ ನೀಡಿತು. ಏಕೆಂದರೆ ಉಗ್ರಗಾಮಿಗಳು ನಡೆಸುತ್ತಿರುವ ಸಾಮೂಹಿಕ ಹತ್ಯೆ ಹಾಗೂ ಭಯೋತ್ಪಾದನೆಯನ್ನು ಕೇವಲ ರಾಜ್ಯದ ಸಶಸ್ತ್ರ ಪಡೆಗಳ ಎರಡು ಬೆಟಾಲಿಯನ್‌ಗಳಿಂದ ಅಥವಾ ದುರ್ಗಮ, ಪರ್ವತ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸುವ ತರಬೇತಿ ಇರದ ಸಿಆರ್‌ಪಿಎಫ್ ಪಡೆಗಳಿಂದಷ್ಟೇ ನಿಲ್ಲಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ರಾಜ್ಯದ ವಿವಿಧ ಆಯ್ದ 17 ಪೋಲೀಸ್ ಸ್ಟೇಶನ್‌ಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ಸೇನೆಯ ನೆರವು ಪಡೆಯಲಾಗಿದೆ. ರಾಜ್ಯ ಆಡಳಿತ ಮತ್ತು ಸೇನಾ ತುಕಡಿಗಳು ಈಗ ಈ ಪ್ರದೇಶಗಳಲ್ಲಿ ಜನಗಳಿಗೆ ರಕ್ಷಣೆ ಒದಗಿಸಲು, ಉಗ್ರಗಾಮಿಗಳನ್ನು ಪತ್ತೆ ಹಚ್ಚಲು ಹಾಗೂ ಅವರನ್ನು ಅವರ ಗುಪ್ತ ಸ್ಥಾನಗಳಿಂದ ಹೊರಹಾಕಲು ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ಕೆಲವು ತಪ್ಪು ಭಾವನೆಗಳು

ತ್ರಿಪುರಾದಲ್ಲಿನ ಉಗ್ರಗಾಮಿ ಸಮಸ್ಯೆ ಉಗ್ರಗಾಮಿ ಗುಂಪುಗಳಿಗೆ ಸಿಪಿಐ(ಎಂ) ಮತ್ತು ಕಾಂಗ್ರೆಸ್ ನೀಡುವ ರಾಜಕೀಯ ಆಶ್ರಯದಿಂದಾಗಿ ಉಂಟಾಗಿದೆ ಎಂಬ ಆಧಾರರಹಿತ ತೀರ್ಮಾನಕ್ಕೆ ಕೆಲವರು ಬಂದಿದ್ದಾರೆ. ದುರದೃಷ್ಟವಶಾತ್ ಇತರ ತಪ್ಪು ವಿಚಾರಗಳು ಕೇಂದ್ರ ಬೇಹುಗಾರಿಕೆ ಮತ್ತಿತರ ಅಧಿಕಾರಯುತ ವಲಯಗಳಿಂದ ಬಂದಿವೆ. ಇದು ತ್ರಿಪುರಾ ಮತ್ತು ಇಡೀ ಈಶಾನ್ಯ ಭಾಗದ ಪರಿಸ್ಥಿತಿಯನ್ನು ಕುರಿತ ಅಜ್ಞಾನವನ್ನು ಪ್ರದರ್ಶಿಸುವ ವಿಚಾರಗಳೆಂದೇ ಹೇಳಬೇಕಾಗುತ್ತದೆ.

ಎನ್‌ಎಲ್‌ಎಫ್‌ಟಿಗೆ ಕಾಂಗ್ರೆಸ್-ಟಿಯುಜೆಎಸ್ ಬೆಂಬಲವಿದೆ. ಎಟಿಟಿಎಫ್‌ಗೆ ಸಿಪಿಐ(ಎಂ) ಬೆಂಬಲವಿದೆ ಎಂಬ ಪ್ರಚಾರ ನಡೆಸಲಾಗಿದೆ. ಒಬ್ಬ ಹಿರಿಯ ಅಧಿಕಾರಿಯಂತೂ ಎಟಿಟಿಎಫ್‌ನವರು ಸಿಪಿಐ(ಎಂ) ಬೆಂಬಲಿಗರನ್ನಾಗಲೀ, ಅದೇ ರೀತಿ ಎನ್‌ಎಲ್‌ಎಫ್‌ಟಿಯವರು ಕಾಂಗ್ರೆಸ್ ಬೆಂಬಲಿಗರನ್ನಾಗಲಿ ಮುಟ್ಟುವುದಿಲ್ಲ ಎನ್ನುವಷ್ಟರ ಮಟ್ಟಿಗೂ ಹೋಗಿದ್ದಾರೆ. ಇದು ಸತ್ಯಾಂಶದಿಂದ ಬಹಳ ದೂರವಿರುವ ಮಾತು. ಡಿಸೆಂಬರ್ 13 ರಂದು ಕಲ್ಯಾಣ ಪುರದಲ್ಲಿನ ಹತ್ಯಾಕಾಂಡ ನಡೆಸಿದ್ದು ಎಟಿಟಿಎಫ್. ಇದರಲ್ಲಿ ಹತರಾದವರಲ್ಲಿ ಸಿಪಿಐ(ಎಂ) ಬೆಂಬಲಿಗರೂ ಇದ್ದಾರೆ. ಅಷ್ಟೇ ಏಕೆ ಸಿಪಿಐ(ಎಂ) ಶಾಸಕರ ಕುಟುಂಬದವರೂ ಇದ್ದಾರೆ. ಶಾಸಕರು ಸ್ವಲ್ಪದರಲ್ಲೇ ತಪ್ಪಿಸಿಕೊಂಡರು. ಅದೇ ರೀತಿ ಜರುಲ್ ಬಾಚಿಯಲ್ಲಿ ಎಟಿಟಿಎಫ್ ನಡೆಸಿದ ಹತ್ಯಾಕಾಂಡದಲ್ಲೂ ಸಿಪಿಐ(ಎಂ) ಬೆಂಬಲಿಗರು ಬಲಿಯಾದರು.

ಇಂತಹ ತಪ್ಪು ತೀರ್ಮಾನಗಳು ಈ ಎರಡು ಉಗ್ರಗಾಮಿ ಸಂಘಟನೆಗಳು ರಾಜ್ಯದಲ್ಲಿ ಸಾಮಾನ್ಯ ಜನಜೀವನವನ್ನು ಅಸ್ಥಿರಗೊಳಿಸಲು, ಉದ್ದೇಶಪೂರ್ವಕವಾಗಿ ಬಂಗಾಳೀ ಜನಾಂಗದ ಜನರ ಮೇಲೆ ಗುರಿಯಿಟ್ಟು ಜನಾಂಗ ಗಲಭೆಗಳಿಗೆ ಕುಮ್ಮಕ್ಕು ನೀಡಲು ಟೊಂಕಕಟ್ಟಿವೆ ಎಂಬ ಸತ್ಯಾಂಶವನ್ನು ಮರೆಮಾಚುತ್ತವಷ್ಟೇ. ಇಂತಹ ವಿಕೃತ ವಿಶ್ಲೇಷಣೆಗಳನ್ನು ರಾಷ್ಟ್ರೀಯ ಪತ್ರಿಕೆಗಳು ಕೂಡಾ ವ್ಯಾಪಕವಾಗಿ ಹರಡಿಸುತ್ತಿವೆ.

ಕಾಂಗ್ರೆಸ್‌ನ ದ್ರೋಹ

ನಿರೀಕ್ಷೆಯಂತೆ ರಾಜ್ಯದಲ್ಲಿನ ಕಾಂಗ್ರೆಸ್ ಮುಖಂಡತ್ವ ಎಡರಂಗ ಸರಕಾರವನ್ನು 356ನೇ ಕಲಮು ಬಳಸಿ ವಜಾಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಬೇಕೆಂದು ಒತ್ತಾಯಿಸಿದೆ. ಇದು ಹೊಸತೇನಲ್ಲ. ಕಾಂಗ್ರೆಸ್-ಟಿಯುಜೆಎಸ್ ಕೂಟ ಆಗಾಗ ಎತ್ತುತ್ತಿರುವ ಬೇಡಿಕೆ ಇದು. ನಿಜವಾಗಿ ಈ ದುರುದ್ದೇಶದಿಂದಲೇ ಈ ಕೂಟ ಜನಾಂಗ ತಿಕ್ಕಾಟಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ.

ತ್ರಿಪುರಾ ಒಂದು ಗಡಿರಾಜ್ಯ. ಅದು ಭಾರತದ ಹಿತಾಸಕ್ತಿಗಳ ವಿರುದ್ಧವಾದ ವಿದೇಶೀ ಏಜೆಂಟ್‌ಗಳ ಕಣ್ಣಿಗೆ ಬಿದ್ದಿದೆ ಎಂಬ ಅಂಶವನ್ನು ಪರಿಗಣಿಸಿ ಕೋಮು ಐಕ್ಯತೆ ಹಾಗೂ ಉಗ್ರಗಾಮಿಗಳ ವಿರುದ್ಧ ಪ್ರಚಾರ ಮಾಡಬೇಕಾದ ಕಾಂಗ್ರೆಸ್(ಐ) ತದ್ವಿರುದ್ಧವಾಗಿ ವಿಚ್ಛಿದ್ರಕಾರಿ ಚಟುವಟಿಕೆ ಗಳಿಗೆ ಪ್ರೋತ್ಸಾಹ ನೀಡುತ್ತಿದೆ ಇದು. ತ್ರಿಪುರಾದಲ್ಲಿ ಕಾಂಗ್ರೆಸ್‌ನ ರಾಜಕೀಯ ಮುಖ್ಯ ಲಕ್ಷಣವೇ ಆಗಿಬಿಟ್ಟಿದೆ. ಆದ್ದರಿಂದಲೇ ಶಾಂತಿ ಮತ್ತು ಸಾಮಾನ್ಯ ಸ್ಥಿತಿ ನೆಲೆಗೊಳಿಸಲುಒಂದುಜಂಟಿ ಕರೆ ನೀಡ ಬೇಕೆಂದು ರಾಜ್ಯ ಸರಕಾರ ಕರೆದ ಸಭೆಯಲ್ಲಿ ಕಾಂಗ್ರೆಸ್(ಐ)-ಟಿಯುಜೆಎಸ್ ಹಾಗೂ ಟಿಎನ್‌ವಿ ಜತೆಗೆ ಸಭಾತ್ಯಾಗ ಮಾಡಿತು. ದೇಶದ ಹಿತಾಸಕ್ತಿಗಳಿಗೆ ವಿಶ್ವಾಸಘಾತ ಮಾಡಿತು.

ಜನರ ಐಕ್ಯತೆಗೆ ರಾಜಕೀಯ ಪ್ರಚಾರ

ತ್ರಿಪುರಾದಲ್ಲಿ ಸಿಪಿಐ(ಎಂ)ನ ಹಾಗೂ ಇತರ ಪ್ರಜಾಪ್ರಭುತ್ವವಾದೀ ಸಂಘಟನೆಗಳ ನಿರಂತರ ಪ್ರಯತ್ನದಿಂದಾಗಿಯೇ ಇದುವರೆಗೆ 1980ರಲ್ಲಾದಂತಹ ಭಯಾನಕ ಕೋಮು ದಳ್ಳುರಿ ಆವರಿಸಿಲ್ಲ ಎಂಬುದು ಗಮನಾರ್ಹ. ಉಗ್ರಗಾಮಿಗಳ ಚಟುವಟಿಕೆ ಗಳಿಂದಾಗಿ ಹಲವಾರು ಸಿಪಿಐ(ಎಂ) ಮುಖಂಡರುತಮ್ಮ ಪ್ರದೇಶಗಳಲ್ಲಿ ಕೆಲಸ ಮಾಡಲಾಗುತ್ತಿಲ್ಲ. ಶಾಲೆಗಳು, ಆರೋಗ್ಯ ಕೇಂದ್ರಗಳು, ಮತ್ತಿತರ ಸರಕಾರೀ ಕೆಲಸ ಕಾರ್ಯಗಳು ನಡೆಯದಂತಾಗಿದೆ. ಬಡ ಆದಿವಾಸಿ ಜನಗಳ ಕಲ್ಯಾಣ ಕೆಲಸಗಳು ನಡೆಯಬೇಕಾದರೆ ಸಾಮಾನ್ಯ ಸ್ಥಿತಿ ಏರ್ಪಡುವುದು ಅಗತ್ಯ. ಆದ್ದರಿಂದಲೇ 'ಗಲಭೆ ಪೀಡಿತ ಪ್ರದೇಶ'ವೆಂದು ಆಜ್ಞೆಯ ಜಾರಿ ಹಾಗೂ ಸೇನೆಯ ನೆರವು ಪಡೆಯಲಾಗಿದೆ. ಆದರೆ ಇದುಒಂದು ಸೀಮಿತ ಅವಧಿಗೆ ಮಾತ್ರ. ಉಗ್ರಗಾಮಿಗಳ ದುಷ್ಟ ಯೋಜನೆಯನ್ನು ತಡೆಯಲಿಕ್ಕಾಗಿ ಮಾತ್ರ. ರಾಜ್ಯದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ನೆಲೆಗೊಳಿಸಲು ಈ ಪೊಲಿಸ್ ಕ್ರಮಗಳು ಒಂದು ತುರ್ತು ವ್ಯವಸ್ಥೆಯಷ್ಟೇ ಎಂಬ ಬಗ್ಗೆ ಸಿಪಿಐ(ಎಂ) ಮತ್ತು ಎಡರಂಗಕ್ಕೆ ಯಾವುದೇ ಗೊಂದಲವಿಲ್ಲ. ಏಕೆಂದರೆ ಈ ಕ್ರಮಗಳು ಬುಡಕಟ್ಟು ಜನಗಳಲ್ಲಿ ಉಂಟಾಗಿರುವ ಪರಕೀಯ ಭಾವನೆ ಹಾಗೂ ಅವರ ಸಾಮಾಜಿಕ-ಆರ್ಥಿಕಬೇರುಗಳಿಗೆಮೂಲಭೂತವಾದ ಪರಿಹಾರವನ್ನೇನೂ ಕೊಡು ವುದಿಲ್ಲ ಎಂಬುದು ಸಿಪಿಐ(ಎಂ)ಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದಲೇ ಬುಡಕಟ್ಟು ಮತ್ತು ಬಂಗಾಲೀ ಜನ ಸಮೂಹಗಳ ನಡುವೆ ಐಕ್ಯತೆಯನ್ನು ಕಾಪಾಡಿಕೊಳ್ಳಲು ರಾಜಕೀಯ ಪ್ರಚಾರ ಕಾರ್ಯವನ್ನು ಅದು ಮುಂದುವರಿಸುತ್ತಿದೆ.

ಎರಡನೇ ಎಡರಂಗ ಸರಕಾರದ ಆಡಳಿತಾ ವಧಿಯಲ್ಲಿ ರಚಿಸಿದ ತ್ರಿಪುರಾ ಬುಡಕಟ್ಟು ಸ್ವಯಮಾಡಳಿತ ಜಿಲ್ಲಾ ಮಂಡಳಿ ಬುಡಕಟ್ಟು ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿ ಹಾಗೂ ಬುಡಕಟ್ಟು ಜನಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಕಾಂಕ್ಷೆಗಳನ್ನು ಪೂರೈಸಲು ಶ್ರಮಿಸಬೇಕು. ಅದೇ ವೇಳೆಗೆ ಬುಡಕಟ್ಟೇತರ ಜನಗಳಲ್ಲೂ ಬಹಳಷ್ಟು ಮಂದಿ ಬಡವರು ಹಾಗೂ ದಮನಕ್ಕೊಳಗಾದವರು ಇರುವುದರಿಂದ ಅವರ ಸಮಸ್ಯೆಗಳನ್ನು ಕೂಡಾ ಪರಿಗಣಿಸಲು ಅಗತ್ಯ ವಾದ ಜನಾಂಗೀಯ ಐಕ್ಯತೆಯನ್ನು ಬೆಸೆ ಯುವ ಮೂಲಭೂತ ಕೆಲಸ ನಿರ್ವಹಿಸಲು ಸಿಪಿಐ(ಎಂ) ಬದ್ಧವಾಗಿದೆ.

ವಾರದ ಆರ್ಥಿಕ ಟಿಪ್ಪಣಿಗಳು

ಡಿ.ಎಸ್.ಮಣಿ

(ಬಡತನದ) ಶೀಘ್ರ ಬೆಳವಣಿಗೆಗಾಗಿ ಹೆಚ್ಚಿನ ಆರ್ಥಿಕ ಸುಧಾರಣೆ

ಶೀಘ್ರ ಬೆಳವಣಿಗೆಗಾಗಿ ಹೆಚ್ಚಿನ ಆರ್ಥಿಕ ಸುಧಾರಣೆಗಳನ್ನು ಮಾಡಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ಹೇಳಿದ್ದಾರೆ. ಆದರೆ ಒಟ್ಟಾರೆ ಆರ್ಥಿಕ ಸ್ಥಿತಿಗಳನ್ನು ನೋಡಿದರೆ ಶೀಘ್ರ ಬೆಳವಣಿಗೆಯೇನೂ ಆಗುತ್ತಿಲ್ಲ, ಹಾಗಿದ್ದರೆ ಶೀಘ್ರ ಬಡತನದ ಬೆಳವಣಿಗೆ ಆಗಲೆಂದು ಹೆಚ್ಚಿನ ಆರ್ಥಿಕ ಸುಧಾರಣೆಗಳನ್ನು ಮಾಡಲಾಗುತ್ತಿದೆಯೇ?

ಅವರ ಪ್ರಕಾರ ದೇಶದ ಒಟ್ಟು ಉತ್ಪಾದನೆಯ ಬೆಳವಣಿಗೆ 1995-96 ರಲ್ಲಿ ಶೇ 7.1 ರಷ್ಟಿದ್ದುದು 1996-97 ಕ್ಕೆ ಶೇ 6.8 ರಷ್ಟಕ್ಕೆ ಇಳಿದಿದೆ. ಆರ್ಥಿಕ ಸುಧಾರಣೆಗಳಿಂದಾಗಿ ಸತತ ಶೇ7 ರಷ್ಟು ಬೆಳವಣಿಗೆಯನ್ನು ಸಾಧಿಸುವ ಪರಿಸ್ಥಿತಿಯಲ್ಲಿ ದೇಶದ ಆರ್ಥಿಕ ಇದೆಯಂತೆ.

ಇಷ್ಟೆಲ್ಲ ಆಗಿಯೂ ಕೃಷಿಯಲ್ಲಿನ ಒಟ್ಟು ಉತ್ಪಾದನೆಯ ಬೆಳವಣಿಗೆ ಕಡಿಮೆಯಾಗಿದೆ.

ಹೀಗೆ ಉದಾರೀಕರಣವಾದಿಗಳು ಆರ್ಥಿಕ ಸುಧಾರಣೆಗಳಿಂದ ಆಗಿರುವ ಪರಿಣಾಮಗಳ ವೈಭವೀಕರಣ ಮಾಡುತ್ತಲೇ ಇದ್ದಾರೆ. ಆದರೆ ನಿಜದಲ್ಲಿ ಉದಾರೀಕರಣ ಸಮೃದ್ಧಿಯನ್ನು ತಂದಿದ್ದು ಶ್ರೀಮಂತರಿಗೆ ಮಾತ್ರ. ಬಡವರಿಗೆ ಹೆಚ್ಚಿನ ಕಷ್ಟ ಕಾರ್ಪಣ್ಯ ನೋವುಗಳನ್ನು ತಂದಿದೆ ಅದು. ಆದರೆ ಬಂಡವಾಳಶಾಹಿ ವರ್ಗದ ಆಡಳಿತ ಇರುವಾಗ ಬಡವರ ಸುಖ ಸಂತೋಷದಲ್ಲಿ ಯಾರಿಗೆ ಆಸಕ್ತಿ? ಬಂಡವಾಳ ಶಾಹಿಗಳಿಗೆ ಹೆಚ್ಚಿನ ಅನುಕೂಲ ಒದಗಿಸಿದರೆ ಸಾಕು.

ಒಂದು ಅಧ್ಯಯನದ ಪ್ರಕಾರ ದುಡಿವ ಜನರ ನಿಜ ವೇತನದಲ್ಲಿ ಏನಾದರೂ ಹೆಚ್ಚಳ ಆಗಬೇಕಾದರೆ ಆರ್ಥಿಕದಲ್ಲಿ ಬೆಲೆ ಹೆಚ್ಚಳವಾಗಿ ಮೂರು ವರ್ಷಗಳು ಬೇಕಂತೆ. ಅಂದರೆ ಇಂದು ಬೆಲೆ ಹೆಚ್ಚಳವಾದರೆ ಇನ್ನು ಮೂರು ವರ್ಷಗಳ ನಂತರ ದುಡಿಯುವವರ ವೇತನದಲ್ಲಿ ಹೆಚ್ಚಳವಾಗುತ್ತದೆ. ಆದರೆ ದಿನ ನಿತ್ಯ ಬೆಲೆ ಹೆಚ್ಚಳವಾಗುತ್ತಿರುವಾಗ ಹೆಚ್ಚಳಕ್ಕೆ ಸರಿಯಾದ ವೇತನ ಮೂರು ವರ್ಷಗಳ ನಂತರ ಆಗುತ್ತದಂತೆ. ಆರ್ಥಿಕ ಬೆಳವಣಿಗೆಯಾದರೂ ದುಡಿವ ಜನರಿಗೆ ಅದರ ಲಾಭಗಳು ಮರೀಚಿಕೆಯಂತೆ. ಆರ್ಥಿಕ ಬೆಳವಣಿಗೆಯೇ ಕಡಿಮೆಯಾಗುತ್ತದೆಂದರೆ ಅದೇ ಸಮಯದಲ್ಲಿ ಬೆಲೆಗಳು ಏರುತ್ತಲೇ ಇವೆ ಎಂದಾದರೆ ಅದರ ಪರಿಣಾಮ ಏನಾಗುತ್ತದೆ. ಅದೇ ಇಂದು ಆಗುತ್ತಿರುವುದು. ಅದನ್ನೇ ಉದಾರೀಕರಣವಾದಿಗಳು ವೈಭವೀಕರಿಸುತ್ತಿರುವುದು. ಹೇಗಿದೆ ಇವರ ನ್ಯಾಯ?

ಯುಕೊ ಬ್ಯಾಂಕಿನ ದುಷ್ಟ ಸಾಹಸ

ಯುಕೊ ಬ್ಯಾಂಕೆಂಬ ರಾಷ್ಟ್ರೀಕೃತ ಬ್ಯಾಂಕ್ ಒಂದಿದೆ. ಕಲ್ಕತ್ತಾ ಮೂಲದ್ದು. ಆ ಪ್ರದೇಶಗಳಲ್ಲೇ ಹೆಚ್ಚು ಶಾಖೆಗಳಿರುವಂತಹದ್ದು. ಈ ಬ್ಯಾಂಕು ದುರಾಡಳಿತದಿಂದಾಗಿ ನಷ್ಟ ಅನುಭವಿಸುತ್ತಲೇ ಬಂದಿದೆ. ಸತತ ನಷ್ಟಕ್ಕೆ ಮಾಲೀಕತ್ವ ಹೊಂದಿದ ಕೇಂದ್ರ ಸರ್ಕಾರವೇ ಜವಾಬ್ದಾರಿ. ಆದರೆ ಉದಾರೀಕರಣದ ಹೆಸರಿನಲ್ಲಿ ಕೇಂದ್ರ ಸರ್ಕಾರ ಈ ಜವಾಬ್ದಾರಿಗಳನೆಲ್ಲ ಆಯಾ ಬ್ಯಾಂಕಿನ ತಲೆಗೆ ಕಟ್ಟುತ್ತಿದೆ.

ಇದಲ್ಲದೆ ಲಾಭ ಮಾಡಲೇಬೇಕೆಂಬ ಷರತ್ತನ್ನೂ ಸಹ ಇಂತಹ ಬ್ಯಾಂಕಿನ ಮೇಲೆ ಕೇಂದ್ರ ಸರ್ಕಾರ ಹೇರುತ್ತದೆ. ಈ ವಿಷಯದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಜೊತೆಗೆ ಆಯಾ ಬ್ಯಾಂಕುಗಳು ಒಪ್ಪಂದ ಮಾಡಿಕೊಂಡು ಮುಚ್ಚಳಿಕೆ ಬರೆದು ಕೊಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಯುಕೊ ಬ್ಯಾಂಕು ತನ್ನ ನೌಕರರಿಗೆ ವೇತನ ಸ್ತಂಭನ ಮಾಡಲಾಗುತ್ತದೆ ಎಂದು ಘೋಷಿಸಿತು.

ನೌಕರರ, ಅಧಿಕಾರಿಗಳ ಸಂಘಗಳೆಲ್ಲ ಒಟ್ಟಿಗೆ ಸೇರಿ ಫೆಬ್ರವರಿ 28 ರಂದು ಇದರ ವಿರುದ್ಧ ಮುಷ್ಕರ ಹೂಡುವುದಾಗಿ ಘೋಷಿಸಿದವು. ಆಗ ಭಾರತೀಯ ರಿಸರ್ವ್‌ಬ್ಯಾಂಕು ಮತ್ತು ಕೇಂದ್ರ ಸರ್ಕಾರ ಈ ನಿರ್ಧಾರ ಯುಕೊ ಬ್ಯಾಂಕಿನ ಆಡಳಿತ ಮಂಡಳಿಯದ್ದು, ಆದ್ದರಿಂದ ಇದರ ಬಗ್ಗೆ ಅವರೇ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಎಂದವು.

ಆಗಬಹುದಾದ ಭಯಂಕರ ಪರಿಣಾಮವನ್ನು ಊಹಿಸಿ ಯುಕೊ ಬ್ಯಾಂಕ್ ಈ ನಿರ್ಧಾರವನ್ನು ಹಿಂತೆಗೆದುಕೊಂಡಿತು. ಬ್ಯಾಂಕಿಂಗ್ ವಲಯದ ನೌಕರರು ಎಚ್ಚೆತ್ತುಕೊಂಡು ಉದಾರೀಕರಣದ ಒಂದು ಕ್ರಮದ ವಿರುದ್ಧ ಹೋರಾಡಿ ಗೆದ್ದಿದ್ದಾರೆ.

ಹಿಂದೆ ಹಣಕಾಸು ವಲಯದ ಉದಾರೀಕರಣ ಪ್ರಾರಂಭ ವಾದಾಗಲೇ ಇಂತಹ ಒಗ್ಗಟ್ಟು ತೋರಿದ್ದರೆ ಬಹುಶಃ ಇಷ್ಟೊಂದು ಖಾಸಗಿ ವಿದೇಶಿ ಬ್ಯಾಂಕುಗಳಿಗೆ ಅವಕಾಶವೇ ಇರುತ್ತಿರ ಲಿಲ್ಲವೇನೊ.

ಇನ್ನು ಮುಂದೆ ಹಲವು ಹೋರಾಟಗಳನ್ನು ಈ ಸಂಘಟನೆಗಳು ಮಾಡಬೇಕಾಗುತ್ತದೆ. ಒಗ್ಗಟ್ಟನ್ನು ಕಾಪಾಡಿಕೊಂಡು ಬರುವ ಅವಶ್ಯಕತೆಯೂ ಇದೆ. ಇಲ್ಲವಾದರೆ ಮತ್ತೆ ಅವರಿಗೆ ಉದಾರೀ ಕರಣದ ಭೂತದ ಕಾಟ ತಪ್ಪಿದ್ದಲ್ಲ.

ಪೆಟ್ರೋಲಿಯಂ ಬೆಲೆಗೆ ಮತ್ತೆ ಬೆಂಕಿ

ದೇಶದ ಆರ್ಥಿಕ ಸ್ಥಿತಿ ಅಧೋಗತಿಗೆ ಇಳಿದಿದೆ. ದೇಶದ ದುಡಿಯುವ ಜನ ಬೆಲೆಯೇರಿಕೆಯಡಿ ಸಿಕ್ಕಿ ತತ್ತರಿಸಿ ಹೋಗಿದ್ದಾರೆ. ಸುಸಂಘಟಿತ ವಲಯದಲ್ಲೂ ಬೆಲೆ ಏರಿಕೆ ಸರಿತೂಗಿಸುವಂತಹ ವೇತನ ಏರಿಕೆ ಇಲ್ಲ. ಅಸಂಘಟಿತ ವಲಯದಲ್ಲಿ ಕೇಳುವುದೇ ಬೇಡ. ಹೀಗಿರುವಾಗ ಕಳೆದ ಜುಲೈನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ತೀವ್ರ ಏರಿಸಿದ ಕೇಂದ್ರ ಸರ್ಕಾರ ಈಗ ಮತ್ತೆ ಬೆಲೆಯನ್ನು ಏರಿಸಲೇ ಬೇಕಾಗುತ್ತದೆ ಎಂಬ ಮಾತನ್ನು ಆರ್ಥಿಕ ಸಮೀಕ್ಷೆಯಲ್ಲಿ ಹೇಳಿದೆ.

ಸದ್ಯದಲ್ಲೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸುವುದು ಖಚಿತ

ಪೆಟ್ರೋಲಿಯಂ ಉತ್ಪನ್ನಗಳ ಏರಿಕೆ ಎಂದರೆ ಇದು ರಕ್ತ ಬೀಜಾಸುರನ ಕೊಲೆಗೆ ಹೊರಟಂತೆ ಚೆಲ್ಲಿದ ಒಂದು ಹನಿ ರಕ್ತಕ್ಕೂ ಒಬ್ಬೊಬ್ಬ ರಕ್ತ ಬೀಜಾಸುರನ ಹುಟ್ಟಿ ಕೊಳ್ಳುತ್ತಾನೆ. ಪೆಟ್ರೋಲಿಯಂ ಮುಖ್ಯ ಇಂಧನವಾದ್ದರಿಂದ ಇದನ್ನು ಇಂಧನ ಕಚ್ಚಾ ಸಾಮಗ್ರಿಯಾಗಿ ಬಳಸುವ ಎಲ್ಲ ಉತ್ಪನ್ನ ಸೇವೆಗಳ ಬೆಲೆತೀವ್ರವಾಗುತ್ತದೆ.

ಉದಾಹರಣೆಗೆ ಸಾಗಾಣಿಕೆ ವಾಹನಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನೇ ಇಂಧನವಾಗಿ ಬಳಸುವುದು. ಇದರಿಂದ ಸಾಗಾಣಿಕೆಯ ವೆಚ್ಚ ಹೆಚ್ಚಾಗುತ್ತದೆ. ಸಾಗಣಿಕೆಯಾಗುವ ಎಲ್ಲ ವಸ್ತುಗಳ ಬೆಲೆಯೂ ಹೆಚ್ಚಾಗುತ್ತದೆ. ಆಧುನಿಕ ಯುಗದಲ್ಲಿ ಸಾಗಾಣಿಕೆಗೆ ಒಳಗಾಗದ ಯಾವ ಸರಕಿದೆ ಹೇಳಿ ಆಹಾರ ಧಾನ್ಯ ರೈತರು ಬಳಸುವ ಗೊಬ್ಬರ ಹಣ್ಣು, ತರಕಾರಿ, ಇತ್ಯಾದಿಗಳೆಲ್ಲದರ ಬೆಲೆ ಹೆಚ್ಚಾಗುತ್ತದೆ.

ಇಂತಹ ಪರಿಣಾಮವಾಗುವುದರಿಂದಲೇ ಎಡಪಕ್ಷಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಏರಿಸಬಾರದೆನ್ನುವುದು. ಆದರೆ ಬೂರ್ಝ್ವಾ ಭೂಮಾಲಿಕ ಆಳುವ ವರ್ಗಕ್ಕೆ ಇದು ಕಾಣುವುದಿಲ್ಲ. ಅವರು ಸಂಪನ್ಮೂಲಗಳನ್ನು ಎಲ್ಲಿಂದ ಕ್ರೋಡೀಕರಿ ಸುವುದೆಂದು ಕೇಳುತ್ತಾರೆ.

ಸಂಪನ್ಮೂಲಗಳಿಗೇನು ಕೊರತೆ ಆದರೆ ಈ ಆಳುವ ವರ್ಗಕ್ಕೆ ತನ್ನ ಹೊರೆಯನ್ನು ತಾನು ಹೊತ್ತೆ ಗೊತ್ತಿಲ್ಲ. ತನ್ನ ಹೊರೆಯನ್ನು ದುಡಿವ ಜನರ ಹೆಗಲಿಗೆ ದಾಟಿಸುವುದೇ ಅದರ ಧ್ಯೇಯ ಆದ್ದರಿಂದ ಇದೊಂದು ದಾರಿ ಅದಕ್ಕೆ ಕಾಣುವುದಿಲ್ಲ. ತೈಲ ಖಾತೆಯಲ್ಲಿನ ಕೊರತೆ ತುಂಬಿಸಲು ಹೆಚ್ಚಿಸಿ ಪೆಟ್ರೋಲ್ ತೈಲಗಳಬೆಲೆಗಳನ್ನು ಇದು ಅವರ ಘೋಷಣೆ

"ಸಂಪನ್ಮೂಲಗಳ ಗಣಿಯನ್ನೇ ತೋರುತ್ತೇವೆ ಬನ್ನಿ"

ಈ ಸವಾಲನ್ನು ಯಾರೂ ಪುಂಡ ಪೋಕರಿ ಹುಡುಗರು ಹಾಕಿದ್ದಲ್ಲ. ಸಂಪನ್ಮೂಲಗಳೇ ಇಲ್ಲ ಬಡವರ ಹೆಗಲಿನ ಮೇಲೆ ಹೊರೆ ಹೇರಿ ಅವರಿಂದ ಕಿತ್ತುಕೊಳ್ಳುವುದರಿಂದಲೇ ಸಂಪನ್ಮೂಲಗಳ ಕ್ರೋಢೀಕರಣ ಸಾಧ್ಯ ಎನ್ನುವ ಕೇಂದ್ರ ಸರ್ಕಾರಕ್ಕೆ ಇಂತಹ ಸವಾಲನ್ನು ಹಾಕಿದವರು ದೇಶದ ಅತ್ಯಂತ ಜನ ಕಾಳಜಿಯುಳ್ಳ ಆರ್ಥಿಕ ತಜ್ಞರು. ಬಹುಕಾಲ ವಿವಿಧ ಮುಖ್ಯ ಜವಾಬ್ದಾರಿ ಸ್ಥಾನಗಳಲ್ಲಿ ಕೆಲಸ ಮಾಡಿ ಅಪಾರ ಅನುಭವ ಗಳಿಸಿದವರು ಇವರು. ಎಂದಿನಂತೆ ಬಜೆಟ್ ಸಮಯದಲ್ಲಿ ಆಳುವವರ್ಗ ಹರಡುವ ಸುಳ್ಳುಗಳಿಗೆ ಸರಿಯಾದ ಉತ್ತರವನ್ನು ಇವರು ತಾವು ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯಲ್ಲಿ ನೀಡಿದ್ದಾರೆ.

ಈ ಹೇಳಿಕೆ ನೀಡಿದವರೆಂದರೆ ಪ್ರೊ. ಕೆ. ಎಸ್. ಕೃಷ್ಣಸ್ವಾಮಿ, ಪ್ರೊ. ಪ್ರಭಾತ್ ಪಟ್ನಾಯಕ್, ಡಾ. ವಿ.ಕೆ ರಾಮ ಚಂದ್ರನ್, ಡಾ. ಅಬಿಜಿತ್‌ಸೇನ್, ಡಾ. ಕಮಲ ಮಿತ್ರ ಚೆನೊಯ್, ಡಾ. ಥಾಮಸ್‌ಐಸಾಕ್, ಪ್ರೊ.ಐ.ಎಸ್ ಗುಲಾಟಿ, ಡಾ. ಅರುಣ ಘೋಷ್, ಡಾ. ಅಶೋಕ್ ಮಿತ್ರಾ, ಪ್ರೊ.ಕೆ.ಎನ್.ಕಬ್ರಾ, ಡಾ.ಮಧುರಾ ಸ್ವಾಮಿನಾಥನ್, ಡಾ. ಸಿ.ಪಿ. ಚಂದ್ರಶೇಖರ್, ಡಾ. ಜಯತಿ ಘೋಷ್, ಮತ್ತು ಪ್ರೊ. ಉತ್ಸಾ ಪಟ್ನಾಯಕ್. ಇವರ ಹೇಳಿಕೆಯ ಸಂಕ್ಷಿಪ್ತ ವಿವರ ಕೆಳಗಿದೆ.

ಉದಾರೀಕರಣದ ನಂತರ ಈಗಿನ ದೇಶದ ಆರ್ಥಿಕ ಪರಿಸ್ಥಿತಿ ಬಹು ಆತಂಕಕಾರಿ ಸ್ಥಿತಿಯಲ್ಲಿದೆ. ಕೃಷಿ ಬೆಳವಣಿಗೆಯ ಬದಲಿಗೆ ಹಿಂಜರಿತ ಉಂಟಾಗಿದೆ. ಅಂತರ್ರಚನಾ ಸೌಕರ್ಯಗಳು ಮುರಿದು ಬೀಳುವ ಸ್ಥಿತಿಯಲ್ಲಿವೆ. ಉತ್ಪಾದನೆಯಲ್ಲಿ ಹಿಂಜರಿತವಿದೆ. ರಫ್ತು ಪ್ರಮಾಣ ಇಳಿದಿದೆ. ಬಡ್ಡಿ ದರಗಳು ಹೆಚ್ಚಾಗಿವೆ. ವಿದೇಶೀ ಹೂಡಿಕೆದಾರರಿಗೆ ದೇಶದ ಮೇಲೆ ವಿಶ್ವಾಸ ಕುಸಿಯ ತೊಡಗಿದೆ. ಆದ್ದರಿಂದ ಅವರು ಹೂಡಿದ ಹಾಟ್ ಮನಿ ಯನ್ನು ಅವರು ವಾಪಸ್ಸು ಪಡೆಯ ತೊಡಗಿದ್ದಾರೆ. ಇದರಿಂದಾಗಿ ವಿದೇಶೀ ವಿನಿ ಮಯ ಮೀಸಲು ಕರಗತೊಡಗಿದೆ. ಇವೆಲ್ಲ ವುಗಳಿಂದ ದೊಡ್ಡ ಹೊಡೆತದ ನೋವು ಅನುಭವಿಸುತ್ತಿರುವವರು ಈ ದೇಶದ ದುಡಿವ ಜನ. ಅವಶ್ಯಕ ಸಾಮಗ್ರಿಗಳ ಬೆಲೆ ಗಗನಕ್ಕೆ ಏರಿದೆ. ಇದಲ್ಲದೆ ಈಗ ಆಡಳಿತಾತ್ಮಕ ಬೆಲೆ ಏರಿಕೆಯ ಕತ್ತಿ ನೆತ್ತಿಯ ಮೇಲೆ ತೂಗಾಡುತ್ತಿದೆ. ಪರಿಸ್ಥಿತಿ ಇನ್ನೂ ಹದಗೆಡುತ್ತದೆ.

ಇಂತಹ ಪರಿಸ್ಥಿತಿಯಲ್ಲೂ 1993-94 ರ ನಂತರ ಅತಿ ಹೆಚ್ಚಿನ ಬೆಳವಣಿಗೆಯಾದ ಶೇ 7ನ್ನು ಸಾಧಿಸಿದ್ದೇವೆ ಎಂದು ಹೇಳಿಕೊಳ್ಳಲಾಗುತ್ತಿದೆ. ಆದರೆ ಅಂಕಿಸಂಖ್ಯೆಗಳ ಪರಿಷ್ಕರಣ ಸಾಮಾನ್ಯವಾಗಿ ಹೋಗಿದೆ.

ಇವೆಲ್ಲ ಸರ್ಕಾರ ತನ್ನ ಜವಾಬ್ದಾರಿಗಳನ್ನು ಕೈ ಬಿಟ್ಟುದರ ಪರಿಣಾಮವಾಗಿ ಆಗಿದ್ದು. ಅವಶ್ಯಕ ಸಂಪನ್ಮೂಲಗಳ ಕ್ರೋಡೀಕರಣ ಮತ್ತು ಅವುಗಳ ಲಾಭದಾಯಕ ಬಳಕೆ ಇವೆರಡನ್ನೂ ಸರ್ಕಾರ ಬಿಟ್ಟುಕೊಟ್ಟಿರವುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಈಗ ಸಂಪನ್ಮೂಲ ಗಳ ಕೊರತೆಯಿರುವುದರಿಂದ ಬಹುರಾಷ್ಟ್ರೀಯ ಕಂಪನಿಗಳು ದೇಶದೊಳಗೆ ಬಂದು ಹೂಡಿಕೆ ಮಾಡಬೇಕೆಂದು ಹೇಳಲಾಗುತ್ತಿದೆ. ಅದಕ್ಕಾಗಿ ಅವರು ಹೇಳುವ ಎಲ್ಲವನ್ನೂ ಕೇಳಲು ಸರ್ಕಾರ ಸಿದ್ಧವಾಗಿರುವಂತಿದೆ.

ಇದಲ್ಲದೆ ಬಂಡವಾಳ ಎತ್ತಲು ದೇಶದ ಬಂಡವಾಳ ಮಾರುಕಟ್ಟೆಯನ್ನೇ ಉದಾರೀಕರಿಸಲಾಗುತ್ತಿದೆ. ರೂಪಾಯಿಯ ಪೂರ್ಣ ಪರಿವರ್ತನೆಯ ಮಾತನ್ನು ಆಡಲಾಗುತ್ತಿದೆ. ಆದರೆ ಇಂತಹ ಬದಲಾವಣೆಗಳು ದೇಶದ ಮಾರುಕಟ್ಟೆಯನ್ನು ಇಡೀ ಜಗತ್ತಿನ ಮಾರುಕಟ್ಟೆಯ ಕಚ್ಚಾ ವ್ಯವಹಾರಕ್ಕೆ ತೆರೆದಿಡುತ್ತವೆ ಎಂಬುದನ್ನು ಮರೆಮಾಚಲಾಗುತ್ತದೆ.

ಈಗ ಅತ್ಯಂತ ಅವಶ್ಯಕ್ರಮವೆಂದರೆ ಈ ಪರಿಸ್ಥಿತಿಯನ್ನು ಪೂರ್ತಿ ಬದಲಾಯಿಸುವುದು. ಭಾರತದಲ್ಲಿ ಅತಿ ಹೆಚ್ಚಿನ ತೆರಿಗೆ ಹೇರ ಲಾಗುತ್ತಿದೆ ಎಂಬ ಸುಳ್ಳನ್ನು ಹರಡಲಾಗುತ್ತಿದೆ. ಆದರೆ ಇತರ ಅಭಿವೃದ್ಧಿ ಶೀಲ ಮತ್ತು ಮುಂದುವರಿದ ದೇಶಗಳಿಗೆ ಹೋಲಿಸಿದರೆ ಈ ಸುಳ್ಳು ಬಯಲಾಗುತ್ತದೆ.

1991ರಲ್ಲಿ ಭಾರತದಲ್ಲಿ ತೆರಿಗೆ ಒಟ್ಟು ಉತ್ಪಾದನೆಯ ಶೇ 11.5ರಷ್ಟಿತ್ತು. ಇಂಡೊನೇಷಿಯಾದಲ್ಲಿ ಇದು ಶೇ.20ರಷ್ಟಿತ್ತು, ಥಾಲೆಂಡಿನಲ್ಲಿ ಶೇ 15.6ರಷ್ಟು, ದಕ್ಷಿಣ ಕೊರಿಯಾದಲ್ಲಿ ಶೇ.34.1ರಷ್ಟು, ಬ್ರಿಟನ್ನಿನಲ್ಲಿ ಶೇ 34.1 ರಷ್ಟು, ಫ್ರಾನ್ಸಿನಲ್ಲಿ ಶೇ 38 ರಷ್ಟು ಜರ್ಮನಿಯಲ್ಲಿ ಶೇ 28.8 ರಷ್ಟಿತ್ತು, ಮತ್ತು ಅಮೇರಿಕಾದಲ್ಲಿ ಶೇ.18.2ರಷ್ಟಿತ್ತು, ರಾಜ್ಯಗಳ ಪಾಲಿನ ತೆರಿಗೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಭಾರತದಲ್ಲಿ ಇದು ಶೇ.16.4 ರಷ್ಟಾಗುತ್ತದೆ. ಭಾರತದಲ್ಲಿ ತೆರಿಗೆ ಪ್ರಮಾಣ ಅತಿ ಹೆಚ್ಚು ಎನ್ನುವುದು ಅಸಂಬದ್ಧವಾಗುತ್ತದೆ.

ಯಾವ್ಯಾವ ಕ್ಷೇತ್ರದಲ್ಲಿ ಹೆಚ್ಚಿನ ತೆರಿಗೆ ಸಂಗ್ರಹಣೆ ಮಾಡಬಹುದು?

1. ಒಂದು ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚಿಗೆ ಇರುವ ಜಮೀನಿನ ಮೇಲೆ ತೆರಿಗೆ ಹೇರಬಹುದು.

ಇದನ್ನು ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿ ನಂತರ ಮಾಡಬಹುದು.

2. ಕಂಪನಿಗಳ ಮೇಲೆ ಹೆಚ್ಚಿನ ತರಿಗೆ ಮತ್ತು ರಿಯಾಯತಿಗಳಲ್ಲಿ ಕಡಿತ ಮಾಡ ಬಹುದು.

3. ಪ್ರಚಾರ ಕಂಪನಿಗಳ ವ್ಯವಹಾರದ ಮೇಲೆ ತೆರಿಗೆ ಹೇರಬಹುದು.

4. ಆಸ್ತಿ ವ್ಯವಹಾರಗಳ ಮೇಲೆ ಹೆಚ್ಚು ತೆರಿಗೆ ಹೇರಬಹುದು.

5. ಶೇರು ವಿನಿಮಯ ವ್ಯವಹಾರಗಳ ಮೇಲೆ ಅಲ್ಪ ಪ್ರಮಾಣದ ತೆರಿಗೆ ಹಾಕಬಹುದು.

6. ಮೆಟ್ರೊಪಾಲಿಟನ್ ನಗರಗಳಲ್ಲಿನ ಆಸ್ತಿಗಳ ಮೇಲೆ ತೆರಿಗೆ ಹಾಕಬಹುದು.

7. ಎಸ್ಟೇಟ್ ಸುಂಕ ಹೇರಬಹುದು.

8. ವೃತ್ತಿಪರ ಆದಾಯದ ಮೇಲೆ ನಿರ್ದಿಷ್ಟ ಪ್ರಮಾಣದ ತೆರಿಗೆ ಹಾಕಬಹುದು.

9. ಕಾರು ಹೊಂದಿರುವವರ ಮೇಲೆ ಎಷ್ಟು ಕಾರುಗಳಿವೆ ಎಂಬುದರ ಮೇಲೆ ತೆರಿಗೆ ಹೇರಬಹುದು.

10. ಖಾಸಗಿ ಆಸ್ಪತ್ರೆಗಳ ಮೇಲೆ - ವಿದ್ಯಾಸಂಸ್ಥೆಗಳ ಮೇಲೆ ತೆರಿಗೆ ಹಾಕಬಹುದು.

ಹೀಗೆ ಶ್ರೀಮಂತರ ಮೇಲೆ ತೆರಿಗೆ ಹೇರುವ ಹಲವು ಸಾಧ್ಯತೆಗಳಿವೆ.

ಇದಲ್ಲದೆ ಉದಾರೀಕರಣದಿಂದ ಹಲವು ಸಂಪನ್ಮೂಲಗಳು ನಾಶವಾಗಿವೆ. ಅವುಗಳನ್ನು ಅಭಿವೃದ್ಧಿಪಡಿಸಬಹುದು. ಸಾರ್ವಜನಿಕ ವಲಯದ ಬ್ಯಾಂಕುಗಳ ಸಾಲ ವಸೂಲಾತಿಯಿಂದಲೂ ಹಣ ಸಂಗ್ರಹಣೆ ಸಾಧ್ಯ.

ಇಂತಹ ಹಲವು ಸಾಧ್ಯತೆಗಳಿರುವಾಗ ಸಂಪನ್ಮೂಲಗಳೇ ಇಲ್ಲವೆಂದು ಹೇಳುವುದು ನಿಜಕ್ಕೂ ಗೊಸುಂಬೆತನವಲ್ಲವೇ?

ಖಾಸಗಿಯವರೊಂದಿಗೆ ಜಂಟಿ ಉದ್ಯಮದಿಂದ ತೈಲ ಉತ್ಪಾದನೆ ಹೆಚ್ಚಲಿಲ್ಲ - ಇಳಿಯಿತು!

ಲೋಕಸಭೆಯಲ್ಲಿ ಸಿ.ಪಿ.ಐ.(ಎಂ)ನ ಸಂಸದರಾದ ದೀಪಂಕರ್ ಮುಖರ್ಜಿಯವರು ಪ್ರಧಾನ ಮಂತ್ರಿಗಳಿಗೆ ಪತ್ರವೊಂದನ್ನು ಬರೆದು ತೈಲ ಮತ್ತು ನೈಸರ್ಗಿಕ ಅನಿಲ ಪ್ರಾಧಿಕಾರ (ಒಎನ್‌ಜಿಸಿ) ಮತ್ತು ಆಯಿಲ್ ಇಂಡಿಯಾ ಲಿಮಿಟೆಡ್ (ಒಐಎಲ್)ಮಾಡಿಕೊಂಡಿರುವ ತೈಲ ಶೋಧನೆ ಮತ್ತು ಉತ್ಪಾದನೆಯ ಒಪ್ಪಂದವನ್ನು ಪುನರ್ವಿಮರ್ಶಿಸಬೇಕೆಂದು ಒತ್ತಾಯಿಸಿದ್ದಾರೆ.ಇದೇ ರೀತಿ ಸಿ.ಪಿ.ಐ.(ಎಂ)ನ ಪಕ್ಷದ ರಾಜ್ಯಸಭಾ ಸಂಸದರಾದ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಅಶೋಕ್ ಮಿತ್ರ ಇದೇ ರೀತಿಯ ಒತ್ತಾಯವನ್ನು ಮಾಡಿದ್ದಾರೆ.

ದೀಪಂಕರ್ ಮುಖರ್ಜಿಯವರು ತಮ್ಮ ಪತ್ರದಲ್ಲಿ ಅರುಣಾಚಲ ಪ್ರದೇಶದ ಖಾರ್ಸಂಗ್ ತೈಲ ಕ್ಷೇತ್ರದಲ್ಲಿನ ಜಂಟಿ ಉದ್ಯಮದ ಉದಾಹರಣೆ ನೀಡಿದ್ದಾರೆ. ಇಲ್ಲಿ ಅಪಾರ ಖರ್ಚು ಮಾಡುತ್ತಿರುವಾಗಲೂ ಉತ್ಪಾದನೆ ಕುಸಿದು ಹೋಗಿದೆ. 1975 ರಲ್ಲಿ ಈ ಖಾರ್ಸಂಗ್ ತೈಲ ಪ್ರದೇಶವನ್ನು ಶೋಧಿಸಲಾಯಿತು. 1983 ರಲ್ಲಿ ಒಐಎಲ್‌ತೈಲ ಉತ್ಪಾದನೆ ಪ್ರಾರಂಭಿಸಿತು. ಜನವರಿ 1994 ರವರೆಗೆ 518981 ಟನ್ನುಗಳಷ್ಟು ತೈಲವನ್ನು ಉತ್ಪಾದಿಸಲಾಗಿದೆ. ಒಐಎಲ್ ದಿನಕ್ಕೆ 58 ಟನ್ನುಗಳಷ್ಟು ತೈಲವನ್ನು ಉತ್ಪಾದಿಸುತ್ತದೆ.1995 ರ ಜೂನ್ 16 ರಂದು ಭಾರತ ಸರ್ಕಾರ, ಒಐಎಲ್, ಜಿಯೋ ಪೆಟ್ರೋಲ್ ಇಂಟರ್‌ನ್ಯಾಷನಲ್, ಎನ್ರೋ ಲಿಮಿಟೆಡ್‌ಗಳು ಜಂಟಿಪಾಲುದಾರರಾಗಿ ಒಪ್ಪಂದ ಮಾಡಿಕೊಂಡವು. ಈ ಒಪ್ಪಂದದ ಪ್ರಕಾರ ಈ ಸಂಸ್ಥೆಗಳ (ಸರ್ಕಾರ ಹೊರತುಪಡಿಸಿ) ಪಾಲು ಜಿಯೊ ಪೆಟ್ರೋಲ್ ಶೇ 25, ಎನ್ರೋ ಇಂಡಿಯಾ ಶೇ 25, ಜಿಯೋ ಎನ್ರೋ ಶೇ 10 ಮತ್ತು ಒಐಎಲ್ ಶೇ 40.

ಇಂತಹ ಕಾರ್ಯದ ಉದ್ದೇಶವೇನೆಂದರೆ ಖಾಸಗಿ ವಲಯದಿಂದ ಹಣಕಾಸು ಮತ್ತು ತಂತ್ರಜ್ಞಾನದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ತೈಲ ಕ್ಷೇತ್ರದ ಉತ್ಪಾದನೆಯನ್ನು ಹೆಚ್ಚಿಸುವದಾಗಿತ್ತು. ಈ ಯೋಜನೆಯ ಕನಿಷ್ಠ ಕಾರ್ಯಕ್ರಮದ ಪ್ರಕಾರ ಮೊದಲ ಮೂರು ವರ್ಷದ ಸರಾಸರಿ ಉತ್ಪಾದನೆ ಹೀಗಿರಬೇಕಿತ್ತು- ಮೊದಲ ವರ್ಷ 236 ಟಿ.ಪಿ.ಡಿ.(ಪ್ರತಿದಿನಕ್ಕೆ 236 ಟನ್ನುಗಳು) ಎರಡನೇ ವರ್ಷ 325 ಟಿ.ಪಿ.ಡಿ ಮತ್ತು ಮೂರನೇ ವರ್ಷದಲ್ಲಿ 395 ಟಿ.ಪಿ.ಡಿ. ಇದಕ್ಕೆ 12.73 ದಶಲಕ್ಷ ಅಮೇರಿಕನ್ ಡಾಲರುಗಳಷ್ಟು (ಅಂದರೆ ಸುಮಾರು 2345 ಕೋಟಿ ರೂಪಾಯಿಗಳಷ್ಟು) ಬಂಡವಾಳ ವೆಚ್ಚ ಮಾಡಬೇಕಾಗಿತ್ತು.

ಆದರೆ ಸಾಧನೆ ಈ ಮಟ್ಟದಲ್ಲಿಲ್ಲ. ಈವರೆಗೆ ಸಾಧಿಸಿರುವ ಉತ್ಪಾದನಾ ಸಾಮರ್ಥ್ಯವೆಂದರೆ 35 ಟಿಪಿಡಿಗಳಷ್ಟು ಮಾತ್ರ. ಖರ್ಚು ಮಾತ್ರ 11520 ಅಮೇರಿಕನ್ ಡಾಲರುಗಳಷ್ಟಾಗಿದೆ. ಒ ಐಎಲ್‌ನ ಪಾಲನ್ನು ಈಗ ಹಣಕಾಸು ಮತ್ತು ತಾಂತ್ರಿಕ ಕೌಶಲತೆಯನ್ನು ಇವರಿಂದ ಪಡೆದ ಮೇಲೆ 14 ಟಿಪಿಡಿ ಗೆ ಇಳಿಸಲಾಗಿದೆ.

ಇಂದು ಪೆಟ್ರೋಲಿಯಂ ಬಿಕ್ಕಟ್ಟನ್ನು ದೇಶ ಎದುರಿಸುತ್ತಿರುವಾಗ ಈ ಜಂಟಿ ಪ್ರಯತ್ನಗಳು ಈ ರೀತಿಯಾದರೆ ಹೆಚ್ಚೆಚ್ಚು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಬೇಕಾಗುತ್ತವೆ. ಆದ್ದರಿಂದ ಇಂತಹ ಸಾಹಸಗಳನ್ನು ಸಂಯುಕ್ತರಂಗ ಸರ್ಕಾರ ವಿಮರ್ಶೆ ಮಾಡಿ ಸೂಕ್ತ ನಿರ್ಧಾರ ಕೈಗೊಳ್ಳಬೇಕೆಂದು ದೀಪಂಕರ್ ಮುಖರ್ಜಿ ಒತ್ತಾಯಿಸಿದ್ದಾರೆ.



ಗುಜರಾತಿನಲ್ಲಿ ಸಂಘ ಪರಿವಾರದ ಹಿಂಸಾಕೃತ್ಯ

ಗುಜರಾತಿನಲ್ಲಿ ಅಧಿಕಾರ ಕಳೆದು ಕೊಂಡು ಚಡಪಡಿಸುತ್ತಿದ್ದ ಸಂಘ ಪರಿವಾರ ನೆವವೊಂದನ್ನು ಹುಡುಕಿಕೊಂಡು ಹಿಂಸಾ ಕೃತ್ಯಕ್ಕೆ ಇಳಿದಿದೆ.

ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಗುಜರಾತಿ ಘಟಕದ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಟೆಗಾಡಿಯಾರನ್ನು ಫೆ 22 ರಂದು ಬಂಧಿಸಿದ್ದನ್ನು ವಿರೋಧಿಸಿ ಪರಿಷತ್ ಕಾರ್ಯಕರ್ತರು ವಾಹನಗಳಿಗೆ ಬೆಂಕಿ ಹಚ್ಚಿ, ವ್ಯಾಪಕ ದಾಂಧಲೆ ನಡೆಸಿದ್ದಾರೆ.

ಕಳೆದ ವರ್ಷ ಮೇ ತಿಂಗಳಲ್ಲಿ ಬಿಜೆಪಿ ಮಂತ್ರಿಯೊಬ್ಬರ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ ಟೆಗಾಡಿಯಾರನ್ನು ಬಂಧಿಸಿದ್ದಾರೆ.

ಗುಜರಾತಿನಲ್ಲಿದ್ದ ಬಿಜೆಪಿ ಸರಕಾರದಲ್ಲಿ ಕಳೆದ ವರ್ಷ ಭಿನ್ನಮತ ಪರಾಕಾಷ್ಠೆಗೆ ಏರಿತ್ತು. ಈಗ ಮುಖ್ಯಮಂತ್ರಿಯಾಗಿರುವ ಶಂಕರ್‌ಸಿಂಗ್ ವಘೇಲಾ ಭಿನ್ನಮತದ ಕಹಳೆ ಊದಿದ್ದರು. ಅವರಿಗೆ ಹಲವು ಶಾಸಕರು ಮಂತ್ರಿಗಳು ಬೆಂಬಲ ನೀಡಿದ್ದರು. ಅವರಲ್ಲಿ ಆತ್ಮರಾಮ ಪಟೇಲರೂ ಒಬ್ಬರಾಗಿದ್ದರು.

ಮೇ ತಿಂಗಳಲ್ಲಿ ಅಹಮದಾಬಾದಿನಲ್ಲಿ ನಡೆದ ಬಿಜೆಪಿ ಮುಖಂಡ ಎ.ಬಿ.ವಾಜ ಪೇಯಿ ಪಾಲ್ಗೊಂಡಿದ್ದ ರ್‍ಯಾಲಿಯೊಂದರ ವೇಳೆ ಸಂಘ ಪರಿವಾರದ ಗೂಂಡಾಗಳು ಭಿನ್ನಮತೀಯರ ಮೇಲೆ ವ್ಯಾಪಕ ಆಕ್ರಮಣ ನಡೆಸಿದರು. ವಿಶೇಷವಾಗಿ ವೃದ್ಧಮಂತ್ರಿ ಆತ್ಮರಾಮ ಪಟೇಲರನ್ನು ಹೊಡೆದು ಅವರ ಪಂಚೆಯನ್ನು ಕಿತ್ತು ಹಾಕಿದ್ದರು.

ಅದಾದ ನಂತರದ ವಿದ್ಯಮಾನಗಳಲ್ಲಿ ನವಂಬರ್‌ನಲ್ಲಿ ಬಿಜೆಪಿ ಸರಕಾರವೇ ಉರುಳಿ ವಘೇಲಾ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಿತು.

ಬಂದ್ ವಿಫಲ

ಟೆಗಾಡಿಯಾ ಬಂಧನವನ್ನು ಪ್ರತಿಭಟಿಸ ಲೆಂದು ಬಿಜೆಪಿ-ವಿಎಚ್‌ಪಿ ಫೆ. 24 ರಂದು ನಡೆಸಿದ ಗುಜರಾತ್ ರಾಜ್ಯ ಬಂದ್ ವಿಫಲಗೊಂಡಿತು.

ಬಂದ್ ಕರೆ ಜನಜೀವನದ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರಲಿಲ್ಲ. ಕಛೇರಿಗಳು ಬಹುತೇಕವಾಗಿ ಎಂದಿನಂತೆ ಕಾರ್ಯನಿರ್ವಹಿಸಿದ್ದವು.

ಬ್ಯಾಂಕುಗಳು ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ಇತ್ತು.

ಅಸೆಂಬ್ಲಿಯಲ್ಲಿ ರಂಪ

ಫೆ 22 ರ ಘಟನೆಗೂ ಮುಂಚೆ ಬಿಜೆಪಿ ಸದಸ್ಯರು 19 ರಂದು ರಾಜ್ಯ ವಿಧಾನಸಭೆಯಲ್ಲಿ ರಂಪ ನಡೆಸಿದರು. ಕಳೆದ ವರ್ಷ ನವೆಂಬರ್ 19 ರಂದು ಬಿಜೆಪಿ ಸರಕಾರವನ್ನು ವಜಾಮಾಡಿದ್ದನ್ನು ಪ್ರತಿಭಟಿಸಿ ಬಿಜೆಪಿ ಸದಸ್ಯರು ರಾಜ್ಯ ಪಾಲರ ಭಾಷಣವನ್ನು ಬಹಿಷ್ಕರಿಸಿದ್ದರು. ಭಾಷಣದ ನಂತರ ಸದನಕ್ಕೆ ಬಂದ ಬಿಜೆಪಿ ಶಾಸಕರು ಸಭಾಧ್ಯಕ್ಷರ ಪೀಠದ ಮುಂದೆ ಹೋಗಿ 'ನ್ಯಾಯ'ಕ್ಕಾಗಿ ಒತ್ತಾಯಿಸಿ ಘೋಷಣೆಯನ್ನು ಕೂಗಿದರು. ಮೈಕುಗಳನ್ನು ಕಿತ್ತುಹಾಕಿದರು ಒಬ್ಬ ಶಾಸಕನಂತೂ ಮೈಕನ್ನು ಸಭಾಧ್ಯಕ್ಷರತ್ತ ಎಸೆದ.

ಬಿಜೆಪಿ ಸದಸ್ಯರ ಕೃತ್ಯದಿಂದ ಸದನದಲ್ಲಿ ಕೋಲಾಹಲ ಉಂಟಾಯಿತು. ಬಿಜೆಪಿ ಸದಸ್ಯರನ್ನು ಸಭಾಧ್ಯಕ್ಷರು ಮೂರು ದಿನಗಳ ಕಾಲ ಸದನದಿಂದ ಹೊರಹಾಕಿದರು.

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಕಚ್ಚಾಟ ಮತ್ತೆ ಬಹಿರಂಗ

ಹಾಗೆ ನೋಡಲು ಹೋದರೆ ಇಡೀ ದೇಶಾ ದ್ಯಂತ ಕಾಂಗ್ರೆಸ್ ಪಕ್ಷಕ್ಕೂ ಕಚ್ಚಾಟಕ್ಕೂ ಅವಿನಾಭಾವ ಸಂಬಂಧ! ಎಡರಂಗ ಸರಕಾರ ವನ್ನು ಅಧಿಕಾರದಿಂದ ಕೆಳಗಿಳಿಸಲು 'ಹರ ಸಾಹಸ' ಪಡುತ್ತಿರುವ ಪಶ್ಚಿಮ ಬಂಗಾಳ ಘಟಕವಂತೂ ಅಂತರಿಕ ಕಚ್ಚಾಟಕ್ಕೆ ಕುಖ್ಯಾತವಾದುದ್ದು.

ಸೋಮೇನ್ ಮಿತ್ರ ಬಣ ಮಮತಾ ಬ್ಯಾನರ್ಜಿ ಬಣ ಎಂಬಿತ್ಯಾದಿಯಾಗಿ ಹಲವು ಬಣಗಳಲ್ಲಿ ರಾಜ್ಯ ಘಟಕ ಚಿಂದಿಯಾಗಿ ಹೋಗಿದೆ.

ಫೆಬ್ರವರಿ 19 ರಂದು ಕಲ್ಕತ್ತಾದಲ್ಲಿ ಪಕ್ಷ ನಡೆಸಿದ ರ್‍ಯಾಲಿ ರಾಜ್ಯ ಘಟಕದ ಕಚ್ಚಾಟ ವನ್ನು ಮತ್ತೆ ಬಹಿರಂಗ ಪಡಿಸಿತು. ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ರ್‍ಯಾಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಸೀತರಾಮ ಕೇಸರಿ ಪಾಲ್ಗೊಂಡಿದ್ದರು. ಅಂದೆ ಈ ಕಾರ್ಯ ಕ್ರಮವನ್ನು ಮಮತಾ ಬ್ಯಾನರ್ಜಿ ಬೆಂಬಲಿ ಗರು ಬಹಿಷ್ಕರಿಸಿದ್ದರು. ಇದು ಸೋಮೇನ್ ಮಿತ್ರಾ ಬಣದ ಶೋ 'ಆಗಿತ್ತು'. ಪರಿಸ್ಥಿತಿ ಹೀಗಿದ್ದರೂ ಒಗ್ಗಟ್ಟನ್ನು ಉಳಿಸಿ ಕೊಂಡು ಬಂದಿರುವ ಪಕ್ಷದ ರಾಜ್ಯ ಘಟಕ ವನ್ನು ಅಭಿನಂದಿಸುವುದಾಗಿ ಕೇಸರಿ ತಮ್ಮ ಭಾಷಣ ದಲ್ಲಿ ಹೇಳಿದರು. ಕಣ್ಣು ಮುಚ್ಚಿಹಾಲು ಕುಡಿಯುವ ಬೆಕ್ಕಿನ ಕತೆಯಿದು ಅಲ್ಲವೆ?

ಶಿಕ್ಷಣ ಗುಣ ಮಟ್ಟ ಸುಧಾರಣೆಗೆ ಕ್ರಮ ಶಿಕ್ಷಕರಿಗೆ ಕರೆ

ಎಲ್ಲಾ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಶಿಕ್ಷಕರು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳ ಬೇಕು. ಎಂದು ಕೇರಳ ಶಾಲಾ ಶಿಕ್ಷಕರ ಸಂಘದ (ಕೆಎಸ್‌ಟಿಎ) ಆರನೇ ವಾರ್ಷಿಕ ಸಮ್ಮೇಳನ ಕರೆ ನೀಡಿದೆ

ಕೇರಳದಲ್ಲಿ 12000 ಶಾಲೆಗಳ 57 ಲಕ್ಷ ವಿದ್ಯಾರ್ಥಿಗಳು ಎರಡು ಲಕ್ಷ ಶಿಕ್ಷಕರು ಹಾಗೂ 25,000 ಶಿಕ್ಷಕೇತರ ಸಿಬ್ಬಂದಿ ಇದ್ದಾರೆ. ರಾಜ್ಯದ ಆದಾಯದ ಶೇಕಡ 33 ರಷ್ಟು ಹಣವನ್ನು ಈ ಕ್ಷೇತ್ರಕ್ಕೆ ವಿನಿಯೋಗಿಸಲಾಗುತ್ತಿದೆ ಎಂದು ಸಮ್ಮೇಳನ ಅಂಗೀಕರಿಸಿರುವ ನಿರ್ಣಯವೊಂದು ಹೇಳಿದೆ.

ಆದಾಗ್ಯೂ ಈ ಕ್ಷೇತ್ರದ ಕಾರ್ಯ ನಿರ್ವಹಣೆ ಹಾಗೂ ಫಲಿತಾಂಶ ನಿರೀಕ್ಷಿತ ಮಟ್ಟದಲ್ಲಿ ಇಲ್ಲ ಎಂದು ಅದು ವಿಷಾದ ವ್ಯಕ್ತಪಡಿಸಿದೆ.

ಈ ಶಾಖೆಗಳಿಂದ ಹೊರ ಬರುವ ಮಕ್ಕಳು ನಿರೀಕ್ಷಿತ ಮಟ್ಟವನ್ನು ಹೊಂದಿರ ಬೇಕು ಹಾಗೂ ಅವರಲ್ಲಿ ಆತ್ಮ ವಿಶ್ವಾಸ ಇರುವಂತೆ ಖಾತರಿಪಡಿಸಬೇಕು ಎಂದು ನಿರ್ಣಯ ಹೇಳಿದೆ.

ಈಗಿನ ಪರಿಸ್ಥಿತಿಯನ್ನು ಸರಿಪಡಿಸಲು ಎಡ ಪ್ರಜಾಸತ್ತಾತ್ಮಕ ರಂಗಸರ್ಕಾರ ಕೈಗೊಂಡಿರುವ ಉಪಕ್ರಮವನ್ನು ಸಮ್ಮೇಳನ ಸ್ವಾಗತಿಸಿದೆ. ಶಿಕ್ಷಣ ಕ್ಷೇತ್ರವನ್ನು ಸುಧಾರಿಸುವ ನಾಯಕ ರಾಗುವಂತೆ ಶಿಕ್ಷಕರಿಗೆ ಕರೆ ನೀಡಿದೆ

ಯೂರಿಯಾ ಬೆಲೆ ಏರಿಕೆಗೆ ಖಂಡನೆ

ಕೇಂದ್ರ ಸರಕಾರ ಯೂರಿಯಾ ಬೆಲೆಯನ್ನು ಶೇಕಡ 10 ರಷ್ಟು ಹೆಚ್ಚಿಸಿರು ವುದನ್ನು ಅಖಿಲ ಭಾರತ ಕಿಸಾನ್ ಸಭಾ (ಎ.ಐ. ಕೆ.ಎಸ್) ಪ್ರಧಾನ ಕಾರ್ಯದರ್ಶಿ ಎಸ್.ರಾಮಚಂದ್ರ ಪಿಳ್ಳೆ ಖಂಡಿಸಿದ್ದಾರೆ.

ರೈತಾಪಿ ವರ್ಗದ ಬಡ ವಿಭಾಗಗಳು ಹೊಂದಿದ್ದ ಸಬ್ಸಿಡಿಗಳನ್ನು ತೆಗೆದು ಹಾಕುವ ಸರಕಾರದ ಕ್ರಮವನ್ನು ಅವರು ವಿರೋಧಿ ಸಿದ್ದಾರೆ.

ಯೂರಿಯಾದ ಈಗಿನ ಬೆಲೆಯ ಶೇ 10 ರಷ್ಟು ಫಾರ್ಮ ಗೇಟ್ ಬೆಲೆಯನ್ನು ಹೇರಿರುವುದರಿಂದ ಯೂರಿಯಾದ ಬೆಲೆ ತೀವ್ರವಾಗಿ ಹೆಚ್ಚುತ್ತದೆ.ಯೂರಿಯಾದ ಅತಿ ಬಳಕೆಯನ್ನು ತಪ್ಪಿಸಲು ಬೆಲೆ ಏರಿಸಲಾಗಿದೆ ಎಂದು ಸಹಕಾರ ಸಬೂಬು ನೀಡಿರುವುದನ್ನು ಕಿಸಾನ್ ಸಭಾ ಟೀಕಿಸಿದೆ. ಇಂಥ ನೆಪಗಳನ್ನು ಹೇಳಿ ಕೊಂಡು ಸರಕಾರ ಯೂರಿಯಾ ಬೆಲೆ ಯನ್ನು ಏರಿಸುತ್ತದೆ. ಬಡ ರೈತರನ್ನು ಸಬ್ಸಿಡಿ ಸೌಲಭ್ಯದಿಂದ ವಂಚಿಸುತ್ತದೆ ಎಂದು ಸಂಘ ವಿಶ್ಲೇಷಿಸಿದೆ. ಬಡರೈತರಿಗೆ ನೀಡುವ ರಿಯಾಯಿತಿ ಸೌಲಭ್ಯಗನ್ನು ಸರಕಾರ ಮುಂದುವರಿಸಬೇಕು. ಸಬ್ಸಿಡಿಗಳನ್ನು ಏರಿಸುವ ಮೂಲಕ ಫಾಸ್ಪೆಟಿಕ್ ಮತ್ತು ಪೊಟ್ಯಾದಿಕ ರಸಗೊಬ್ಬರದ ಬೆಲೆಗಳನ್ನು ಇಳಿಸಲು ಕ್ರಮ ಕೈಗೊಳ್ಳ ಬೇಕೆಂದು ಕಿಸಾನ್ ಸಭಾ ಒತ್ತಾಯಿಸಿದೆ.

ಸಮಸ್ಯೆಗಿಂತ ಗಂಭೀರವಾದ 'ಅಜೆಂಡಾ' ಪ್ರಶ್ನೆ?

ತ್ರಿಪುರಾ : ಕಾಂಗ್ರೆಸ್- ಬಿಜೆಪಿ ಬಣ್ಣ ಬಯಲು

ಪುಟ್ಟ ಗುಡ್ಡಗಾಡು ರಾಜ್ಯದಲ್ಲಿ ಭಯೋ ತ್ಪಾದಕರ ದಾವಾನಲಕ್ಕೆ ನೂರಾರು ಮುಗ್ಧ ಜೀವಿಗಳ ಬಲಿಯಾಗುತ್ತಿವೆ. ಬುಡಕಟ್ಟು ಹಾಗೂ ಬುಡಕಟ್ಟೇತರ ಜನರ ಮಧ್ಯೆ ಅಪನಂಬಿಕೆಯನ್ನು ಹುಟ್ಟಿಸಲಾಗುತ್ತಿದೆ. ಇದರ ವಿರುದ್ಧ ಹೋರಾಡಿ ಜನರ ಜೀವ ಗಳನ್ನು ಉಳಿಸುವುದು ಎಲ್ಲಾ ಜನರ ಮಧ್ಯೆ ವಿಶ್ವಾಸವನ್ನು ಮರು ಸ್ಥಾಪಿಸುವುದು. ಎಲ್ಲಾ ಜನರ ತುರ್ತು ಹಾಗೂ ಆದ್ಯ ಕರ್ತವ್ಯವಾಗಿದೆ.

ರಾಜ್ಯದ ಎಡರಂಗ ಸರಕಾರ ಈ ನಿಟ್ಟಿ ನಲ್ಲಿ ಸರ್ವಪ್ರಯತ್ನಗಳನ್ನು ಮಾಡುತ್ತಿದೆ. ಮುಖ್ಯಮಂತ್ರಿ ದಶರಥದೇಬ್ ಅವರ ಉಪಕ್ರಮದ ಮೇರೆಗೆ ಫೆಬ್ರವರಿ 18 ರಂದು ರಾಜಧಾನಿ ಅಗರ್ತಲಾದಲ್ಲಿ ಸರ್ವಪಕ್ಷ ಸಭೆಯನ್ನು ಕರೆಯಲಾಗಿತ್ತು. ಉಗ್ರಗಾಮಿಗಳ ಆಕ್ರೋಶಗಳ ವಿರುದ್ಧ ಹಾಗೂ ಶಾಂತಿ ಮತ್ತು ಸೌಹಾರ್ದತೆಯ ಪರವಾಗಿ ಪಕ್ಷ ಭೇದ ಮರೆತು ರಾಜ್ಯದ ಎಲ್ಲಾ ಜನರನ್ನು ಅಣಿನೆರೆ ಸಲು ಕ್ರಮ ಕೈಗೊಳ್ಳುವುದು ಈ ಸಭೆಯ ಉದ್ದೇಶವಾಗಿತ್ತು.

ಆದರೆ ಕಾಂಗ್ರೆಸ್ ಟಿಯುಜೆಎಸ್ ಮತ್ತು ಭಾರತೀಯ ಜನತಾ ಪಕ್ಷದ ಪ್ರತಿ ನಿಧಿಗಳು ಆರಂಭದಲ್ಲೇ ಸಭೆಯಿಂದ ಹೊರ ನಡೆದರು. ಈ ಮೂಲಕ ಈ ಪಕ್ಷಗಳ ಹೀನ ಮನೋಭಾವ ತನ್ನಿಂತಾನೇ ಬಯಲಾಗಿದೆ.

ಆಹ್ವಾನ ಪತ್ರದಲ್ಲಿ ಸಭೆಯ ಅಜೆಂಡಾದ ಬಗ್ಗೆ ವಿವರವಿಲ್ಲವೆಂಬುದು ಸಭೆಯನ್ನು ಬಹಿಷ್ಕರಿಸಿದವರ ವಾದವಾಗಿದೆ. ಕಾಂಗ್ರೆಸ್ (ಐ) ಟಿಯುಜೆಎಸ್ ಮತ್ತು ಟಿಎಸ್‌ಪಿ ಪ್ರತಿನಿಧಿಗಳು ಪ್ರದೇಶ ಕಾಂಗ್ರೆಸ್ ಸಮಿತಿ ಮುಖಂಡ ಮಜುಂದಾರ್ ನೇತೃತ್ವದಲ್ಲಿ ಸಭಾತ್ಯಾಗ ಮಾಡಿ ಸಭೆಯನ್ನು ಬಹಿಷ್ಕರಿಸಿದರು.

ಅದಾದ ಸ್ವಲ್ಪ ಹೊತ್ತಿನಲ್ಲಿ ಒಬ್ಬ ಪ್ರತಿ ನಿಧಿ ಮಾತನಾಡುವಂತೆ ಬಿಜೆಪಿ ನಿಯೋಗಕ್ಕೆ ಉಪಮುಖ್ಯಮಂತ್ರಿ ಮನವಿ ಮಾಡಿದಾಗ ಬಿಜೆಪಿ ನಿಯೊಗದವರು ಸಭಾತ್ಯಾಗ ಮಾಡಿದರು.

ಇಡೀ ದೇಶವನ್ನು ಆಂತಕದ ಮಡುವಿಗೆ ತಳ್ಳಿರುವ ತ್ರಿಪುರಾದ ಉಗ್ರಗಾಮಿಗಳ ದುಷ್ಕೃತ್ಯಗಳ ಬಗ್ಗೆ ರಾಷ್ಟ್ರೀಯ ಜವಬ್ದಾರಿ ಯುತ ಪಕ್ಷಗಳು ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಎಷ್ಟು ಕಾಳಜಿ ಇದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ವಾಸ್ತವವಾಗಿ ಎಡರಂಗ ಸರ್ಕಾರಕ್ಕೆ ಅಪಕೀರ್ತಿ ಬರುವಂತಾಗಲು ಇಂಥ ಹೇಯ ಕೃತ್ಯಗಳು ನಡೆಯುತ್ತಲೇ ಇರಬೇಕೆಂಬುದು ಅವುಗಳ ಅಂತರಿಕ ಬಯಕೆಯಾಗಿದೆ ಎನ್ನು ವುದು ಸ್ಪಷ್ಟವಾಗಿದೆ.

ಮುಖ್ಯಮಂತ್ರಿ ದಶರಥ ದೇಬ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ದೇಬ್, ಉಪಮುಖ್ಯಮಂತ್ರಿ ವೈದ್ಯನಾಥ ಮಜುಂದಾರ್ ಮತ್ತು ಗೃಹ ಮಂತ್ರಿ ಸಮೀರ್ ಚೌಧರಿ ಅಲ್ಲದೆ ಒಂಭತ್ತು ರಾಜ ಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಮಾತನಾಡಿದರು.

ಹಿತಚಿಂತಕರಿಗೆ ಮನವಿ

ಈಗಿನ ಬಿಕ್ಕಟ್ಟನ್ನು ಎದುರಿಸಲು ನೆರ ವಾಗುವಂತೆ ತ್ರಿಪುರಾದ ಎಲ್ಲಾ ಹಿತ ಚಿಂತಕರು ಒಗ್ಗಟ್ಟಾಗಿ ಮುಂದೆ ಬರುವಂತೆ ಮುಖ್ಯಮಂತ್ರಿ ದೇಬ್‌ಮನವಿ ಮಾಡಿದ್ದಾರೆ.

ತ್ರಿಪುರಾದಲ್ಲಿ ಚಟುವಟಿಕೆ ನಡೆಸು ತ್ತಿರುವ ಉಗ್ರಗಾಮಿ ಸಂಘಟನೆಗಳಾದ ಎನ್‌ಎಲ್‌ಎಫ್‌ಟಿ, ಎಟಿಟಿಎಫ್ ಮತ್ತು ಟಿಆರ್‌ಎಗಳನ್ನು ನಿಷೇಧಿಸುವ ಪ್ರಸ್ತಾವ ನೆಗಳನ್ನು ಕೇಂದ್ರ ಸರಕಾರಕ್ಕೆ ಕಳಿಸಲಾಗಿದೆ.

ಐಡಿಪಿಎಲ್ ಕಾರ್ಮಿಕರ ಬಂಧನ

ಇಂಡಿಯನ್ ಡ್ರಗ್ಸ್‌ಅಂಡ್ ಫಾರ್ಮಾ ಸುಟಿಕಲ್ಸ್ ಸಂಸ್ಥೆಯ (ಐಡಿ ಪಿಎಲ್) ನೂರಕ್ಕೂ ಹೆಚ್ಚು ಕಾರ್ಮಿಕರನ್ನು ಫೆಬ್ರವರಿ 24ರಂದು ನವದೆಹಲಿಯಲ್ಲಿ ಬಂಧಿಸ ಲಾಯಿತು.

ದೇಶದ ವಿವಿಧ ಭಾಗಗಳಿಂದ ಬಂದಿದ್ದ ಕಾರ್ಮಿಕರು ಸಂಸ್ಥೆಯನ್ನು ಪುನ ರಾರಂಭಿಸುವಂತೆ ಒತ್ತಾಯಿಸಿ ರಸಾಯನಿಕ ಸಚಿವ ಖಾತೆಯ ಮಂದೆ ಧರಣಿ ನಡೆಸು ತ್ತಿದ್ದಾಗ ಅವರನ್ನು ಬಂಧಿಸ ಲಾಯಿತು.

ಐಡಿಪಿಎಲ್‌ನ ಎಲ್ಲಾ ಸ್ಥಾನಗಳಲ್ಲಿ ಉತ್ಪಾದನೆಯನ್ನು ಸರಕಾರ ನಿಲ್ಲಿಸಿದೆ. ಹಾಗೂ ಜನವರಿಯಿಂದ ನೌಕರರ ಸಂಬಳವನ್ನು ತಡೆಹಿಡಿದಿದೆ.

ಸಿಐಟಿಯು ನಾಯಕ ಪಿ.ಕೆ .ಗಂಗೂಲಿ ಮೊದಲಾದವರು ನೇತೃತ್ವ ವಹಿಸಿದ್ದರು.

ಬಂಧಿತ ಕಾರ್ಮಿಕರನ್ನು ಎರಡು ಗಂಟೆ ನಂತರ ಬಿಡುಗಡೆ ಮಾಡ ಲಾಯಿತು.

ಚಿತ್ರದುರ್ಗ ಜಿಲ್ಲಾ ವಾರ್ತಾ ಪತ್ರ

-ಎ.ಎಸ್.ಮೂರ್ತಿ

ಜನ ಜಾಗೃತಿ ಸಭೆ

ಕೇಂದ್ರ ರಾಜ್ಯ ಸರ್ಕಾರಗಳು ಜನ ಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಾಳಿರುವ ನಿರ್ಲಕ್ಷ್ಯ ಧೋರಣೆಯನ್ನು ಪ್ರತಿಭಟಿಸಿ, ದುಡಿಯುವ ಜನರ ಪರವಾದ ನೀತಿಗಳನ್ನು ಜಾರಿಗೊಳಿಸಲು ಒತ್ತಾಯಿಸಿ ಕಾಂ.ಎ.ಎಸ್.ಮೂರ್ತಿಯವರ ಅಧ್ಯಕ್ಷತೆ ಯಲ್ಲಿ 25.1 97 ರಂದು ದಾವಣಗೆರೆ ಸ್ಕೌಟ್ ಭವನದಲ್ಲಿ ಸಿ.ಪಿ.ಐ.(ಎಂ) ಪಕ್ಷದ ಜನಜಾಗೃತಿ ಸಭೆಯನ್ನು ಏರ್ಪಡಿಸಲಾಗಿತ್ತು. ಕಾಂ. ನಿತ್ಯಾನಂದ ಸ್ವಾಮಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

30.1.97ರ ರ್‍ಯಾಲಿ

ಹರಿಹರ ದಾವಣಗೆರೆಯಿಂದ ಸುಮಾರು 50 ಜನ ಪ್ರತಿನಿಧಿಗಳು ರೈಲಿನಲ್ಲಿ ಪ್ರಯಾಣಿಸಿ ಹುಬ್ಬಳ್ಳಿಯಲ್ಲಿನ ಸಿ.ಪಿ.ಎಂ ನ ಬೃಹತ್ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿ, ಕಾಂ.. ಸುನಿಲ್ ಧೂಪ್ಪಾರವರ ಭಾಷಣದಿಂದ ಪ್ರಭಾವಿತರಾದರು.

ಕಾರ್ಮಿಕರ ಪ್ರತಿಭಟನೆ

ಬೆಂಗಳೂರ ಬಳಿಯ ಹೆಜ್ಜಾಲದಲ್ಲಿ 3.2.97 ರಂದು ನಡೆದ ಪೋಲೀಸ್ ಗೋಲಿ ಬಾರ್ ವಿರುದ್ಧ 4.2.97ನಡೆದ ಪ್ರತಿಭಟನಾ ರ್‍ಯಾಲಿ ಹರಿಹರದ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯಿಂದ ತಹಸಿಲ್ದಾರ್ ಕಛೇರಿಗೆ ತೆರಳಿ, ಕೂಡಲೇ ವಿ.ಜೆ.ಕೆ.ನಾಯರ್ ಮತ್ತಿತರರನ್ನು ಬಿಡುಗಡೆ ಮಾಡಿ ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಗ್ರಾಮ ಪಂಚಾಯತ್ ನೌಕರರ ಜಿಲ್ಲಾ ಸಮ್ಮೇಳನ

ಫೆ.8ರಂದು ದಾವಣಗೆರೆಯ ಆರ್.ಎಚ್ ಮಿನಿವೃತ್ತದಲ್ಲಿ ಗ್ರಾ.ಪಂ. ನೌಕರರ ಚಿತ್ರದುರ್ಗ ಜಿಲ್ಲಾ ಸಮ್ಮೇಳನ ನಡೆಯಿತು. ಕಾಂ ಸಿ.ಆರ್.ಭಟ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. 24.2. 97ರ ಬೆಂಗಳೂರು ಚಲೋ ಬಗ್ಗೆ ಚರ್ಚಿಸಿ ಅದನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು.

ತರಬೇತಿ ಶಿಬಿರ

ದಾವಣಗೆರೆಯಲ್ಲಿ ಎಸ್‌ಎಫ್‌ಐ ಡಿವೈಎಫ್‌ಐನಿಂದ ಒಂದುವರೆ ತಿಂಗಳ ಕಾಲ ಎಫ್‌ಡಿಸಿ ಮತ್ತು ಎಸ್‌ಡಿಸಿ ಅಭ್ಯರ್ಥಿ ಗಳಿಗೆ ಉಚಿತ ತರಬೇತಿ ಶಿಬಿರವನ್ನು ನಡೆಸಲಾಯಿತು. ಸುಮಾರು 400 ಜನ ತರಬೇತಿಯ ಪ್ರಯೋಜನ ಪಡೆದರು. ಈ ಶಿಬಿರದ ನಂತರ ಯುವಕರು ಹಾಗೂ ಯುವತಿಯರ ಪ್ರತ್ಯೇಕ ಡಿವೈಎಫ್‌ಐ ಘಟಕಗಳನ್ನು ರಚಿಸಲಾಯಿತು.

ವೇತನ ಆಯೋಗದ ತಾರತಮ್ಯಗಳು

ಕೇಂದ್ರ ಸರ್ಕಾರದ ಐದನೇ ವೇತನ ಆಯೋಗದಲ್ಲಿನ ಕೊರತೆಗಳು, ತಾರತಮ್ಯ ಗಳು, ಖಾಸಗೀಕರಣದ ಸೂಚನೆಗಳನ್ನು, ಇತರೆ ಪ್ರತಿಗಾಮಿ ಧೋರಣೆಗಳನ್ನು ಪ್ರತಿಭಟಿಸಿ ಚಿತ್ರದುರ್ಗ ಸಿ.ಐ.ಟಿ.ಯು ಜಿಲ್ಲಾ ಸಮಿತಿ 17.2.97 ರಂದು ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆ ಮಾಡಿತು.

'ಐಕ್ಯರಂಗ' ಓದುಗರ ವೇದಿಕೆ

ದಾವಣಗೆರೆಯ ಸುಮಾರು 15 ಜನ ವಿಮಾ ನೌಕರರು ಸೇರಿ 'ಐಕ್ಯರಂಗ' ಓದುಗರ ವೇದಿಕೆಯನ್ನು ಇತ್ತೀಚೆಗೆ ಸ್ಥಾಪಿಸಿಕೊಂಡು ಪ್ರತಿ ತಿಂಗಳೂ ನಿಯಮಾನುಸಾರ ಸಭೆಸೇರಿ ರಾಜಕೀಯ ಜಾಗೃತಿ ವೃದ್ದಿಸಿ ಕೊಳ್ಳುವಲ್ಲಿ ಪಿ. ವಿಶ್ವನಾಥಯ್ಯರವರ ಮಾರ್ಗದರ್ಶನದಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ.

ಗ್ರಾಮ ಪಂಚಾಯತಿ ನೌಕರರ ಸಮಾವೇಶ

ಶ್ರೀನಿವಾಸಪುರ: ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಗ್ರಾಮ ಪಂಚಾ ಯತಿ ನೌಕರರ ಸಮಾವೇಶವು ಫೆಬ್ರವರಿ 16ರಂದು ಪುರಭವನದಲ್ಲಿ ನಡೆಯಿತು. ಈ ಸಮಾವೇಶವು ಮುಂಬರುವ ಪಂಚಾಯ್ತಿ ನೌಕರರ ಹೋರಾಟವನ್ನು ಯಶಸ್ವಿ ಗೊಳಿಸಲು ತೀರ್ಮಾನಿಸಿದೆ. ನಂತರ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರು:ಪಿ.ವಿ.ವಿಶ್ವನಾಥ ರೆಡ್ಡಿ, ಉಪಾಧ್ಯಕ್ಷರುಗಳಾಗಿ-ಶ್ರೀನಿವಾಸ ಸಂತಗಿ, ಎಂ.ಕೃಷ್ಣ, ಗೌರವಾಧ್ಯಕ್ಷರಾಗಿ-ವಿ.ನಾಗಪ್ಪ, ಕಾರ್ಯದರ್ಶಿಯಾಗಿ-ಅಡ್ಡಗಲ್ ನಾರಾಯಣಸ್ವಾಮಿ, ಸಹಕಾರ್ಯದರ್ಶಿ ಗಳಾಗಿ -ಬಿ.ಎನ್. ಗೋಪಾಲಕೃಷ್ಣ, ಮುರುಳಿ ಮೋಹನ್, ಎಂ.ವೆಂಕಟೇಶಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಆರ್. ಸೂರ್ಯನಾರಾಯಣ ಆಯ್ಕೆಯಾದರು.

ದಕ್ಷಿಣ ಕೊರಿಯಾವನ್ನು ಅಲುಗಾಡಿಸಿರುವ ಸಾಲ ಹಗರಣ

"ನಮ್ಮ ಸಮಾಜದಲ್ಲಿ ಭ್ರಷ್ಟಾಚಾರ, ವ್ಯಾಪಾರ ಮತ್ತು ರಾಜಕೀಯದ ನಡುವಿನ ಶಾಮೀಲು ಬಹಳ ಆಳವಾಗಿದೆ ಎಂಬ ಆಘಾತಕಾರಿ ಅಂಶವನ್ನು ಇದು ತೋರಿದೆ" ಇದು ದಕ್ಷಿಣ ಕೊರಿಯಾದ ಅಧ್ಯಕ್ಷ ಕಿಮ್ ಯಂಗ್‌ಸಾಮ್‌ರ ತಪ್ಪೊಪ್ಪಿಗೆ. ಇತ್ತೀಚೆಗೆ ದಕ್ಷಿಣ ಕೊರಿಯಾದ ರಾಜಕೀಯವನ್ನು ಅಲುಗಾಡಿಸಿದ ಸಾಲ ಹಗರಣದ ಬಗ್ಗೆ ದೇಶದ ಕ್ಷಮೆ ಯಾಚಿಸಿದ ರಾಷ್ಟ್ರವ್ಯಾಪಿ ಪ್ರವಾಸ ಭಾಷಣದಲ್ಲಿನ ಒಂದು ಮಾತಿದು.

ಹಾನ್‌ಬೋ ಸ್ಟೀಲ್ ಕಂಪನಿ ದಕ್ಷಿಣ ಕೊರಿಯಾದ ಎರಡನೇ ಅತಿದೊಡ್ಡ ಉಕ್ಕು ಕಂಪನಿ. ಈ ಕಂಪನಿಗೆ ಸಾಲ ಕೊಡಿಸುವಲ್ಲಿ ಲಂಚ ಪಡೆದ ಆಪಾದನೆ ಅಧ್ಯಕ್ಷರ ನಾಲ್ವರು ನಿಕಟವರ್ತಿಗಳು ಹಾಗೂ ಅವರ ಮಗನ ಮೇಲಿದೆ.

ಈ ಕಂಪನಿ ದಿವಾಳಿಯಾಗಿದ್ದು ಈ ಸಂಬಂಧ ದಕ್ಷಿಣ ಕೊರಿಯಾದ ಸರಕಾರೀ ವಕೀಲರು ಹತ್ತು ಜನರ ಮೇಲೆ ಆಪಾದನೆ ಹಾಕಿದ್ದಾರೆ. ಗೃಹ ಮಂತ್ರಿ ಕಿಮ್‌ವೋ ಸುಕ್ ಕಳೆದ ವಾರವೇ ರಾಜೀನಾಮೆ ನೀಡಿದರು. ಕೊರಿಯಾ ಫಸ್ಟ್ ಬ್ಯಾಂಕ್‌ನ ಮಾಜೀ ಅಧ್ಯಕ್ಷ ಕೂಡಾ ಆಪಾದಿತರಲ್ಲಿ ಒಬ್ಬರು. ಅಧ್ಯಕ್ಷ ಸಾಮ್‌ರವರು ಅಧಿಕಾರಕ್ಕೆ ಬರುವಲ್ಲಿ ನೆರವಾದ ಗುಂಪಿನ ಇಬ್ಬರು ಪ್ರಮುಖ ವ್ಯಕ್ತಿಗಳ ಮೇಲೂ ಲಂಚದ ಆಪಾದನೆಯಿದೆ.

ಇನ್ನೂ ಒಂದು ವರ್ಷದ ಆಡಳಿತ ಅವಧಿ ಇರುವ ದಕ್ಷಿಣ ಕೊರಿಯಾದ ಅಧ್ಯಕ್ಷರಿಗೆ ಪ್ರಧಾನ ಮಂತ್ರಿ ಮತ್ತು ಇತರ ಎಲ್ಲಾ ಮಂತ್ರಿಗಳು ತಮ್ಮ ರಾಜೀನಾಮೆ ನೀಡುವುದಾಗಿಯೂ, ಅಧ್ಯಕ್ಷರು ಸಾರ್ವಜನಿಕರ ವಿಶ್ವಾಸ ಗಳಿಸಲು ಸೂಕ್ತ ಬದಲಾವಣೆ ತರಲು ಇದಕ್ಕೆ ಅವಕಾಶವಾಗುವುದು ಎಂದು ಹೇಳಲಾಗಿದೆ. ಆದರೆ ರಾಜಕೀಯ ಮತ್ತು ವ್ಯಾಪಾರದ ನಡುವಿನ ಭ್ರಷ್ಟಾಚಾರದ ನಂಟನ್ನು ಇದು ಅಳಿಸಿ ಹಾಕುತ್ತದೆಯೇ ಎಂಬುದು ದಕ್ಷಿಣ ಕೊರಿಯನ್ನರ ಪ್ರಶ್ನೆ.

ಲೋಕಸಂಚಾರ



ಶರತ್‌ಚಂದ್ರ

ಜಪಾನಿನ ಸ್ಥಳೀಯ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಮುನ್ನಡೆ

ಹತ್ತು ಲಕ್ಷ ಜನಸಂಖ್ಯೆಯ ಜಪಾನಿನ ಕಿಪಕ್ಯೂಸು ನಗರದ ಅಸೆಂಬ್ಲಿ ಚುನಾವಣೆಗಳಲ್ಲಿ ಜಪಾನೀ ಕಮ್ಯುನಿಸ್ಟ್ ಪಕ್ಷ 2ನೇ ಸ್ಥಾನ ಗಳಿಸಿದೆ. ಈ ಪಕ್ಷದ ಮತಗಳಿಗೆ 12.72% ದಿಂದ 16.10% ಕ್ಕೇರಿದೆ. ಲೇಬರ್‌ಡೆಮೊಕ್ರೆಟಿಕ್ ಪಾರ್ಟಿ 16 ಸ್ಥಾನಗಳನ್ನು ಪಡೆದು ಮೊದಲ ಸ್ಥಾನ ಪಡೆದಿದೆ. ಜಪಾನೀ ಕಮ್ಯುನಿಸ್ಟ್ ಪಕ್ಷ 10 ಸ್ಥಾನಗಳನ್ನು ಪಡೆದು ಎರಡನೇ ಸ್ಥಾನ ಪಡೆದಿದೆ. ಕಳೆದ ಬಾರಿಗಿಂತ ಒಂದು ಸ್ಥಾನ ಹೆಚ್ಚು ಪಡೆದಿದೆ. ಕಳೆದ ಬಾರಿ 9 ಸ್ಥಾನ ಪಡೆದಿದ್ದ ಸೋಶಲ್ ಡೆಮಾಕ್ರೆಟಿಕ್ ಪಕ್ಷದ ಬಲ 3 ಕ್ಕಿಳಿದಿದೆ. ದೊಡ್ಡ ಕಟ್ಟಡ ಕಂಪನಿಗಳ ಹಿತಾಸಕ್ತಿ ಗಳನ್ನಷ್ಟೇ ಈಡೇರಿಸುತ್ತಿದ್ದ ನೀತಿಗಳನ್ನು ಕೊನೆಗೊಳಿಸಬೇಕೆಂದು ನಗರದ ಆಡಳಿತ ದಲ್ಲಿ ನಿಜವಾಗಿಯೂ ನಾಗರೀಕ ಹಿತಾಸಕ್ತಿ ಗಳನ್ನು ಈಡೇರಿಸುವಂತಾಗಬೇಕೆಂದು ಜಪಾನೀ ಕಮ್ಯುನಿಸ್ಟ್ ಪಕ್ಷ ಈ ಚುನಾವಣೆ ಗಳಲ್ಲಿ ಕರೆ ನೀಡಿತ್ತು. ಇಬರಾಕಿ ನಗರದ ಅಸೆಂಬ್ಲಿಯ ಚುನಾವಣೆಗಳಲ್ಲಿ ಜಪಾನೀ ಕಮ್ಯುನಿಸ್ಟ್ ಪಕ್ಷ ಸ್ಪರ್ಧಿಸಿದ್ದ ಎಲ್ಲಾ 5 ಸ್ಥಾನಗಳಲ್ಲಿ ಜಯಗಳಿಸಿದೆ. ಇಲ್ಲಿ ಒಟ್ಟು ಸ್ಥಾನಗಳು 36

ಮತ್ತೊಂದು ನಗರ ಕುರಶಿಕಿ ಅಸೆಂಬ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಲ್ಲಾ 4 ಕಮ್ಯುನಿಸ್ಟರು ಜಯಗಳಿಸಿದ್ದಾರೆ. ಇಲ್ಲಿ ಒಟ್ಟುಸ್ಥಾನಗಳು 48. ಕಳೆದ ಬಾರಿ ಕಮ್ಯುನಿಸ್ಟ್ ಪಕ್ಷ 3 ಸ್ಥಾನಗಳನ್ನು ಪಡೆದಿತ್ತು.

ಪೆರು: ಬಂಡಾಯಗಾರರೊಂದಿಗೆ ಮಾತುಕತೆ

ರಾಜಧಾನಿ ಲಿಮಾದಲ್ಲಿ ಎರಡು ತಿಂಗಳ ಹಿಂದೆ ಅಂದರೆ ಡಿಸೆಂಬರ್ 17 ರಂದು ಜಪಾನೀ ರಾಯಭಾರಿ ಕಛೇರಿಯನ್ನು ಕೈವಶ ಮಾಡಿಕೊಂಡಿರುವ ತುಪಾಕ್ ಲಿಮಾರು ಸಂಘಟನೆಯ ಮುಖಂಡರೊಂದಿಗೆ ಕೊನೆಗೂ ಪೆರುವಿನ ಆಳರಸರು ಮಾತುಕತೆ ನಡೆಸಬೇಕಾಗಿ ಬಂದಿದೆ.

ಫೆಬ್ರವರಿ 11 ರಂದು ತುಪಾಕ್ ಲಿಮಾರು ಕ್ರಾಂತಿಕಾರಿ ಸಂಘಟನೆ (ಎಂಆರ್‌ಟಿಎ) ದ ಉನ್ನತ ಮುಖಂಡ ನೆಸ್ಟರ್ ಸೆರ್ಪಾ ಕಾರ್ತೋಲಿಯವರ ಪರವಾಗಿ ಅವರ ನಿಕಟವರ್ತಿ ರೋಲಿ ರೋಜಾತ್ ಪೆರುವಿನ ಶಿಕ್ಷಣ ಮಂತ್ರಿ ಡೊಮಿಂಗೋ ಫಾಲೆರ್ಮೊ ಜತೆ ವ್ಯಾಪಕ ಮಾತುಕತೆ ನಡೆಸಿದರು. ಈ ಮಾತುಕತೆ ಮೂರು ದಿನ ನಡೆಯಿತು.

ನಂತರ ಫೆಬ್ರವರಿ 20ರಂದು ಸ್ವತಃ ನೆಸ್ತರ ಕಾರ್ತೋಲಿನಿಯವರೇ ಪೆರು ಸರಕಾರದ ಪ್ರತಿನಿಧಿ ಪಾಲೆರ್ಮೊ ಜತೆ ಮೂರುವರೆ ಗಂಟೆ ಕಾಲ ಮಾತುಕತೆ ನಡೆಸಿದರು. ನಾಲ್ಕು ಮಂದಿಯಿರುವ ಅಂತರ್ರಾಷ್ಟ್ರೀಯ ಆಯೋಗವೊಂದರ ಮಧ್ಯಸ್ಥಿಕೆಯಲ್ಲಿ ನಡೆದ ಈ ಮಾತುಕತೆ ರಚನಾತ್ಮಕವಾಗಿತ್ತು ಎಂದು ಈ ಆಯೋಗದ ಸದಸ್ಯರಲ್ಲೊಬ್ಬರಾದ ಕೆನಡಾದ ರಾಯಭಾರಿ ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

ಆದರೆ ಜೈಲಿಗೆ ತಳ್ಳಲ್ಪಟ್ಟಿರುವ ತಮ್ಮ ಸುಮಾರು 400 ಸಂಗಾತಿಗಳನ್ನು ಬಿಡುಗಡೆ ಮಾಡಬೇಕೆಂದು ತುಪಾಕ್ ಲಿಮಾರುನ ಮುಖ್ಯ ಬೇಡಿಕೆಯ ಬಗ್ಗೆ ಚರ್ಚಿಸಲು ಅಧ್ಯಕ್ಷ ಫುಜಿಮಾರಿ ಇನ್ನೂ ನಿರಾಕರಿಸುತ್ತಿದ್ದಾರೆಂದು ವರದಿಯಾಗಿದೆ. ಆದರೆ ತುಪಾಕ್ ಲಿಮಾರು ಈ ಬೇಡಿಕೆ ಈಡೇರಲೇಬೇಕು, ಸರಕಾರ ಈ ಬೇಡಿಕೆಯನ್ನು ಒಪ್ಪುವವರೆಗೂ ಕಾಯುವಷ್ಟು ಸಮಯ ತಮಗಿದೆ ಎಂದು ಹೇಳಿದೆ.

ಡಿಸೆಂಬರ್ 17 ರಂದು ನೂರಕ್ಕೂ ಹೆಚ್ಚು ಮಂದಿಯನ್ನು ಜಪಾನೀ ರಾಯಭಾರಿ ಕಚೇರಿಯಲ್ಲಿ ಈ ಸಂಘಟನೆ ಒತ್ತೆಯಾಳುಗಳನ್ನಾಗಿ ಮಾಡಿತ್ತು. ಆ ನಂತರ ಹಲವರನ್ನು ಬಿಡುಗಡೆ ಮಾಡಿ ಈಗ 72 ಒತ್ತೆಯಾಳುಗಳು ತುಪಾಕ್ ಲಿಮಾರ ವಶದಲ್ಲಿದ್ದಾರೆ. ಇವರೆಲ್ಲಾ ಪ್ರತಿಷ್ಠಿತ ವ್ಯಕ್ತಿಗಳು. ಜಪಾನಿನ ಹಾಗೂ ಬೊಲಿವಿಯಾದ ರಾಯಭಾರಿಗಳು, ಪೆರುವಿನ ಮಂತ್ರಿಗಳು, ಜಪಾನಿ ಮತ್ತು ಸ್ಥಳೀಯ ಬಂಡವಾಳಿಗರು ಮತ್ತು ಅಧ್ಯಕ್ಷ ಫುಜಿಮೊರಿಯಾ ಸೋದರ ಪೆಟ್ರೊ ಫುಜಿಮೊರಿ.

ಜಪಾನಿ ರಾಯಭಾರಿ ಕಚೇರಿ ಇನ್ನೂ ತುಪಾಕ್ ಲಿಮಾರ ಬಂಡಾಯಗಾರರ ವಶದಲ್ಲಿದ್ದು ಜಪಾನೀ ಪ್ರಧಾನಮಂತ್ರಿಯ ಒತ್ತಡದಿಂದಾಗಿ ಶಾಂತಿಯುತ ಮಾತುಕತೆಗೆ ಅಧ್ಯಕ್ಷ ಫುಜಿಮೊರಿ ಎದುರಾಗಬೇಕಾಗಿ ಬಂದಿದೆ.

ಶೇಖ್ ಮುಜಿಬುರ್ ಬಾಂಗ್ಲಾದೇಶದ ರಾಷ್ಟ್ರಪಿತ

ಬಾಂಗ್ಲಾದೇಶದ ಸಂಸತ್ತು ಕಳೆದ ವಾರ ಆ ದೇಶದ ಸಂಸ್ಥಾಪಕ ಅಧ್ಯಕ್ಷ ಶೇಖ್ ಮುಜೀಬುರ್ ರಹಮಾನ್‌ರವರನ್ನು ಸಾಂವಿಧಾನಿಕವಾಗಿ ರಾಷ್ಟ್ರಪಿತ ಎಂದು ಗೌರವಿಸಲು ನಿರ್ಧರಿಸಿತು. ಆಳುವ ಅವಾಮಿ ಲೀಗ್ ಪಕ್ಷ ಇದನ್ನು ಸ್ವಾಗತಿಸಿದರೆ, ವಿರೋಧ ಪಕ್ಷ ಬಾಂಗ್ಲಾದೇಶ ನ್ಯಾಶನಲಿಸ್ಟ್ ಪಾರ್ಟಿ ಇದನ್ನು ಬಲವಾಗಿ ವಿರೋಧಿಸಿ ಸದನದಲ್ಲಿ ಗಲಭೆ ಎಬ್ಬಿಸಿತು.

ಶೇಖ್ ಮುಜಿಬುರ್ ಪಾಕಿಸ್ತಾನದಿಂದ ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದರು. 1971ರ ಸ್ವಾತಂತ್ರ್ಯ ಯುದ್ಧ ಯಶಸ್ವಿಯಾದ ನಂತರ ಅವರು ಸ್ವತಂತ್ರ ಬಾಂಗ್ಲಾದೇಶದ ಜಾತ್ಯಾತೀತ ಪ್ರಜಾ ಪ್ರಭುತ್ವದ ನೇತೃತ್ವ ವಹಿಸಿದರು. ನಾಲ್ಕು ವರ್ಷಗಳ ನಂತರ ಬಲಪಂಥೀಯ ಕ್ಷಿಪ್ರ ಕ್ರಾಂತಿಯಲ್ಲಿ ಅವರ ಕೊಲೆಯಾಯಿತು. ಅದರಿಂದಾಗಿ ಬಾಂಗ್ಲಾದೇಶದ ರಾಜಕೀಯದಲ್ಲಿ ಕೋಮುವಾದಿಗಳ ಹಿಡಿತ ಹೆಚ್ಚಾಯಿತು.

ನಾಟೋ: ರಶ್ಯಾದ ಮೇಲೆ ಒತ್ತಡ

ಅಮೆರಿಕಾ ನೇತೃತ್ವದ ನಾಟೋ ಮಿಲಿಟರಿ ಸಂಧಿಯಲ್ಲಿ ಹಿಂದಿನ ವಾರ್ಸಾ ಸಂಧಿಯಲ್ಲಿದ್ದ ಹಾಗೂ ರಶ್ಯಾದ ನೆರೆಯಲ್ಲಿರುವ ದೇಶಗಳನ್ನು ಸೇರಿಸುವ ಬಗ್ಗೆ ರಶ್ಯಾದ ವಿರೋಧವನ್ನು ತಗ್ಗಿಸಲು ಅಮೆರಿಕಾದ ಒತ್ತಡ ಮುಂದುವರಿಯುತ್ತಿದೆ. ಕಳೆದ ವಾರ ಅಮೆರಿಕಾದ ವಿದೇಶಾಂಗ ಮಂತ್ರಿ ಶ್ರೀಮತಿ ಮ್ಯಾಡೆಲಿನ್ ಆರ್‌ಟ್ರೈಲ್ ಇದಕ್ಕಾಗಿ ಮಾಸ್ಕೋಗೆ ಹೋಗಿದ್ದರು. ಅಲ್ಲಿ ಸರಕಾರದ ಮಂತ್ರಿಗಳು ಸಂಸತ್ತಿನ ಪ್ರತಿನಿಧಿಗಳಿಂದ ನಾಟೋ ವಿಸ್ತರಣೆಗೆ ಬಲವಾದ ಪ್ರತಿಭಟನೆ ವ್ಯಕ್ತಗೊಂಡಿತು.

ಆದರೆ ಸುಮಾರು ಎರಡು ತಿಂಗಳ ನಂತರ ಮೊದಲ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿರುವ ಅಧ್ಯಕ್ಷ ಬೊರಿಸ್ ಯೆಲ್ಸಿನ್ ಒಂದೆಡೆ ರಶ್ಯಾ ತನ್ನ ಪ್ರತಿರೋಧವನ್ನು ಮುಂದುವರಿಸುವುದಾಗಿ ಹೇಳಿದರೂ "ಒಂದು ರಾಜಿಗೆ ಬರುವ ಬಗ್ಗೆ ಯೋಚಿಸಲು ನಾವು ಒಪ್ಪಿದ್ದೇವೆ. ಮಾರ್ಚ್ 20-21 ರಂದು ಅಧ್ಯಕ್ಷ ಕ್ಲಿಂಟನ್‌ನೊಂದಿಗೆ ಶೃಂಗ ಸಭೆಯಲ್ಲಿ ಈ ರಾಜಿಯನ್ನು ಕಂಡುಕೊಳ್ಳುವರು" ಎಂದಿದ್ದಾರೆಂದೂ ವರದಿಯಾಗಿದೆ.

ಆದರೆ ಯೆಲ್ಸಿನ್ ವಿದೇಶಾಂಗ ಸಲಹೆಗಾರ ದಿಮಿತ್ರಿ ಕುಯರಿಕೀವ್ "ನಾಟೋ ವಿಸ್ತರಣೆಯ ಉದ್ದೇಶ ನಮಗೆ ವಿರುದ್ಧವಾಗಿರದಿದ್ದರೂ ಪಾಶ್ಚಿಮಾತ್ಯ ಮಿಲಿಟರಿ ಯಂತ್ರ ನಮ್ಮ ಗಡಿಯೊಳಗೆ ಹತ್ತಿರವಾಗಲು ಅವಕಾಶ ನೀಡಿ ನಮ್ಮ ಭದ್ರತೆಗೆ ತೊಂದರೆಯಾಗುತ್ತದೆ" ಎಂದಿದ್ದಾರೆ.

ಇದಕ್ಕೆ ಮೊದಲು ಅಧ್ಯಕ್ಷರ ಪತ್ರಿಕಾ ಕಾರ್ಯದರ್ಶಿ ಸರ್ಜ್ಯೆ ಯಸ್ತರ್ಝುಬ್‌ಸ್ಕಿ ಯಂತೂ ಇದು ರಶ್ಯಾದ ಭದ್ರತೆಗೆ ನೇರ ಬೆದರಿಕೆಯೆಂದಿದ್ದರು. ರಶ್ಯಾದ ಭದ್ರತಾ ಸಮಿತಿಯ ಉಪ ಕಾರ್ಯದರ್ಶಿ ಬೋರಿಸ್ ಬೆರಿಝೋವ್‌ಸ್ಕಿ "ನಾಟೋದ ಯೋಜನೆ ರಶ್ಯಾಕ್ಕೆ ಮಾತ್ರವಲ್ಲ, ಪಾಶ್ಚಿಮಾತ್ಯರಿಗೂ ಅಪಾಯಕಾರಿ ಏಕೆಂದರೆ ಇದು ಯುರೋಪವನ್ನು ಮತ್ತೆ ಇಬ್ಭಾಗ ಮಾಡುತ್ತದೆ" ಎಂದಿದ್ದಾರೆ.

"ನಾಟೋ ಶೀತಲ ಯುದ್ಧದ ಒಂದು ಸಾಧನ. ನಾವು ಈಗಷ್ಟೇ ಶೀತಲ ಯುದ್ಧವಿಲ್ಲದೆ ಬದುಕಲು ಕಂಡಿದ್ದೇವೆ" ಎಂದು ಸಂಸತ್ತಿನ ಕೆಳ ಸದನದ ಸ್ಪೀಕರ್ ರಶ್ಯಾ ಕಮ್ಯುನಿಸ್ಟ್ ಪಕ್ಷದ ಕೆನ್ನಾಡಿ ಸೆಲೆಝ್ನು ಯೋವ್ ತಮ್ಮನ್ನು ಭೇಟಿಯಾಗಿದ್ದ ಇಟಲಿಯ ವಿದೇಶಾಂಗ ಮಂತ್ರಿಗಳಿಗೆ ಈ ಬಗ್ಗೆ ತಮ್ಮ ವಿರೋಧ ವ್ಯಕ್ತಪಡಿಸುತ್ತಾ ಹೇಳಿದ್ದಾರೆ.

ಕೊಲ್ಲಿ ಯುದ್ಧದಲ್ಲಿ ಯುರೇನಿಯಂ ಬುಲೆಟ್‌ಗಳನ್ನು ಬಳಸಲಾಗಿತ್ತೇ?

ಕೊಲ್ಲಿ ಯುದ್ಧ ಅಮೆರಿಕಾದ ಮಟ್ಟಿಗೆ ಹೊಸ ಹೊಸ ಅಸ್ತ್ರಗಳ ಅಮಾನುಷ ಪರೀಕ್ಷೆಗೆ ಸಿಕ್ಕ 'ಸುವರ್ಣಾವಕಾಶ' ವೇನೋ ಎಂಬ ಸಂದೇಹ ದಿನೇ ದಿನೇ ಬಲವಾಗುತ್ತಿದೆ. ಇರಾಕಿನ ನಾಗರೀಕರು, ಮಕ್ಕಳು ಅಮೆರಿಕನ್ ಮಿಲಿಟರಿ ಶಾಹಿಗಳ ಪ್ರಯೋಗ ಪಶುಗಳಾದಂತೆ ಕಾಣುತ್ತದೆ. ಇತ್ತೀಚೆಗೆ ಪ್ರಕಟ ವಾಗಿರುವ ಒಂದು ಸುದ್ದಿಯ ಪ್ರಕಾರ ಈಗ ಅಮೆರಿಕನ್ ಸೈನಿಕ ರಲ್ಲೂ ವ್ಯಾಪಕವಾಗಿ ಕಾಣುತ್ತಿರುವ "ಕೊಲ್ಲಿ ಯುದ್ಧದ ಕಾಯಿಲೆ" ಗೆ ಅಮೆರಿಕಾ ಮತ್ತು ಬ್ರಿಟನ್ನಿನ ಟ್ಯಾಂಕರುಗಳು 1991 ರ ಆ ಯುದ್ಧದಲ್ಲಿ ಇರಾಕಿನ ವಾಹನಗಳ ಮೇಲೆ ಧಾಳಿ ಮಾಡಲು ಅಣು ಶಕ್ತಿ ಉತ್ಪಾದನೆ ಯಲ್ಲಿ ಬಳಸುವ ಯುರೇನಿಯಂನ ಬುಲೆಟ್ ಗಳೇ ಕಾರಣ. ಬ್ರಿಟನ್ನಿನ ಅಣುಶಕ್ತಿ ಆಯೋಗದ ಗುಪ್ತ ವರದಿ ಇದನ್ನು ದೃಢ ಪಡಿಸಿದೆಯೆಂದು "ಬಾಗ್ದಾದ್ ಅಬ್ಸರ್ವರ್" ಪತ್ರಿಕೆ ಹೇಳಿದೆ.

1991 ರಲ್ಲಿ ಇರಾಕಿನಲ್ಲಿ ಹಲವಾರು ಪರಿಹಾರ ಕಾರ್ಯಾಚರಣೆಗಳನ್ನು ಏರ್ಪಡಿಸಿದ್ದ ಜರ್ಮನ್ ಪ್ರೊಫೆಸರ್ ಸೀಗ್‌ವಾರ್ಟ್ ಹೋರ್ಸ್ಟ್ -ಗುಂತರ್ ಯುದ್ಧಪ್ರದೇಶದಲ್ಲಿ ಇದನ್ನು ಪತ್ತೆ ಹಚ್ಚಿರುವುದಾಗಿಯೂ ಸೈನಿಕರ ವಿಚಿತ್ರ ಕಾಯಿಲೆಗೆ ಹಾಗೂ ಹಲವಾರು ಇರಾಕಿ ಮಕ್ಕಳ ಸಾವಿಗೆ ಇದೇ ಕಾರಣ ಎಂದುಅವರು ಹೇಳಿರುವುದಾಗಿಯೂ ವರದಿಯಾಗಿದೆ.

ಅಮೆರಿಕನ್ ಸೈನಿಕರ ಕೊಲ್ಲಿಯುದ್ಧದ ವಿಚಿತ್ರ ಕಾಯಿಲೆ ಮಿತ್ರಪಡೆಗಳು ಇರಾಕಿನ ಜೈವಿಕ ಮತ್ತು ರಾಸಾಯನಿಕ ಶಸ್ತ್ರಾಸ್ತ್ರಗಳ ಕಾರ್ಖಾನೆಗಳಿಗೆ ಮಾಡಿದ ಧಾಳಿಗಳಿಂದಾಗಿ ಉಂಟಾದ ಕಾಯಿಲೆ ಎಂಬ ಅಮೆರಿಕನ್ ಸೈನಿಕ ಕೇಂದ್ರ ಪೆಂಟಗಾನ್‌ನ ಸಬೂಬನ್ನು ಈಗ ಯಾರೂ ನಂಬುತ್ತಿಲ್ಲ. ಅಮೆರಿಕಾದ ಅಧ್ಯಕ್ಷರು ನೇಮಿಸಿದ್ದ ಸಮಿತಿ ಕೂಡಾ ಇದಕ್ಕೆ ಸವಾಲು ಹಾಕಿದೆ.

ಖಾಸಗೀಕರಣದ ವಿರುದ್ಧ ಹೋರಾಟದ ಅಂಗವಾಗಿ ವಿಮಾ ನೌಕರರಿಂದ ಸೇವಾ ಪಕ್ಷಾಚರಣೆ

ವಿಮಾ ವಲಯದ ಖಾಸಗೀಕರಣದ ವಿರುದ್ಧ ಕಳೆದ ಆರು ವರ್ಷಗಳಿಂದ ನಡೆಸಿದ ತಮ್ಮ ಧೀಮಂತ ಹೋರಾಟದಿಂದಾಗಿ ಇದುವರೆಗೆ ಖಾಸಗೀಕರಣದ ದುರಂತವನ್ನು ತಡೆ ಹಿಡಿಯಲು ಸಫಲರಾಗಿರುವ ವಿಮಾ ನೌಕರರು ಕರ್ನಾಟಕದಲ್ಲಿ ಈ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ಹಾಗೂ ವ್ಯಾಪಕಗೊಳಿಸಲು ನಿರ್ಧರಿಸಿದ್ದಾರೆ. ಕರ್ನಾಟಕದಲಿರುವ ಎಲ್‌ಐಸಿ ಯ ಆರು ವಿಭಾಗಗಳ ಹಾಗೂ ಜಿಐಸಿಯಲ್ಲಿನ ನೌಕರರ ಸಂಘಟನೆಗಳ ಮುಖಂಡರು ಈ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಿದ್ದು ಅದರ ಭಾಗವಾಗಿ ಎಲ್‌ಐಸಿ ಯ ಬೆಂಗಳೂರು ವಿಭಾಗದಲ್ಲಿ ಫೆಬ್ರವರಿ 18 ರಂದು "ಪಾಲಿಸಿದಾರರ ಸೇವಾ ಪಕ್ಷಾಚರಣೆ" ಆರಂಭಿಸಿದರು.

ಬೆಂಗಳೂರು ವಿಭಾಗದ ಜಯನಗರ ಹಾಗೂ ಯಶವಂತಪುರ ಶಾಖೆಗಳಲ್ಲಿ ಇದನ್ನು ತೀವ್ರರೀತಿಯಲ್ಲಿ ಆಚರಿಸಲು ನಿರ್ಧರಿಸಲಾಗಿದ್ದು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪ್ರಾಧ್ಯಾಪಕ ಬಿ.ಕೆ.ಚಂದ್ರಶೇಖರ್ ಅವರು ಜಯನಗರ ಶಾಖೆಯಲ್ಲಿ ಹಾಗೂ ಪಾಲಿಸಿದಾರರ ಮಂಡಳಿಯ ಸದಸ್ಯ ಹಾಗೂ ಕರ್ನಾಟಕ ರೆಡ್‌ಕ್ರಾಸ್ ರಕ್ತ ಬ್ಯಾಂಕಿನ ಅಧ್ಯಕ್ಷ ರಾಜು ಚಂದ್ರಶೇಖರ್ ಅವರು ಯಶವಂತಪುರ ಶಾಖೆಯಲ್ಲಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಿಮಾ ವಲಯವನ್ನು ಖಾಸಗಿಯವರಿಗೆ ಹಾಗೂ ವಿದೇಶಿಯರಿಗೆ ತೆರೆಯುವ ದುರುದ್ದೇಶದಿಂದಲೇ ಎಲ್‌ಐಸಿ ಸೇವೆಯ ಬಗ್ಗೆ ನಡೆಸಲಾಗುತ್ತಿರುವ ಅಪಪ್ರಚಾರಕ್ಕೆ ತಕ್ಕ ಉತ್ತರ ನೀಡಲು ನೌಕರರ ಸಂಘ ಪಾಲಿಸಿದಾರರಿಗಾಗಿ ಈ ಕಾರ್ಯಕ್ರಮವನ್ನು ಆರಂಭಿಸಿರುವುದು ಬಹಳ ಸೂಕ್ತ ಎಂದು ಪ್ರೊ. ಚಂದ್ರಶೇಖರ್ ವಿಮಾ ನೌಕರರು ಮತ್ತು ಪಾಲಿಸಿದಾರರು ಜತೆಗೂಡಿದರೆ ಖಾಸಗೀಕರಣದ ಬೆದರಿಕೆಯನ್ನು ಹಿಮ್ಮೆಟ್ಟಿಸಬಹುದು ಎಂದರು.

ಮ್ಯಾನೇಜ್‌ಮೆಂಟ್ ಮಾಡಬೇಕಾದ ಕೆಲಸವನ್ನು ಕಾರ್ಮಿಕ ಸಂಘವೇ ಕೈಗೆತ್ತಿಕೊಂಡಿರುವುದು ಒಂದು ವಿಶಿಷ್ಟ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದ ರಾಜು ಚಂದ್ರಶೇಖರ್ ಅವರು ಈ ಕಾರ್ಯಕ್ರಮಕ್ಕೆ ಸಕಲ ಯಶಸ್ಸು ಕೋರಿದರು.

ಬೆಂಗಳೂರು ವಿಭಾಗದ ಮುಖ್ಯಸ್ಥರಾದ ಆರ್.ಕೆ.ಮಿಶ್ರಾ ಹಾಗೂ ಮಾರುಕಟ್ಟೆ ವ್ಯವಸ್ಥಾಪಕರಾದ ಪಿ.ವಿ.ಉಪಾಧ್ಯರವರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಮಿಶ್ರಾರವರು ಸಂಘದ ಮುತುವರ್ಜಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಎಲ್‌ಐಸಿಯ ಸೇವಾ ಮಟ್ಟ ವಿದೇಶೀ ವಿಮಾ ಕಂಪನಿಗಳಿಗಿಂತ ಉತ್ತಮವಾಗಿದೆ ಎಂದು ಅಂಕಿ-ಸಂಖ್ಯೆಗಳ ಮೇಲೆ ಸಮರ್ಥಿಸಿಕೊಂಡರು. ಉಪಾಧ್ಯರವರು 'ವಿಮಾ ವಲಯದ ಖಾಸಗೀಕರಣದ ವಿರುದ್ಧ ಹೋರಾಟ ಪ್ರತಿಯೊಬ್ಬ ನೌಕರನ ಮೇಜಿನಿಂದ ಆರಂಭವಾಗುತ್ತದೆ' ಎಂದರು ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದಶಿ ಎನ್.ಎಂಸುಂದರಂರವರ ಉದ್ಗಾರವನ್ನು ನೆನಪಿಸುತ್ತಾ ಸಂಘ ಈ ಉದಾತ್ತ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿರುವುದನ್ನು ಶ್ಲಾಘಿಸುತ್ತಾ ಎಲ್ಲಾ ನೌಕರ ವಿಭಾಗಗಳು ಒಟ್ಟಾದರೆ ಖಾಸಗೀಕರಣದ ಬೆದರಿಕೆಯನ್ನುಹಿಮ್ಮೆಟ್ಟಿಸಬಹುದೆಂಬ ಅಭಿಪ್ರಾಯಕ್ಕೆ ದನಿಗೂಡಿಸಿದರು.

ಈ ಪಕ್ಷಾಚರಣೆಯ ಅವಧಿಯಲ್ಲಿ ದಾವೆಗಳ ಇತ್ಯರ್ಥ, ಸಾಲ, ಸರೆಂಡರ್ ಮೌಲ್ಯ, ನಾಮ ನಿರ್ದೇಶನ, ಬದಲಾವಣೆಗಳು ಇತ್ಯಾದಿಗಳನ್ನು ಕುರಿತಂತೆ ಪಾಲಿಸಿದಾರರ ಸಮಸ್ಯೆಗಳನ್ನು ಪರಿಹರಿಸಲು ಆದ್ಯತೆ ನೀಡಲಾಗುವುದು ಎಂದು ಸಂಘದ ಪ್ರಕಟಣೆ ತಿಳಿಸಿದೆ. ದೊಡ್ಡ ಕಾರ್ಖಾನೆಗಳ ಆವರಣದಲ್ಲೇ ಸೇವೆಯನ್ನು ಒದಗಿಸಲು ವಿಶೇಷ ಸೇವಾ ಸೌಕರ್ಯಗಳನ್ನು ತೆರೆಯಲಾಗುವುದೆಂದೂ ಸಂಘದ ವಕ್ತಾರರು ತಿಳಿಸಿದ್ದಾರೆ. ಬೆಂಗಳೂರಿನ ಮೈಕೋ ಕಾರ್ಖಾನೆಯ ಆವರಣದಲ್ಲಿ ತೆರೆದ ವಿಶೇಷ ಕೌಂಟರ್‌ಗೆ ಮೈಕೋ ನೌಕರರಿಂದ ಅತ್ಯುತ್ತಮ ಸ್ಪಂದನ ದೊರೆತಿದ್ದು ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆಯೆಂದು ವರದಿಯಾಗಿದೆ.

ಸಿಪಿಐ(ಎಂ) ಶಾಸಕರ ಪ್ರಶ್ನೆಗಳು - ದೊರೆತ ಉತ್ತರಗಳು

ಸಿಪಿಐ(ಎಂ) ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರು ಪ್ರಸಕ್ತ ವಿಧಾನ ಸಭಾ ಅಧಿವೇಶನದಲ್ಲಿ ವಿವಿಧ ವಿಭಾಗಗಳ ಸಚಿವರುಗಳಿಗೆ ಕಳಿಸಿದ ಪ್ರಶ್ನೆಗಳಿಗೆ ದೊರೆತಉತ್ತರಗಳಲ್ಲಿ ಕೆಲವನ್ನು ಈ ಅಂಕಣದಲ್ಲಿ ಪ್ರಕಟಿಸುತ್ತಿದ್ದೇವೆ. ವಿವಿಧ ರಂಗಗಳ ಆಗುಹೋಗುಗಳ, ಬೆಳವಣಿಗೆಗಳ ಬಗ್ಗೆ ದುಡಿಯುವ ಜನರ ಪರವಾಗಿ ಕೇಳಿದ ಪ್ರಶ್ನೆಗಳಿಗೆ ದೊರೆತ ಮಾಹಿತಿಗಳು

ಬಸ್ ಮಾರ್ಗಗಳು

□ ರಾಜ್ಯದಲ್ಲಿ 1454 ಬಸ್ಸು ಮಾರ್ಗಗಳನ್ನು ರಾಷ್ಟ್ರೀಕರಿಸಲಾಗಿದೆ. ಈ ಸಂಖ್ಯೆಯಲ್ಲಿ ಬೆಂಗಳೂರು ನಗರ ಮತ್ತು ಹುಬ್ಬಳ್ಳಿ ನಗರದ ಸಂಖ್ಯೆ ಸೇರಿಲ್ಲ. ರಾಷ್ಟ್ರೀಕರಣಗೊಂಡ ವಲಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಮಾರ್ಗಗಳನ್ನು ಹೆಚ್ಚಿಸಿ 9384 ಶೆಡ್ಯೂಲ್‌ಗಳಲ್ಲಿ 10286 ಬಸ್ಸುಗಳನ್ನು ಓಡಿಸುತ್ತಿದೆ.

□ ಖಾಸಗಿಯವರು ಬಸ್ ಓಡಿಸುತ್ತಿರುವ ಮಾರ್ಗಗಳು 5265. ಇವುಗಳಲ್ಲಿ ಅವರು ಓಡಿಸುತ್ತಿರುವ ಬಸ್ಸುಗಳ ಸಂಖ್ಯೆ ಕೂಡ ಅಷ್ಟೇ-5265

□ ಸರಕಾರಿ ಮತ್ತು ಖಾಸಗಿ ವಾಹನಗಳಲ್ಲಿ ಸರಾಸರಿ ಪ್ರಯಾಣ ದರಗಳಲ್ಲಿ ಅಂತರವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸಾರಿಗೆ ಸಚಿವರು ರಾಜ್ಯ ರಸ್ತೆ ಸಾರಿಗೆ ಉದ್ಯಮದ ಪ್ರಯಾಣ ದರ 10% ರಷ್ಟು ಕಡಿಮೆ ಇದೆ ಎಂದು ಹೇಳಿದರು.

□ ಪ್ರಯಾಣಿಕರ ಹಿತದೃಷ್ಟಿಯಿಂದ ಸರಕಾರಿ ಉದ್ಯಮ ನೀಡುತ್ತಿರುವ ಅನುಕೂಲಗಳು ಮತ್ತು ಸೇವೆ ಹಾಗೂ ಖಾಸಗಿ ಉದ್ಯಮಗಳು ನೀಡುತ್ತಿರುವ ಅನುಕೂಲಗಳು ಹಾಗೂ ಸೇವೆಗಳ ಬಗ್ಗೆ ಸರಕಾರ ಅಧ್ಯಯನ ನಡೆಸಿದೆಯೇ ಎಂಬ ಪ್ರಶ್ನೆಗೆ ಸಿಕ್ಕ ಉತ್ತರ -"ಇಲ್ಲ. ಆದರೆ ಸಾರಿಗೆ ಸಮೀಕ್ಷೆ ನಡೆಸಲು ಇತ್ತೀಚೆಗೆ ಸರಕಾರದಿಂದ ನಿರ್ದೇಶನ ನೀಡಲಾಗಿದೆ"

ವೈದ್ಯಕೀಯ ಕಾಲೇಜುಗಳು

□ ರಾಜ್ಯದಲ್ಲಿ ಒಟ್ಟು 18 ವೈದ್ಯಕೀಯ ಕಾಲೇಜುಗಳಿದ್ದು 2 ಸರಕಾರಿ ಕಾಲೇಜುಗಳು (ಬೆಂಗಳೂರು, ಮೈಸೂರುಗಳಲ್ಲಿ), 2 ಸರಕಾರಿ ಸ್ವಾಯತ್ತ ಸಂಸ್ಥೆಗಳು ನಡೆಸುತ್ತಿರುವ ಕಾಲೇಜುಗಳು (ಬಳ್ಳಾರಿ ಮತ್ತು ಹುಬ್ಬಳ್ಳಿ) ಹಾಗೂ ಉಳಿದ14 ಖಾಸಗಿ ಕಾಲೇಜುಗಳು (ಬೆಂಗಳೂರು-4, ಬಿಜಾಪುರ-2, ತುಮಕೂರು, ಬೆಳ್ಳೂರು, ದಾವಣಗೆರೆ, ಬೆಳಗಾವಿ, ಕೋಲಾರ, ಗುಲ್ಬರ್ಗಾ, ಮೈಸೂರು, ಮಣಿಪಾಲಗಳಲ್ಲಿ ತಲಾ ಒಂದು)

□ ವೈದ್ಯಕೀಯ ಕಾಲೇಜಿಗೆ ಹೊಂದಿಕೊಂಡಿರುವ ಆಸ್ಪತ್ರೆಯಲ್ಲಿ ಪ್ರತಿ ವಿದ್ಯಾರ್ಥಿಗೆ ಏಳು ಹಾಸಿಗೆಗಳಿರಬೇಕು, ಕಾಲೇಜಿನಲ್ಲಿ ಪ್ರತಿ ವಿಭಾಗದಲ್ಲಿ ಹತ್ತು ವಿದ್ಯಾರ್ಥಿಗಳಿಗೆ ಒಬ್ಬರಂತೆ ಬೋಧಕರು ಇರಬೇಕೆಂದು ಭಾರತೀಯ ವೈದ್ಯಕೀಯ ಪರಿಷತ್ತಿನ(ಐಎಂಸಿ) ನಿಯಮಗಳು ಕರ್ನಾಟಕದಲ್ಲಿ 18 ರಲ್ಲಿ 13 ಕಾಲೇಜುಗಳು ಈ ನಿಯಮಗಳಿಗೆ ಪೂರ್ಣವಾಗಿ ಅನುಗುಣವಾಗಿಲ್ಲ, ಈ 13 ರಲ್ಲಿ ಎರಡು ಸರಕಾರಿ ಕಾಲೇಜುಗಳು ಮತ್ತು ಎರಡು ಸರಕಾರಿ ಸ್ವಾಯತ್ತ ಸಂಸ್ಥೆಗಳ ಕಾಲೇಜುಗಳೂ ಸೇರಿವೆ.

ಬಿಜಾಪುರದಲ್ಲಿ ಕುಡಿಯುವ ನೀರು

□ ಬಿಜಾಪುರದಲ್ಲಿ 7 ದಿನಕ್ಕೊಮ್ಮೆ ಒಂದೂವರೆ ಗಂಟೆ ಮಾತ್ರ ಕುಡಿಯುವ ನೀರು ಬಿಡುತ್ತಿರುವುದು ನಿಜವೇ ಎಂಬ ಪ್ರಶ್ನೆಗೆ ನಗರಾಭಿವೃದ್ಧಿ ಸಚಿವರ ಉತ್ತರ "ನಾಲ್ಕು ದಿನಗಳಿಗೊಮ್ಮೆ ಎರಡರಿಂದ ಎರಡೂವರೆ ಗಂಟೆ"

□ ವಿದ್ಯುತ್ ಅಭಾವ, ನೀರು ಸರಬರಾಜು ವ್ಯವಸ್ಥೆ ಹಳೆಯದಾಗಿರುವುದರಿಂದ, ಜಲ ಸಂಗ್ರಹಾಲಯಗಳ ಒಟ್ಟು ಸಾಮರ್ಥ್ಯ ಕಡಿಮೆಯಾಗಿರುವುದರಿಂದ ನಾಲ್ಕು ದಿನಗಳಿಗೊಮ್ಮೆ 273 ಲೀಟರ್ ಸರಬರಾಜು ಮಾಡಲಾಗುತ್ತದಂತೆ.

□ ಬಿಜಾಪುರ ನಗರ ಸಭೆ ನೀರು ಪೂರೈಕೆಗಾಗಿ ವಿದ್ಯುತ್ ಲೈನ್ ಹಾಕಲು 17 ಲಕ್ಷ ರೂ. ನೀಡಬೇಕಾಗಿದ್ದು, ಇನ್ನೂ ನೀಡಿಲ್ಲ ಎಂದು ಸಚಿವರು ಉತ್ತರಿಸಿದ್ದಾರೆ.

ಸಕ್ಕರೆ ಕಾರ್ಖಾನೆಗಳು

ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳ ಸಂಖ್ಯೆ 30. ಇವುಗಳಲ್ಲಿ 17 ಸರಕಾರಿ ಸಕ್ಕರೆ ಕಾರ್ಖಾನೆಗಳು. ಅತಿ ಹೆಚ್ಚು ಅಂದರೆ 7 ಸಕ್ಕರೆ ಕಾರ್ಖಾನೆಗಳು ಬೆಳಗಾವಿಯಲ್ಲಿವೆ. ಚಿತ್ರದುರ್ಗ, ಬಳ್ಳಾರಿ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ತಲಾ 3, ಬಿಜಾಪುರ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ 2, ಬೀದರ್, ದ.ಕ, ಹಾಸನ, ಕೋಲಾರ, ಧಾರವಾಡ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ತಲಾ ಒಂದು ಇವೆ.

□ ಪ್ರಸಕ್ತ ಸಾಲಿನಲ್ಲಿ ರಾಜ್ಯದ ರೈತರು ಬೆಳೆಯುವ ಕಬ್ಬಿನ ಪ್ರಮಾಣ 198 ಲಕ್ಷ ಟನ್ ಎಂದು ಅಂದಾಜು ಮಾಡಲಾಗಿದೆ.

□ ಪ್ರಸಕ್ತ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ರೈತರಿಂದ ಕಬ್ಬನ್ನು ಪಡೆಯಲು ನಿರಾಕರಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಸಚಿವರ ಉತರ - "ಇಲ"

ಅಕ್ರಮ ಭೂಮಿಯ ಸಕ್ರಮ

□ ರಾಜ್ಯದಲ್ಲಿ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ಸಮಿತಿಗಳ ಮುಂದೆ ಬಂದ ಅರ್ಜಿಗಳ ಸಂಖ್ಯೆ 1086826. ವಿಲೇವಾರಿಯಾಗಿರುವ ಅರ್ಜಿಗಳ ಸಂಖ್ಯೆ 724381. ಇವುಗಳಲ್ಲಿ 1994 ನೇ ಸಾಲಿನವರೆಗೆ 625425 ವಿಲೇವಾರಿಯಾದರೆ ನಂತರ 99256 ವಿಲೇವಾರಿಯಾಗಿದೆ. ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ 3621415 ಅಂದರೆ 33%.

□ ಈ ಸಮಿತಿಗಳು ನಿಷ್ಕ್ರಿಯವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಸಚಿವರ ಉತ್ತರ-"ಇಲ್ಲ". ಆದ್ದರಿಂದ ಅದನ್ನು ಕ್ರಿಯಾಶೀಲಗೊಳಿಸುವ "ಪ್ರಶ್ನೆ ಉದ್ಭವಿಸುವುದಿಲ್ಲ"!

ಜವಳಿ ಗಿರಣಿಗಳು

□ ರಾಜ್ಯದಲ್ಲಿರುವ ಒಟ್ಟು ಜವಳಿ ಗಿರಣಿಗಳು 64. ಬೆಂಗಳೂರು ಜಿಲ್ಲೆಯಲ್ಲಿ ಖಾಸಗೀ ವಲಯದಲ್ಲಿ 10, ಹಾಗೂ ಎನ್.ಟಿ.ಸಿ.ಯ ಎರಡು ಗಿರಣಿಗಳು, ಧಾರವಾಡ ಜಿಲ್ಲೆಯಲ್ಲಿ ಸಹಕಾರಿ ವಲಯದಲ್ಲಿ 10, ಖಾಸಗಿ ವಲಯದಲ್ಲಿ 3, ಮತ್ತು ರಾಜ್ಯ ಸರಕಾರಿ ಗಿರಣಿ 1, ಮೈಸೂರು ಜಿಲ್ಲೆಯಲ್ಲಿ 9 ಖಾಸಗಿ ಗಿರಣಿಗಳು, ಬೆಳಗಾವಿ ಜಿಲ್ಲೆಯಲ್ಲಿ ಸಹಕಾರಿ ವಲಯದಲ್ಲಿ 6, ಖಾಸಗಿ ವಲಯದಲ್ಲಿ 2, ಚಿತ್ರದುರ್ಗ ಜಿಲ್ಲೆಯಲ್ಲಿ 7 ಖಾಸಗಿ ಹಾಗೂ ಒಂದು ಎನ್.ಟಿ.ಸಿ. ಗಿರಣಿ, ಬಿಜಾಪುರ ಜಿಲ್ಲೆಯಲ್ಲಿ ಸಹಕಾರಿ ವಲಯದಲ್ಲಿ 4, ಬಳ್ಳಾರಿ ಜಿಲ್ಲೆಯಲ್ಲಿ ಖಾಸಗಿ ವಲಯದಲ್ಲಿ 3, ರಾಯಚೂರು ಜಿಲ್ಲೆಯಲ್ಲಿ 1 ಖಾಸಗಿ ವಲಯ ಹಾಗೂ 1 ಸಹಕಾರಿ ವಲಯದಲ್ಲಿ, ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಎನ್.ಟಿ.ಸಿ. ಗಿರಣಿ ಹಾಗೂ ಬೀದರ್ ಜಿಲ್ಲೆಯಲ್ಲಿ ಒಂದು ಖಾಸಗಿ ಗಿರಣಿ. ಒಟ್ಟಾಗಿ ಖಾಸಗಿ ವಲಯದಲ್ಲಿ 37, ಸಹಕಾರಿ ವಲಯದಲ್ಲಿ 22, ಎನ್.ಟಿ.ಸಿ. ಗಿರಣಿಗಳು 4 ಹಾಗೂ ರಾಜ್ಯ ಸರಕಾರದ್ದು ಒಂದು.

ಇವುಗಳಲ್ಲಿ ಬೆಳಗಾವಿಯಲ್ಲಿ, ಬಿಜಾಪುರದಲ್ಲಿ ಸ್ಥಾಪನೆಯಾಗಬೇಕಾದ ಸಹಕಾರಿ ಗಿರಣಿಗಳೂ ಸೇರಿವೆ.

□ ರಾಜ್ಯದಲ್ಲಿ ಒಟ್ಟು ಹತ್ತಿ ಉತ್ಪಾದನೆ 9 ಲಕ್ಷ ಬೇಲು. ಅತಿ ಹೆಚ್ಚು ಚಿಕ್ಕಮಗಳೂರಿನಲ್ಲಿ 2.04 ಲಕ್ಷ ಬೇಲು, ಬಿಜಾಪುರದಲ್ಲಿ 97 ಸಾವಿರ, ಬಳ್ಳಾರಿಯಲ್ಲಿ 91 ಸಾವಿರ ಬೇಲು.

□ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಹತ್ತಿ ಪ್ರಮಾಣಕ್ಕೆ ಈಗಿರುವ ಜವಳಿ ಗಿರಣಿಗಳು ಸಾಕಾಗುವುದಿಲ್ಲ ಎಂದು ,ಉತ್ತರಿಸಿದ ಜವಳಿ ಸಚಿವರು ರಾಜ್ಯದ ರೈತರ ಹಿತದೃಷ್ಟಿಯಿಂದ ಪ್ರತ್ಯೇಕ ಹತ್ತಿ ಮಂಡಳಿಯನ್ನು ರಚಿಸುವ ಉದ್ದೇಶ ಇದೆಯೇ ಎಂಬ ಪ್ರಶ್ನೆಗೆ ನೀಡಿದ ಉತ್ತರ "ಪರಿಶೀಲನೆಯಲ್ಲಿದೆ".

ರಾಜ್ಯದಲ್ಲಿ ಸರಕಾರಿ ಆಸ್ಪತ್ರೆಗಳು

□ ರಾಜ್ಯದಲ್ಲಿ ವಿವಿಧ ಹಂತದ ಆಸ್ಪತ್ರೆಗಳ ಒಟ್ಟು ಸಂಖ್ಯೆ 2372. ಇವುಗಳಲ್ಲಿ 35 ಜಿಲ್ಲಾ ಆಸ್ಪತ್ರೆಗಳು, 232 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಆಸ್ಪತ್ರೆಗಳು, 1503 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 596 ಪ್ರಾಥಮಿಕ ಆರೋಗ್ಯ ಘಟಕಗಳು.

□ ಇವುಗಳಲ್ಲಿ 179 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 37 ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ವೈದ್ಯರುಗಳಿಲ್ಲ.

□ ರಾಜ್ಯದಲ್ಲಿ 761 ವೈದ್ಯರ ಹುದ್ದೆಗಳು ಖಾಲಿ ಇವೆ. ಇವನ್ನು ಭರ್ತಿ ಮಾಡಲು ಏನು ಕ್ರಮ ಕೈಗೊಂಡಿದ್ದೀರಿ ಎಂಬ ಪ್ರಶ್ನೆಗೆ ಸಚಿವರ ಉತ್ತರ "ಕರ್ನಾಟಕ ಲೋಕ ಸೇವಾ ಆಯೋಗ 400 ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ. ಆಯ್ಕೆ ಪಟ್ಟಿ ಸರಕಾರಕ್ಕೆ ಬಂದ ಮೇಲೆ...". ಲೋಕ ಸೇವಾ ಆಯೋಗದಿಂದ ಅಂತಿಮ ಪಟ್ಟಿ ಬರುವವರೆಗೆ ಈ ಹುದ್ದೆಗಳು ಖಾಲಿ ಇರುತ್ತವೆಯಂತೆ.

ಬೆಂಗಳೂರಿನಲ್ಲಿ ಬೆಲೆ ಬಾಳುವ ಸರಕಾರಿ ಜಮೀನು ಕಬಳಿಕೆ

ಸಿಪಿಐ(ಎಂ) ವಿಧಾನ ಸಭಾ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿಯವರು ಬೆಂಗಳೂರು ನಗರ ಜಿಲ್ಲೆಯಲ್ಲಿ ಬೆಲೆ ಬಾಳುವ ಸರಕಾರಿ ಜಮೀನಿನ ಕಬಳಿಕೆ ನಡೆಯುತ್ತಿರುವುದನ್ನು ಕಂದಾಯ ಸಚಿವರ ಗಮನಕ್ಕೆ ತಂದಿದ್ದು, ಈ ಬಗ್ಗೆ ತನಿಖೆ ಮಾಡಿದಾಗ 103 ಪ್ರಕರಣಗಳು ಪತ್ತೆಯಾಗಿವೆ ಎಂದು ಸಚಿವರು ದೃಢಪಡಿಸಿದ್ದಾರೆ. ಈ ಪ್ರಕರಣಗಳಲ್ಲಿ ಒಟ್ಟು 1934 ಎಕ್ರೆಜಮೀನು ಕಬಳಿಕೆಯಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಕಂದಾಯ ಮಂತ್ರಿಗಳು ನೀಡಿರುವ ಉತ್ತರದ ಕೆಲವು ಅಂಶಗಳನ್ನು ಇಲ್ಲಿ ಕೊಡಲಾಗಿದೆ.

"ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅತ್ಯಂತ ಬೆಲೆ ಬಾಳುವ ಸರಕಾರಿ ಭೂಮಿ ಗಳಾದ ಗೋಮಾಳ, ಹುಲ್ಲುಬನಿ, ಖರಾಬು, ಕೆರೆಅಂಗಳ, ಗುಂಡುತೋಪು, ಸ್ಮಶಾನ ಮುಂತಾದ ಭೂಮಿಗಳಿಗೆ ಕೆಲವು ಆಸಕ್ತಿಯ ಕೆಳಮಟ್ಟದ ಕಂದಾಯ ನೌಕರರ ಸಹಾಯದಿಂದ ಹಾಗೂ ಅಕ್ರಮ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಸರಕಾರದ ಭೂಮಿಗಳನ್ನು ಇಂತಹ ಬೋಗಸ್ ದಾಖಲೆಗಳ ಸಹಾಯದಿಂದ ನೊಂದಣಿ, ಜಿಪಿಎ ಮುಖಾಂತರ ಅಕ್ರಮವಾಗಿ ಹೊಂದಿರುವುದನ್ನು ತಡೆಗಟ್ಟಲು ಹಾಗೂ ಇಂತಹ ಅಕ್ರಮ ದಾಖಲೆಗಳನ್ನುಪತ್ತೆ ಹಚ್ಚಿ ಭೂ ಕಂದಾಯದ ಕಾಯ್ದೆ 1964 ರ ಕಲಂ 136(3) ರಡಿಯಲ್ಲಿ ಅಕ್ರಮ ದಾಖಲೆಗಳನ್ನು ರದ್ದುಪಡಿಸಿ ಸರಕಾರದವಶಕ್ಕೆ ಪಡೆಯಲು ಒಂದು ಉಪ ವಿಭಾಗಾಧಿಕಾರಿಗಳ ಮಟ್ಟದ ಅಧಿಕಾರಿಗಳನ್ನೊಳಗೊಂಡ ಐದು ತನಿಖಾಧಿಕಾರಿಗಳ ತಂಡವನ್ನು ಪ್ರತಿ ತಾಲ್ಲೂಕುವಾರು ನೇಮಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿನ ಎಲ್ಲಾ ಸರಕಾರಿ ಭೂಮಿಗಳನ್ನು ಖುದ್ದು ಸ್ಥಳ ತನಿಖೆ ಮಾಡಿ ಅಕ್ರಮ ದಾಖಲಾತಿಗಳನ್ನು ಪತ್ತೆ ಹಚ್ಚಲು ಹಾಗೂ ಸಂಬಂಧಿಸಿದ ಬೋಗಸ್ ದಾಖಲೆಗಳನ್ನು ಹೊಂದಿದ್ದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲು ಈ ತನಿಖಾ ತಂಡಕ್ಕೆ ಅಧಿಕಾರ ನೀಡಲಾಗಿರುತ್ತದೆ.

ಅದರಂತೆ ಈವರೆಗೆ ಒಟ್ಟು 103 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, 1997ಜನವರಿ ಮಾಹೆಯ ಅಂತ್ಯದವರೆಗೆ ಸಾಧಿಸಿದ ಪ್ರಗತಿಯ ವಿವರ ಕೆಳಕಂಡಂತೆ ಇರುತ್ತದೆ".

ಅಕ್ರಮ ದಾಖಲಾತಿಗಳನ್ನು ರದ್ದುಪಡಿಸಿ ಸರಕಾರದ ವಶಕ್ಕೆ ಪಡೆಯಲಾದಂತಹ ಭೂಮಿಗಳನ್ನು ಸುವ್ಯವಸ್ಥಿತವಾಗಿ ಕಾಪಾಡಲು ಮತ್ತು ಇಂತಹ ಅಕ್ರಮ ದಾಖಲೆಗಳನ್ನು ಸೃಷ್ಟಿಸಲು ಕಾರಣರಾದ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಹಾಗೂ ಅಕ್ರಮ ದಾಖಲೆಗಳನ್ನು ಹೊಂದಿದ್ದ ವ್ಯಕ್ತಿಗಳ ವಿರುದ್ಧ ಭಾರತದ ದಂಡ ಸಂಹಿತೆ ಕಲಂ 463, 465, 470, 472 ರಿಂದ 477 ಅಡಿಯಲ್ಲಿ ಸಂಬಂಧಿಸಿದ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್ ರವರುಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ಅಲ್ಲದೆ ಜಿಲ್ಲೆಯಲ್ಲಿರುವ ಎಲ್ಲಾ ಉಪ ನೊಂದಣಾಧಿಕಾರಿಗಳಿಗೆ ಈವರೆಗೆ ಪತ್ತೆ ಹಚ್ಚಲಾದ ಇಂತಹ ಅಕ್ರಮ ದಾಖಲೆಗಳ ಆಧಾರದ ಮೇಲೆ ಯಾವುದೇ ನೊಂದಣಿ ಮಾಡಬಾರದೆಂದು ಹಾಗೂ ಈಗಾಗಲೇ ನೊಂದಣಿಯಾಗಿದ್ದಲ್ಲಿ ಅಂತಹ ನೊಂದಣಿ ಪತ್ರಗಳನ್ನು ರದ್ದುಪಡಿಸಲು ಜಿಲ್ಲಾ ನೊಂದಣಾಧಿಕಾರಿಗಳಿಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಸಹ ನಿರ್ದೇಶನ ನೀಡಲಾಗಿರುತ್ತದೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಭೂ ಕಬಳಿಕೆದಾರರು ಹಲವಾರು ರೀತಿಗಳಿಂದ ಕಾನೂನಿನ ಚೌಕಟ್ಟಿನೊಳಗೆ ಮತ್ತು ಈ ಚೌಕಟ್ಟಿನಿಂದ ಹೊರಗೂ ತಮ್ಮ ಸ್ವಾರ್ಥ ಸಾಧನೆಗಾಗಿ ಬೆಲೆ ಬಾಳುವ ಜಮೀನುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು ಅವುಗಳನ್ನು ಅಮಾಯಕರಿಗೆ ಮಾರಿ ಹಣ ಸಂಪಾದಿಸುವ ವಿಷಯವು ಸರಕಾರದ ಗಮನಕ್ಕೆ ಬಂದಿದ್ದು ಈ ವ್ಯವಹಾರಗಳಲ್ಲಿ ಕೆಲವು ಸರಕಾರಿ ನೌಕರರು ಶಾಮೀಲಾಗಿರುವಂತಹದು ಸಹ ಸರಕಾರ ಗಮನಿಸಿದ್ದು ಅಂತಹವರ ಮೇಲೆ ತೀವ್ರವಾದ ಕ್ರಮವನ್ನು ನಿರ್ದಾಕ್ಷಿಣ್ಯವಾಗಿ ಕೈ ಗೊಳ್ಳಲಾಗುತ್ತಿದೆ ಹಾಗೂ ಇಂತಹ ಪ್ರಕರಣಗಳು ಬರದಂತೆ ಎಚ್ಚರ ವಹಿಸಲು ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರುಗಳಿಗೂ ವೈಯುಕ್ತಿಕವಾಗಿ ಜವಾಬ್ದಾರಿ ನಿಗದಿಪಡಿಸಲಾಗಿದೆ. ತಪ್ಪಿತಸ್ಥ ನೌಕರರಾಗಲೀ ಅಥವಾ ಸಾರ್ವಜನಿಕರಾಗಲೀ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕ್ರಿಮಿನಲ್ ಮೊಕದ್ದಮೆ ಗಳನ್ನೊಳಗೊಂಡಂತೆ ಜರುಗಿಸಲಾಗುವುದು.

	ಸಂಖ್ಯೆ	ವಿಸ್ತೀರ್ಣ
1.ಜನವರಿ 1997 ರ ಅಂತ್ಯದವರೆಗೆ ಸರಕಾರಿ ಭೂಮಿಗಳಿಗೆ ಅಕ್ರಮ ದಾಖಲೆಗಳನ್ನು ಸೃಷ್ಟಿಸಿದ ಪ್ರಕರಣಗಳನ್ನು ಕಲಂ 136(3) ರಡಿ ದಾಖಲಿಸಿಕೊಂಡ ಒಟ್ಟು ಪ್ರಕರಣಗಳು	103	1934-00
2.ಮಾಹೆಯ ಅಂತ್ಯದವರೆಗೆ ಅಂತಿಮ ಆದೇಶ ನೀಡಿ ಅನಧಿಕೃತ ದಾಖಲೆಗಳನ್ನು ರದ್ದುಪಡಿಸಲಾದ ಪ್ರಕರಣಗಳು	54	1073-04
3.ಕಲಂ 2 ರಲ್ಲಿನ ಆದೇಶದ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು	13	567-38
4.ವಿಚಾರಣೆಗೆ ಬಾಕಿ ಇರುವ ಪ್ರಕರಣಗಳು	49	860-36

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯಂತೆ ಕೇಂದ್ರ ಸರಕಾರದ ವಿನಾಶಕಾರಿ ಆರ್ಥಿಕ ನೀತಿಗಳನ್ನುಬದಲಾಯಿಸಬೇಕೆಂದು ಒತ್ತಾಯಿಸಿ ಫೆಬ್ರವರಿ 25 ರಂದು ಬೆಂಗಳೂರಿನಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಪ್ರಧಾನ ಅಂಚೆ ಕಛೇರಿಯ ಮುಂದೆ ನಡೆಸಿದ [illegible]



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಾನು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು